
ಸಂಪುಟ 20 ಸಂಚಿಕೆ 28 ಜುಲೈ 5-11, 1999 ಬೆಲೆ ರೂ. 3.00

ದುಡಿವ ಜನರ ಪ್ರಾಣಮಿತ್ರ


ಐಕ್ಯರಂಗ



ಜನರ ಬವಣೆ ಮರೆತ ಸದನ



ಲೋಕಶಕ್ತಿ ಎಂಬ ಸೂಲಗಿತ್ತಿ



ಆಕಾಶದಿಂದ ಧರೆಗಿಳಿದ ರಂಭೆಯರು!

ಸುದ್ಧಿಗಳತ್ತ ಚಾನೆಲ್‌ಗಳ ಲಗ್ಗೆ

ಜನರ ಬವಣೆಗಳ ಮರೆತ ಸದನ

ಈಗ ನಡೆಯುತ್ತಿರುವ ವಿಧಾನ ಸಭೆಯ ಕಲಾಪಗಳ ಸ್ಥಿತಿ ಎಲ್ಲರನ್ನೂ ಚಿಂತೆಗೀಡುಮಾಡಿದೆ.

ವಿಧಾನ ಸಭೆಯ ಕೊನೆಯ ಅಧಿವೇಶನವು ಜೂನ್ ೨೩ ರಿಂದ ಜರುಗುತ್ತಿದ್ದರೂ ಜನತೆಯನ್ನು ಬಾಧಿಸುವ, ರಾಜ್ಯದ ಭವಿಷ್ಯತ್ತನ್ನು ರೂಪಿಸುವ ದಿಕ್ಕಿನಲ್ಲಿ ಯಾವುದೇ ಗಂಭೀರವಾದ ಚರ್ಚೆಗಳು ನಡೆಯದೇ ಇರುವುದು ಅತ್ಯಂತ ಕಳವಳಕಾರಿಯಾಗಿದೆ. ಮಾತ್ರವಲ್ಲ ಜನ ಪ್ರತಿನಿಧಿಗಳೆನಿಸಿಕೊಂಡ ಸಚಿವರು, ಶಾಸಕರು ದೊಡ್ಡ ಪ್ರಮಾಣದಲ್ಲಿ ಗೈರು ಹಾಜರಾಗುತ್ತಿದ್ದು, ಮಾಧ್ಯಮಗಳ ವರದಿಯಂತೆ ಒಮ್ಮೊಮ್ಮೆ ೨೨೪ ರಲ್ಲಿ ಕೇವಲ ೩೦ ಜನ ರಚಿಷ್ಟು ಶಾಸಕರು ಸದನದಲ್ಲಿದ್ದುದು ಬೆಳಕಿಗೆ ಬಂದಿದೆ. ಆಯಾ ಇಲಾಖೆಗಳ ಬೇಡಿಕೆ ಸಮಸ್ಯೆಗಳ ಬಗ್ಗೆ ಪ್ರಶ್ನೋತ್ತರ ಇರುವಾಗಲೇ ಉತ್ತರಿಸಬೇಕಾದ ಜವಾಬ್ದಾರಿಯುತ ಸಚಿವರು ಇರದೇ ಯಾರ್‍ಯಾರೋ ಮೂಲಕ ಉತ್ತರಗಳನ್ನು ಓದಿಸಿರುವುದು ಗಂಭೀರ ಲೋಪ ಸದನಕ್ಕೆ ಮಾಡಿದ ಅಪಮಾನ.

ಆರಂಭದಲ್ಲಿಯೇ ಮುಖ್ಯಮಂತ್ರಿಗಳು ೩-೪ ದಿನಗಳ ಹಾಜರಿರಲಿಲ್ಲ. ಗೃಹ ಇಲಾಖೆಯಂತಹ ಜ್ವಲಂತ ಪ್ರಶ್ನೆಗಳಿಗೆ ಸಂಸ್ಕೃತಿ ಸಚಿವರು ಉತ್ತರ ಹೇಳುವುದು, ಸ್ಥಿತಿ ಎಂತಹ ಹಂತ ತಲುಪಿದೆ ಎಂಬುದಕ್ಕೆ ಸೂಚಕವಾಗಿದೆ. ಮತ್ತು ಸರಕಾರದ ಬೇಜವಾಬ್ದಾರಿತನ ಬಯಲಾಗುತ್ತದೆ.

ಮೊದಮೊದಲು ಸದನಕ್ಕೆ ಶಾಸಕರುಗಳು ಬಂದವರೂ ಸಹ ಕಲಾಪಗಳಿಗೆ ಹಾಜರಾಗದೇ ಬೆಗಸಲೆಯಲ್ಲಿ ಸೇರುವುದು, ಕಾಲಹರಣ ಮಾಡುವುದು ವರದಿಯಾಗಿದೆ. ಚರ್ಚೆಯ ವಿಷಯ- ಯಾವ ಪಕ್ಷಗಳಿಗೆ ಹಾರಬಹುದು ಎಂಬುದು. ಇಂತಹ ಗೈರು ಹಾಜರಾತಿ ಮತ್ತು ಊಹಾ ಪೋಹಗಳಿಂದಾಗಿ ಚರ್ಚೆ ಮಾಡುವವರೇ ಇಲ್ಲದೇ ಕಲಾಪ ಮುಂದಕ್ಕೆ ಹಾಕುವುದಾಗಿ ಅಧ್ಯಕ್ಷರು ಪ್ರಕಟಿಸುವ ಮಟ್ಟ ತಲುಪಿದೆ ಆಡಳಿತ ಪಕ್ಷ, ವಿರೋಧ ಪಕ್ಷಗಳಾಗಿರುವ ಕಾಂಗ್ರೆಸ್, ಮತ್ತು ಬಿಜೆಪಿಗಳು ಬೇಜವಾಬ್ದಾರಿ ಖಂಡನೀಯ.

ಸಂಪಾದಕೀಯ

ರಾಜ್ಯದ'ಲಿ ರೋಸ್ ಈರುಳ್ಳಿ, ಮೆಣಸಿನಕಾಯಿ, ರೇಷ್ಮೆ ಬೆಳೆದ ರೈತರು ಬೆಲೆ ಮಾರುಕಟ್ಟೆ ಸಿಗದೇ ಕುಸಿದ ಬೆಲೆಗಳಿಂದ ತತ್ತರಿಸಿ ಕಣ್ಣೀರು ಇಡುತ್ತಿದ್ದಾರೆ. ಮಳೆಗಾಲ ಆರಂಭಗೊಂಡು ಬಿತ್ತನೆಯ ಕೆಲಸ ನಡೆದಿದೆ. ಆದರೆ ಕಳಪೆ ಬೀಜಗಳಿಂದಾಗಿ ಸಸಿ ನಾಟದೇ ಇರುವ ಕೃಷಿಕರು ಕಂಗಾಲಾಗಿದ್ದಾರೆ. ಇಂತಹ ಮಾರಾಟದ ಭ್ರಷ್ಟಜಾಲವೇ ಇದೆ. ಪೋಲೀಸ್ ಠಾಣೆಗಳಲ್ಲಿ ಜನಸಾಮಾನ್ಯರು, ದಬ್ಬಾಳಿಕೆ ಈಡಾಗುತ್ತಿದ್ದಾರೆ. ಜಮೀನುದಾರರೇ ಸ್ಥಾಪಿತ ಹಿತಾಸಕ್ತಿಗಳ ಹತ್ಯೆಗೆ ದುರ್ಬಲರು, ಬಲಿಯಾಗುತ್ತಿದ್ದಾರೆ.

ಪೋಲೀಸರನ್ನು ಬಳಸಿ ಮುಷ್ಕರ ಮುರಿಯಲಾಗುತ್ತಿದೆ. ಕೋಮುವಾದಿಗಳು, ಜಾತೀವಾದಿಗಳು ಹೊಸಪೇಟೆ- ಕುರುಗೋಡು ನಂತಹ ಪ್ರದೇಶಗಳಲ್ಲಿ ದ್ವೇಷದ ಕಿಚ್ಚು ಹಚ್ಚುತ್ತಿದ್ದಾರೆ. ಶಿಕ್ಷಣದ ವ್ಯಾಪಾರ ಲೂಟಿ ನಡೆದೇ ಇದೆ. ಕಡಲ ಕೊರೆತದಿಂದ ಕರಾವಳಿ ಜನ ಕಂಗಾಲಾಗಿದ್ದಾರೆ. ಬೆಲೆ ಏರಿಕೆ ಭಾಧೆ. ರೈತರು ಕೂಲಿಕಾರರು ದುಡಿಯುವ ವರ್ಗ ಮಹಿಳೆಯರಂತಹ ಜನರ ಸಂಕಟಗಳು ಒಂದೇ ಎರಡೇ. ಈ ಸಮಸ್ಯೆಗಳ ಬಗ್ಗೆ ಕಾಂಗ್ರೆಸ್, ಬಿಜೆಪಿ, ದಳದವರು ಚರ್ಚಿಸಲೇ ಇಲ್ಲ.

ಈಗಾಗಲೇ ಬಿಜೆಪಿಯ ಸಂಕಲ್ಪ ಯಾತ್ರೆ, ಕಾಂಗ್ರೆಸ್‌ನ ಪಾಂಚಜನ್ಯ ಯಾತ್ರೆಗಳಲ್ಲಿ ಜನರ ಯಾವ ಪ್ರಶ್ನೆಗಳನ್ನೂ ಎತ್ತಿ ಮಾತನಾಡಿಲ್ಲ. ಅವರೇ ಇಂದು ಸದನದಲ್ಲಿ ಆಕಳಿಸಿ ಹಾಸ್ಯ ಚಟಾಕಿ ಹಾರಿಸಿ, ಬೇಕೋ ಬೇಡವೋ ಎರಡು ಮಾತನಾಡಿ ಎದ್ದು ಹೋಗುವುದು, ಅವರೇ ಕೊಚ್ಚಿಕೊಳ್ಳುವ ಎಂತಹ ಸರಕಾರ ನೀಡಬಲ್ಲ ಎಂಬುದನ್ನು ಸ್ಪಷ್ಟ ಪಡಿಸುತ್ತದೆ. ಇಷ್ಟಲ್ಲದೆ ಈ ಬಲಪಂಥೀಯ ರಾಜಕೀಯ ಪಕ್ಷಗಳು ಜನರ ಬಗ್ಗೆ ಇಟ್ಟುಕೊಂಡಿರುವ ಹೀನ ವರ್ತನೆಯನ್ನು ತೋರಿಸುತ್ತಿದೆ. ಪೋಲೀಸರ ದಬ್ಬಾಳಿಕೆ, ಆಡಳಿತ ವರ್ಗದ ಕೈಗೊಂಬೆಗಳಾಗಿ ಅವರ ವರ್ತನೆ. ಕೊಳಚೆ ನೀವಾಸಿಗಳ ಬಗ್ಗೆ, ಜನರ ಸಮಸ್ಯೆಗಳ ಬಗ್ಗೆ ಮಾತನಾಡಿದ್ದು ಸಿಪಿಐ(ಎಂ) ಶಾಸಕ ಶ್ರೀರಾಮರೆಡ್ಡಿಯವರು ಮಾತ್ರ

ಕಾರ್ಗಿಲ್ ಯೋಧರಿಗೆ ಒಂದು ದಿನದ ಸಂಬಳ ಕೊಟ್ಟು ಮಹಾತ್ಯಾಗಿಗಳಂತೆ ಪೋಜು ನೀಡಿ, ಸಂಸದೀಯ ಪ್ರಜಾಪ್ರಭುತ್ವದ ಪಾತ್ರವನ್ನು ಗೌಣಗೊಳಿಸಬಯಸುವವರಿಗೆ ಜನತೆ ತಕ್ಕ ಉತ್ತರ ಹೇಳಬೇಕು.

ರಾಜ್ಯಸಭೆಯ ವಿಶೇಷ ಅಧಿವೇಶನ

ರಾಷ್ಟ್ರೀಯ ಮಹತ್ವದ ಪ್ರಶ್ನೆಯಲ್ಲಿ ಕುಂಟುನೆಪಗಳು ಬೇಡ

ಕಾರ್ಗಿಲ್‌ನಲ್ಲಿ ಪಾಕಿಸ್ತಾನೀ ಅತಿಕ್ರಮಣಕೋರರನ್ನು ಹಿಂದಕ್ಕಟ್ಟುವ ಮಿಲಿಟರಿ ಕಾರ್ಯಾಚರಣೆ ಆರಂಭವಾಗಿ ಆರು ವಾರಗಳಾದವು. ಇಡೀ ದೇಶ ನಮ್ಮ ಸಶಸ್ತ್ರ ಪಡೆಗಳ ಈ ಪ್ರಯತ್ನಗಳಿಗೆ ಒಕ್ಕೊರಲಿನಿಂದ ಬೆಂಬಲ ನೀಡಿದೆ. ದುರ್ಗಮ ಪರಿಸ್ಥಿತಿಗಳಲ್ಲಿ ಹೋರಾಟ ನಡೆಸುತ್ತಿರುವ ನಮ್ಮ ಸೈನಿಕರ ಶೌರ್ಯ-ಸಾಹಸಗಳಿಗೆ ಎಲ್ಲಾ ಜನವಿಭಾಗಗಳಿಂದ ಮೆಚ್ಚುಗೆ ವ್ಯಕ್ತಪಟ್ಟರೆ, ವೀರಮರಣವಪ್ಪಿದವರ ಕುಟುಂಬಗಳಿಗೆ ಹಾರ್ದಿಕ ಸಂತಾಪ, ಸೌಹಾರ್ದ ವ್ಯಕ್ತಗೊಂಡಿದೆ.

ಆದರೆ ಈಗಿನ ಸನ್ನಿವೇಶ ಅಭೂತಪೂರ್ವವಾದದ್ದು. ಈ ಹಿಂದಿನ ಭಾರತ-ಪಾಕಿಸ್ತಾನ ಘರ್ಷಣೆಗಳಿಗಿಂತ ಭಿನ್ನವಾದದ್ದು. ಏಕೆಂದರೆ ಸದ್ಯ ಕೇಂದ್ರದಲ್ಲಿ ಚುನಾಯಿತ ಸರಕಾರವೊಂದಿಲ್ಲ. ವಾಜಪೇಯಿ ಸರಕಾರ ಸೋತಿರುವ ಸರಕಾರ, ಮುಂದಿನ ಸೆಪ್ಟೆಂಬರ್‌ನಲ್ಲಿ ಚುನಾವಣೆ ನಡೆಯುವವರೆಗೆ ಉಸ್ತುವಾರಿ ನಡೆಸಲಷ್ಟೇ ಇರುವ ವ್ಯವಸ್ಥೆ. ಆದ್ದರಿಂದ ಜನಗಳ ಇಚ್ಛೆಗೆ, ಆತಂಕಕ್ಕೆ ಸರಿಯಾದ ಒಂದು ದಿಕ್ಕು ನೀಡಲು, ಅದರ ದೃಢನಿರ್ಧಾರವನ್ನು ವ್ಯಕ್ತಗೊಳಿಸಲು ಸಂಸದೀಯ ಪ್ರಜಾಪ್ರಭುತ್ವದಲ್ಲಿ, ಸಂವಿಧಾನದ ಅಡಿಯಲ್ಲಿ ಇರುವ ಅವಕಾಶಗಳನ್ನೆಲ್ಲಾ ಬಳಸಿಕೊಳ್ಳಬೇಕಾಗಿದೆ. ಆದ್ದರಿಂದಲೇ ಬಿಜೆಪಿ ಮತ್ತು ಅದರ ಮಿತ್ರ ಪಕ್ಷಗಳನ್ನು ಬಿಟ್ಟು ಬೇರೆಲ್ಲಾ ರಾಜಕೀಯ ಪಕ್ಷಗಳು ಇಂತಹ ರಾಷ್ಟ್ರೀಯ

4ನೇ ಪುಟ ನೋಡಿ

ನಿಮ್ಮ ಪ್ರಶ್ನೆ ? ನಮ್ಮ ಉತ್ತರ

ಗುರೂಜಿಯವರ ಸಂಘದ ದೀವಿಗೆಯು ಜನಸಂಘವೆಂಬ ರಾಜಕೀಯ ರೂಪ ಪಡೆದು ಮುಂದೆ ಭಾರತೀಯ ಜನತಾ ಪಕ್ಷವಾಗಿದೆ. ಇವರು ಇಂದು ಟಿ.ವಿ.ಯಂತ ದೃಶ್ಯ ಮಾಧ್ಯಮವನ್ನು ಖಾವೀಕರಣಗೊಳಿಸುತ್ತಿದ್ದಾರಲ್ಲ. ಎಲ್ಲಾ ಕ್ಷೇತ್ರಗಳನ್ನು ಸುಳ್ಳುಮಯಗೊಳಿಸುತ್ತಿರುವ ಇವರ ಅಪರಿಮಿತ ಸುಳ್ಳುಗಾರಿಕೆಗೆ ಕಾರಣವೇನು? ಡಿಸೆಂಬರ್ 23 ರ ರಾತ್ರಿ ಅಡ್ವಾಣಿಯವರು ಡಾ।। ಶ್ಯಾಮ ಪ್ರಸಾದ್ ಮುಖರ್ಜಿ ಬಗ್ಗೆ ಹೇಳುತ್ತಾ ಕಾಶ್ಮೀರದಲ್ಲಿ ಹುತಾತ್ಮರಲ್ಲಿ ಮೊದಲನೆಯವರೆಂಬಂತೆ ಚಿತ್ರಿಸಿದರು. ಇದು ಸತ್ಯವೇ?

- ಎಸ್.ವೈ.ಜಿ.ಗುಂಡಾ ಜೋಯಿಡ

ಉತ್ತರ : ಸಮಾಜ ಬೆಳವಣಿಗೆಯಲ್ಲಿ ಜನತೆ ರಾಜಶಾಹಿ(ಪಾಳೆಗಾರಿ)ಯನ್ನು ಧಿಕ್ಕರಿಸಿ ಪ್ರಜಾಪ್ರಭುತ್ವದ ಕಡೆಗೆ ಸಾಗಿದ್ದು ಒಂದು ದೊಡ್ಡ ಮುನ್ನೆಗೆತ. ಪ್ರಜಾಪ್ರಭುತ್ವದ ಆಧಾರವಾಗಿ ಮಾನವರೆಲ್ಲ ಸಮಾನರು ಎಂಬ ಮೂಲಭೂತ ತಿಳುವಳಿಕೆಯ ಆಧಾರದ ಮೇಲೆ ಇಂದು ಪ್ರಸಿದ್ಧವಾಗಿರುವ ಮಾನವ ಹಕ್ಕುಗಳು 'ಸ್ವಾತಂತ್ರ್ಯ, ಸಮಾನತೆ, ಸಹೋದರತ್ವ'ಎಂಬ ಘೋಷಣೆಗಳು ಮೊಳಗಿದವು. ಈ ಸಮಾನತೆ ಮತ್ತು ಸಹೋದರತ್ವ ಎಂಬ ಭಾವನೆಗಳು ಅಲ್ಲಿಯವರೆಗೆ ಮಾನವ ಇತಿಹಾಸದಲ್ಲಿ ಹಲವು ಸಾವಿರ ವರ್ಷಗಳು ಯಜಮಾನಿಕೆ ನಡೆಸಿದ್ದ ರಾಜರಕ್ತ ಹಂಚಿಕೊಂಡವನು ಮಾತ್ರ. ಎಲ್ಲರನ್ನು ಕೇಳುವ ರಾಜ, ಮೊನ್ನೆಯ(noble) ಸಾಮಂತ, ಮಹನೀಯ, ಸಾಮಾನ್ಯ ಎಂಬ ಬೇಧಬಾವಗಳನ್ನು (ನಮ್ಮ ಪರಿಸ್ಥಿತಿಗೆ ಅನ್ವಯಿಸಿ ಹೇಳುವುದಾದರೆ ಮೇಲ್ಜಾತಿ, ಕೆಳಜಾತಿ, ಭೂಸುರ, ಕ್ಷತ್ರಿಯ, ವೈಶ್ಯ, ಶೂದ್ರ, ಅಸ್ಪೃಶ್ಯ ಎಂಬ ಭಾವನೆಗಳನ್ನು ಮೆಟ್ಟಿ ಬೆಳೆದವು. ಕ್ಯಾಥೊಲಿಕ್ ಪ್ರೊಟೆಸ್ಟೆಂಟ್, ಯೆಹೂದಿ ಎಂಬ ಭೇದಭಾವವು ಕೂಡ ರಾಜ್ಯ ಆಡಳಿತದ ವಿಷಯದಲ್ಲಿ ಸಂಗತವಾದುದ್ದಲ್ಲ. ನಾವೆಲ್ಲರೂ ಒಂದೇ ಜಾತಿ, ಒಂದೇ ಮತ ಒಂದೇ ಕುಲ, ನಾವು ಮನುಜರು ಎಂಬ ಭಾವನೆಯೇ ಪ್ರಜಾಪ್ರಭುತ್ವದ ಮೂಲ ಆಧಾರ. ಆದುದರಿಂದಲೇ ಎಲ್ಲರಿಗೂ ಒಂದೇ ಓಟು, ಈ ಓಟಿನ ಮೂಲಕವೇ ಜನಗಳು ತಮ್ಮ ಇಷ್ಟವನ್ನು ಒಂದುಗೂಡಿಸಿ ಆರಿಸುವ ಸರಕಾರ ಜನತಂತ್ರದ ಸರಕಾರ.

ಈ ಜನತಂತ್ರ, ಚುನಾವಣೆಗಳು, ಪತ್ರಿಕೆಗಳು, ಅಭಿವ್ಯಕ್ತಿ ಸ್ವಾತಂತ್ರ್ಯ ಇವುಗಳೆಲ್ಲಾ ಸಾಮಾನ್ಯರಿಗೆ ದಕ್ಕಿದ ಮೇಲೆ ಆಳುವವರ ಕುತಂತ್ರಗಳನ್ನು ಅರಿತುಕೊಳ್ಳುವ, ಅದರ ವಿರುದ್ಧ ಸೆಣಸುವ ಅವಕಾಶವು ದೊರೆಯಿತು. ಸತ್ಯದ ಈ ಅರಿವು ಮತ್ತು ಅದರಿಂದ ಜನಿಸಿದ ಸೆಣಸಾಟ ಹೆಚ್ಚಿದಂತೆಲ್ಲಾ ಪ್ರಜಾಪ್ರಭುತ್ವ. ಸಾಮಾನ್ಯರ ಕೈಯ ಆಯುಧವಾಗಿ ಆಳುವವರ್ಗದ ದಬ್ಬಾಳಿಕೆಗೆ ಆತಂಕ ಒಡ್ಡಿದವು. ಆಗ ಆಳುತ್ತಿರುವ ವರ್ಗಗಳು ತಮ್ಮ ಅಧಿಕಾರವನ್ನು ಉಳಿಸಿಕೊಳ್ಳಲು ತಮ್ಮ ಶೋಷಣೆಯನ್ನು ಮುಂದುವರೆಸಲು ತಾವು ಅಧಿಕಾರಕ್ಕೆ ಏರಲು ಏಣಿಯಾದ ಸಾಮಾನ್ಯರ ಕೈಯ ಆಯುಧವಾಗಿ ತಮ್ಮ ವಿರುದ್ಧವೇ ಬಳಕೆಯಾಗುತ್ತಿರುವ ಪ್ರಜಾಪ್ರಭುತ್ವವನ್ನೇ ತುಳಿದು ಹಾಕುವ ಫ್ಯಾಸಿಸ್ಟ್ ಪ್ರಯತ್ನಗಳನ್ನು ಆರಂಭಿಸುತ್ತಾರೆ. ಹೆಚ್ಚು ಹೆಚ್ಚು ಸತ್ಯವನ್ನು ತಿಳಿದುಕೊಳ್ಳಲು ಜನ ಪ್ರಯತ್ನಿಸಿದಂತೆಲ್ಲಾ ಸತ್ಯವನ್ನು ಮುಚ್ಚಿಡುವ, ತಿರುಚುವ, ಪ್ರಯತ್ನಗಳು, ಕೊನೆಗೂ ಅಪ್ಪಟ ಸುಳ್ಳನ್ನೇ ಸತ್ಯ ಎಂದು ಬಿಂಬಿಸುವ, ನಂಬಿಸುವ ಕೆಲಸಕ್ಕೆ ಆಳುವವರ್ಗ ಇಳಿಯುತ್ತದೆ.

ಎಲ್ಲರೂ ಸಮಾನರು ಎಂಬ ಮೂಲ ಭೂತ ಆಧಾರ ತತ್ವವನ್ನು ನಾಶ ಮಾಡದೆ ಪ್ರಜಾಪ್ರಭುತ್ವ ಎಂಬ ಆಯುಧವನ್ನು ಜನರ ಕೈಯಿಂದ ಕಿತ್ತುಕೊಳ್ಳುವುದು ಸಾಧ್ಯವಿಲ್ಲ. ಅದಕ್ಕಾಗಿ ಹಿಂದು, ಮುಸ್ಲಿಂ ಕ್ರಿಶ್ಚಿಯನ್ ಎಂಬ ಬೇಧ, ಭಾವಗಳನ್ನು ಮತ್ತೆ ಹೊಸದಾಗಿ ಸೃಷ್ಟಿಸಬೇಕಾಗುತ್ತದೆ. ಅದಕ್ಕಾಗಿ ಹಳೆಯ ಧಾರ್ಮಿಕ ಬೇಧಗಳು ಸಾಕಾಗುವುದಿಲ್ಲ ಅಥವಾ ಅವುಗಳಲ್ಲಿ ಬಹಳಷ್ಟು ವಿಚಾರಗಳನ್ನು ಈಗಿನ ಜನ ಒಪ್ಪುವುದಿಲ್ಲವಾದ್ದರಿಂದ ಹೊಸದಾಗಿ ಭೇದಗಳನ್ನೇ ಸೃಷ್ಟಿಸಬೇಕಾಗುತ್ತದೆ. ಅಪಾಯಕಾರಿ ಎಂದು ಸಮಾಜವನ್ನು ನಂಬಿಸಬೇಕಾಗುತ್ತದೆ. ಅದಕ್ಕಾಗಿಯೇ ಮತಾಂತರ, ಜನಸಂಖ್ಯೆಯಲ್ಲಿ ಬೆಳವಣಿಗೆ, ನಾಲ್ಕು ಮದುವೆ ಇತ್ಯಾದಿಗಳನ್ನು ಉತ್ಪ್ರೇಕ್ಷೆ ಮಾಡಿ ಅಥವಾ ಸೃಷ್ಟಿಸಿ ಜನಸಾಮಾನ್ಯರು ನಂಬುವಂತೆ ಮಾಡಬೇಕು ಅಂದರೆ ಸುಳ್ಳುಗಳನ್ನು, ಇಡೀ ಜನರೆಲ್ಲಾ ನಂಬಬಹುದಾದ ದೊಡ್ಡ ಸುಳ್ಳುಗಳನ್ನು ಸೃಷ್ಟಿಸಬೇಕು. ಸುಳ್ಳುಗಳು ಬಯಲಾದಂತೆಲ್ಲಾ ಹೊಸ ಸುಳ್ಳುಗಳ ಸೃಷ್ಟಿ ನಿರಂತರವಾಗಿ ಸಾಗಬೇಕು. ಇದನ್ನೇ ಜರ್ಮನಿ, ಇಟಲಿಗಳಲ್ಲಿ ಫ್ಯಾಸಿಸಂ ಮಾಡಿದ್ದು. ಇದಕ್ಕಾಗಿಯೇ ಸುಳ್ಳುಗಳ ಸೃಷ್ಟಿ ಹಾಗೂ ಪ್ರಚಾರಕ್ಕಾಗಿಯೇ ದೊಡ್ಡ ಆಡಳಿತ ವಿಭಾಗ ಹಾಗೂ ಮಂತ್ರಿ ಶಾಖೆ. ಅದಕ್ಕೆ ಇಂತಹ ಕೆಲಸದಲ್ಲಿ ಅತ್ಯಂತ ದಕ್ಷ ಹಾಗೂ ಸಮರ್ಥವಾದ ಗೊಬೆಲ್ಸ್ ಎಂಬಾತ ಮಂತ್ರಿ.

ಒಟ್ಟಿನಲ್ಲಿ ಪ್ರಜಾಪ್ರಭುತ್ವವನ್ನು ಉಪಯೋಗಿಸಿ ಸತ್ಯವನ್ನು ತಿಳಿದುಕೊಳ್ಳುತ್ತಾ, ಅದಕ್ಕೆ ಸೆಣಸುತ್ತಾ ಹೋಗುವ ಸಾಮಾನ್ಯ ಜನತೆ-ದುಡಿಯುವ ಜನತೆ ಒಂದು ಕಡೆ. ಸತ್ಯವನ್ನು ಮುಚ್ಚಿಡುವ, ತಿರುಚುವ, ಸುಳ್ಳುಗಳ ಸರಮಾಲೆ ಸೃಷ್ಟಿಸುವ ಜನರನ್ನು ನಂಬಿಸುವ ಪ್ರಜಾಪ್ರಭುತ್ವ ವಿರೋಧಿ ಮಾತ್ರವಲ್ಲ ಪ್ರಜಾಪ್ರಭುತ್ವ ವಿನಾಶ ಆಳುವವರ್ಗ ಒಂದು ಕಡೆ. ಇವುಗಳ ನಡುವಣ ಸಮರದಲ್ಲಿಯೇ ಕೋಮುವಾದದ, ಫ್ಯಾಸಿಸ್ಟ್ ಶಕ್ತಿಗಳ ಬೆಳವಣಿಗೆ, ಉರವಣಿಗೆ, ಅಟ್ಟಹಾಸ. ಈ ಶಕ್ತಿಗಳು ಯಾವ ಮಾರ್ಗಗಳಿಂದ ಜನಸಾಮಾನ್ಯರು ಸತ್ಯವನ್ನು ಅರಿಯಬೇಕಾಗಿದೆಯೋ ಆ ಮಾರ್ಗಗಳ ಮೂಲಕವೇ ಸುಳ್ಳನ್ನು ಉಣಬಡಿಸುತ್ತಾರೆ. ಹೀಗಾಗಿ ಪತ್ರಿಕಾರಂಗದ, ಮಾಧ್ಯಮಗಳ ಖಾವೀಕರಣ ಫ್ಯಾಸಿಸ್ಟ್ ಶಕ್ತಿಗಳ ಒಂದು ಪ್ರಧಾನ ಸಾಧನ. ಅದು ಕೇವಲ ಬಿಜೆಪಿಯ, ಸಂಘ ಪರಿವಾರದ ವಿಕ್ರಮ, ಪಾಂಚಜನ್ಯ, ಆರ್ಗನೈಸರ್, ಉತ್ಥಾನಗಳು ಮಾತ್ರವೇ ಅಲ್ಲ, ಸರ್ಕಾರದ ಕೈಯ ದೂರದರ್ಶನ ಮಾತ್ರವೇ ಅಲ್ಲ, ಅನೇಕ ಪತ್ರಿಕೆಗಳು, ಟಿ.ವಿ. ಚಾನೆಲ್‌ಗಳು ಖಾವೀಕರಣಗೊಂಡಿವೆ. ಖಾವೀಕರಣಗೊಳ್ಳುತ್ತಿವೆ. ಇದು ಅಡ್ವಾಣಿ, ವಾಜಪೇಯಿ ಅಥವಾ ಬಿಜೆಪಿ ಮಾತ್ರವೇ ಅಲ್ಲ, ಆಳುವ ವರ್ಗವೇ ಅಥವಾ ಅದರ ದೊಡ್ಡ ವಿಭಾಗವೇ ಫ್ಯಾಸಿಸ್ಟ್ ಸ್ವರೂಪ ಪಡೆಯುತ್ತಿರುವುದರ ಸೂಚಿ.

ಆದುದರಿಂದ ಇದು ಆಳುವ ಬಂಡವಾಳ ಶಾಹಿ ವರ್ಗ ಹಾಗೂ ಜನಸಮುದಾಯಕ್ಕೂ ಇರುವ ಸಂಘರ್ಷ. ಸತ್ಯ ಹಾಗೂ ಸುಳ್ಳುಗಳ ನಡುವಣ ಸಂಘರ್ಷ. ಪ್ರಜಾಪ್ರಭುತ್ವ ಹಾಗೂ ಫ್ಯಾಸಿಸ್ಟ್ ಶಕ್ತಿಗಳ ನಡುವಣ ಸಂಘರ್ಷ.

ಇನ್ನು ಶ್ಯಾಮಪ್ರಸಾದ ಮುಖರ್ಜಿಯವರ ವಿಷಯ. ಸ್ವಾತಂತ್ರ್ಯ ಚಳುವಳಿಕಾರರ ವಿರುದ್ಧ ಸಾಕ್ಷಿ ಹೇಳಿ ಸ್ವಾತಂತ್ರ್ಯಕ್ಕೆ ದ್ರೋಹ ಬಗೆದ ವಾಜಪೇಯಿಯವರು ಸ್ವಾತಂತ್ರ್ಯ ಹೋರಾಟಗಾರರೆಂಬಂತೆ ಬಿಂಬಿಸಲು ಹೇಗೆ ಪ್ರಯತ್ನ ನಡೆಯಿತೋ ಅದೇ ರೀತಿ ಶ್ಯಾಮಪ್ರಸಾದ ಮುಖರ್ಜಿಯವರು 'ಹುತಾತ್ಮ'ರೆಂದು ಸಾರಲಾಗುತ್ತಿದೆ. ಹೃದಯಾಘಾತದಿಂದ ಸತ್ತವರೆಲ್ಲರೂ ಹುತಾತ್ಮರು ಎನ್ನಬಹುದಾದರೆ ಅಂತಹ ನೂರಾರು ಕೋಟಿ ಹುತಾತ್ಮರಲ್ಲಿ ಶ್ಯಾಮ ಪ್ರಸಾದ ಮುಖರ್ಜಿಯವರೂ ಒಬ್ಬರು. ಹಾಗೆಂದರೂ ಕಾಶ್ಮೀರದ ವಿಷಯದಲ್ಲಿ ಅವರು ಹುತಾತ್ಮರಾಗುವುದು ಹೇಗೆ? ಇದು ಇನ್ನೂ ಚೋದ್ಯದ ವಿಷಯ. ಇದು ಸಂಘ ಪರಿವಾರದ 'ಹುತಾತ್ಮ'ರನ್ನು ಹುಟ್ಟಿಸುವ ರೀತಿಗೊಂದು ಉದಾಹರಣೆಯಷ್ಟೆ.

ನಿಮ್ಮ ಪತ್ರ

ಐಕ್ಯರಂಗ ಮೊದಲನೆಯ ಬಾರಿಗೆ ಬದಲಾವಣೆ ಮಾಡಿದಕ್ಕೆ ಮತ್ತು ಅರ್ಥಗರ್ಭಿತ ಲೇಖನಗಳು, ಸಂಪಾದಕೀಯ ಸುದ್ದಿ, ಜ್ಯೋತಿಬಸುರವರ ಜೀವನ ಕಥೆ ಪ್ರಾರಂಭಿಸಿದ್ದಕ್ಕೆ ಅಭಿನಂದನೆ. ಮೊದಲು ನಾನು ಐಕ್ಯರಂಗವನ್ನು ಕೇವಲ ಪಶ್ಚಿಮ ಬಂಗಾಳ ಹಾಗೂ ಕೇರಳದ ರಾಜಕೀಯ ವಿಷಯ ಹಾಗೂ ಹೋರಾಟವನ್ನು ಬಿಟ್ಟರೆ ಬೇರೆ ಯಾವ ಲೇಖನಗಳ ಮೇಲೂ ಗಮನ ಹರಿಸುತ್ತಿರಲಿಲ್ಲ. ಈಗ ಹೊಸ ವಿನ್ಯಾಸ ದೊಂದಿಗೆ ಪ್ರಾರಂಭವಾದ ಐಕ್ಯರಂಗವನ್ನು ಸ್ವಲ್ಪವೂ ಬಿಡದೆ ಓದುವ ಪರಿಪಾಠವಾಗಿದೆ. ತಮಗೆ ನನ್ನ ಅಭಿನಂದನೆಗಳು.

ಹೊಸ ಧಾರವಾಹಿ ಪ್ರಾರಂಭಿಸಿದ್ದೇ ಆದಲ್ಲಿ ನನ್ನದೊಂದು ವಿನಂತಿ, ರಾಜ್ಯದ ಕಾರ್ಯದರ್ಶಿಗಳಾಗಿದ್ದ ದಿವಂಗತ ಕಾಂ. ಪಿ.ರಾಮಚಂದ್ರ ರಾವ್ ಅವರ ಜೀವನ ಚರಿತ್ರೆ, ಅವರ ಕೊನೆ ಉಸಿರಿರುವವರೆಗೆ ರಾಜಿ ಇಲ್ಲದ ಅವರ ಹೋರಾಟದ ಚಿತ್ರಣ ಮೂಡಿ ಬರಲಿ.

ಐಕ್ಯರಂಗ ಪತ್ರಿಕೆ ಮುಂದೊಂದು ದಿನ ದಿನಪತ್ರಿಕೆಯಾಗಿ ಹೊರಬರಲಿ ಎಂದು ಆಶಿಸುವೆ.

ಅಡಿವೆಪ್ಪ, ಕುಷ್ಟಗಿ

ಐಕ್ಯರಂಗ ಪುರವಣಿ

ಕರ್ನಾಟಕದಲ್ಲಿ ಪ್ರಾದೇಶಿಕ ಅಸಮಾನತೆ ಹಾಗೂ ಪ್ರತ್ಯೇಕತಾವಾದ

'ಐಕ್ಯ ಕೇರಳ' ದ ಧೀಮಂತ ಹೋರಾಟಗಾರರಾದ ಇ.ಎಂ.ಎಸ್.ನಂಬೂದರಿಪಾಡ್‌ರವರ ನೆನಪಿನಲ್ಲಿ ಐಕ್ಯರಂಗದ ಮೊದಲ ಮಾಸಿಕ ಪುರವಣಿ ಬರಲಿದೆ. ಪ್ರತಿ ತಿಂಗಳೂ ಬರಲಿರುವ ಈ ಮಾಸಿಕ ಪುರವಣಿ ಜನರ ಮನಸ್ಸನ್ನು ಕಾಡುತ್ತಿರುವ ಪ್ರಶ್ನೆಗಳ ಮೇಲೆ ಆಳವಾದ ವಿಶ್ಲೇಷಣೆ, ವಿಶೇಷ ಬರಹ ಮಾಹಿತಿಗಳ ಗಣಿ. ಸಂಗ್ರಹಯೋಗ್ಯವಾಗಿ ಪುಸ್ತಿಕೆಯ ರೂಪದಲ್ಲಿ ನಿಮ್ಮ ಕೈ ಸೇರುತ್ತದೆ. ಪುರವಣಿ ಬರುವ ಐಕ್ಯರಂಗ ಸಂಚಿಕೆಯ ಬೆಲೆ 5 ರೂ.


ಕರ್ನಾಟಕವನ್ನು ಕಾಡುತ್ತಿರುವ ಪ್ರಾದೇಶಿಕ ವಾದ ಅದರ ಹಿನ್ನೆಲೆಯಲ್ಲಿರುವ ಪ್ರಾದೇಶಿಕ ಅಸಮಾನತೆ, ಪ್ರಾದೇಶಿಕ ಅಸಮಾನತೆಯ ಕಾರಣ, ಹಿನ್ನಲೆಗಳು, ಹೈದರಾಬಾದ್ ಕರ್ನಾಟಕ, ಬಾಂಬೆ ಕರ್ನಾಟಕ, ಕೊಡಗು ಇವುಗಳ ಪ್ರತ್ಯೇಕತಾ ಚಳುವಳಿಗಳ ಬಗ್ಗೆ ಅಪರೂಪದ ಸಂಶೋಧನೆ, ಆಸಕ್ತಿಕರ ಮಾಹಿತಿಗಾಗಿ ಕಾದು ನೋಡಿ.

ವಿಶೇಷ ಸಂಚಿಕೆಯ ಹೆಚ್ಚು ಪ್ರತಿ ಬೇಕಾದವರು ತಕ್ಷಣವೇ ಪ್ರತಿಗಳನ್ನು ಕಾದಿರಿಸಬೇಕು. ಪುರವಣಿಯ ಪ್ರತ್ಯೇಕ ಬೆಲೆ 2 ರೂ.

- ಸಂಪಾದಕರು.

ಕೋಮುವಾದದ ಹೆರಿಗೆಗೆ ಲೋಕಶಕ್ತಿಯೆಂಬ ಸೂಲಗಿತ್ತಿ!

ಕರ್ನಾಟಕದಲ್ಲಿ ಲೋಕಶಕ್ತಿಯ ಅಪಾಯಕಾರಿ ಪಾತ್ರದ ಕುರಿತು
ಸಿಪಿಐ(ಎಂ) ಕಾರ್ಯದರ್ಶಿ ಸೂರ್ಯನಾರಾಯಣ ರಾವ್‌ರೊಡನೆ ಒಂದು ಸಂದರ್ಶನ



1998 ರ ಚುನಾವಣೆಗಳಿಗೆ ಮೊದಲು ರಾಮಕೃಷ್ಣ ಹೆಗಡೆಯವರು ಕಾಂಗ್ರೆಯನ್ನು, ನರಸಿಂಹರಾಯರನ್ನು ಹೊಗಳಿ ಅಟ್ಟಕ್ಕೇರಿಸುತ್ತಾ ಅವರ ಬಾಗಿಲ ಬಳಿ ಕಾದು ನಿಂತು ದೂರತಳ್ಳಲ್ಪಟ್ಟರು. ಹೇಗಾದರೂ ಒಂದು ಕುರ್ಚಿ ಹಿಡಿಯುವ ಆಸೆಗಾಗಿ ತಮ್ಮ ಜಾತ್ಯಾತೀತತೆ, ಕೋಮುವಾದದ ವಿರೋಧ ಎಲ್ಲವನ್ನೂ ಕೈ ಬಿಟ್ಟು ಬಿಜೆಪಿಯೊಡನೆ ಸೇರಿದರು. ಅಂದಿನಿಂದಲೂ ನಿರಂತರವಾಗಿ ಜನತಾದಳವನ್ನೊಡೆಯುವ ಆ ಮೂಲಕ ಕರ್ನಾಟಕದಲ್ಲಿ ಕಾಂಗ್ರೆ ವಿರೋಧಿ ಜಾತ್ಯಾತೀತ ಶಕ್ತಿಯಾಗಿ ನಿಂತು ರಾಜ್ಯವನ್ನು ಕೋಮುವಾದಿ ಶಕ್ತಿಗಳಿಗೆ ಬಲಿಯಾಗದಂತೆ ತಡೆದಿರುವ ಜನತಾದಳವನ್ನು ಒಡೆಯುವ ಹುನ್ನಾರ ನಡೆಸುತ್ತಲೇ ಬಂದಿದ್ದಾರೆ. ಮತ್ತೆ ಮತ್ತೆ ವಿಫಲರಾದ ಮೇಲೆ ಇವರ ಶಕ್ತಿಯು ಬುಡವೆಲ್ಲಾ ಕಾಂಗ್ರೆ ಸೇರಿದ ಮೇಲೂ ಮತ್ತೆ ಪ್ರಯತ್ನ ನಡೆಸಿದ್ದಾರೆ. ಬೆಂದ ಮನೆಯ ಗಳ ಹಿರಿದು ಮನೆ ಕಟ್ಟಿಕೊಳ್ಳುವ ಕ್ರೂರ ಆಟ ನಡೆಸಿರುವ ಲೋಕಶಕ್ತಿಯ ಬಗ್ಗೆ ಸಿಪಿಐ(ಎಂ) ರಾಜ್ಯಕಾರ್ಯದರ್ಶಿ ಸೂರ್ಯನಾರಾಯಣ ರಾವ್‌ರೊಡನೆ ಕೆ.ಪ್ರಕಾಶ್ ನಡೆಸಿದ ಸಂದರ್ಶನದ ಭಾಗಗಳು.

● *ಲೋಕಶಕ್ತಿ ಒಂದು ಪಕ್ಷವಾಗಿ ಅದರ ಸ್ವರೂಪ ಏನು?*

ಜನತಾದಳದ ದೇವೇಗೌಡರನ್ನು ಪ್ರಧಾನಿಯನ್ನಾಗಿ ಮಾಡುವಾಗ ಅವರ ಪಾರ್ಲಿಮೆಂಟರಿ ಬೋರ್ಡನ್ನು ಕೇಳಲಿಲ್ಲ ರಾಮಕೃಷ್ಣ ಹೆಗಡೆಯವರು ಎಂದು ಟೀಕಿಸಿದ್ದಕ್ಕೆ, ಜನತಾದಳವು ಅವರಿಗೆ ನೋಟೀಸನ್ನೂ ಕೊಡದೆ ಹೊರ ಹಾಕಿತು. ನಂತರ ಕೆಲಕಾಲ ರಾಜಕೀಯ ಸನ್ಯಾಸ ಎಂದೆಲ್ಲಾ ಹೇಳಿ ಲೋಕಶಕ್ತಿ ಎಂಬ ರಾಜಕೀಯ ಪಕ್ಷ ಪ್ರಾರಂಭಿಸಿದರು. ಅದರ ಆರ್ಥಿಕ ಧೋರಣೆ ಮಾತ್ರ ಕಾಂಗ್ರೆಸ್-ಬಿಜೆಪಿಯದ್ದೇ. ಆದರೆ ಕೋಮುವಾದದ ವಿರುದ್ಧ ಹೋರಾಡುತ್ತೇವೆಂದರು, ಲೋಕಸಭಾ ಚುನಾವಣೆ ಬರುವವರೆಗೂ ಈ ಧೋರಣೆಯಿತ್ತು. ಆ ಸಂದರ್ಭದಲ್ಲಿ ಬಿಜೆಪಿಯ ಜೊತೆ ಹೊಂದಾಣಿಕೆ ಆದಾಗ ಕೋಮುವಾದ-ವಿರೋಧಿ ಧೋರಣೆಯನ್ನು ಕೈಬಿಟ್ಟರು. ಈಗ ಬಿಜೆಪಿಯ ಕೋಮುವಾದಿ ನೀತಿಗೆ ಬೆಂಬಲವಾಗಿ ನಿಂತಿದ್ದಾರೆ. ಅದು ಅಖಿಲಭಾರತ ಮಟ್ಟದ ಪಕ್ಷ ಎಂದು ಹೇಳಿಕೊಂಡರೂ ಕರ್ನಾಟಕದಲ್ಲಿ ಮಾತ್ರ ಅಳಿದುಳಿದು ನಿಂತಿದೆ.

● *ಲೋಕಶಕ್ತಿ-ಬಿಜೆಪಿ ಮೈತ್ರಿಯ ಬಗ್ಗೆ....*

ಲೋಕಶಕ್ತಿಯು ಬಿಜೆಪಿಯ ಜೊತೆ ಮೈತ್ರಿ ಮಾಡಿಕೊಂಡು ಆ ಕೋಮುವಾದಿ ಪಕ್ಷಕ್ಕೆ ಜನರಬೆಂಬಲವನ್ನು ಗಳಿಸಿಕೊಡಲು ಪ್ರಯತ್ನ ಮಾಡುತ್ತಿದೆ. ಬಾಬ್ರಿ ಮಸೀದಿ ಕೆಡವಿದ್ದನ್ನು ವಿರೋಧಿಸಿದ ಹೆಗಡೆ, ಅಲ್ಪಸಂಖ್ಯಾತರ ಬಗ್ಗೆ ಕನಿಕರ ತೋರುತ್ತಿದ್ದ ಹೆಗಡೆ ಈಗ ಅದನ್ನೆಲ್ಲಾ ಮರೆತಿದ್ದಾರೆ. ಲೋಕಶಕ್ತಿ ಈಗ ಬಿಜೆಪಿಯ ಬಾಲಂಗೋಚಿಯಾಗಿ ಕರ್ನಾಟಕ ರಾಜ್ಯದಲ್ಲಿ ಜಾತ್ಯಾತೀತ ಪರಂಪರೆಯನ್ನು ಮೊಟಕುಗೊಳಿಸಲು ನಡೆಸುವ ಪ್ರಯತ್ನವೇ ಈ ಮೈತ್ರಿ.

● *ವಾಜಪೇಯಿ ಸರಕಾರದ ಅವಧಿಯಲ್ಲಿ ಕ್ರಿಶ್ಚಿಯನ್ ಅಲ್ಪಸಂಖ್ಯಾತರ ಮೇಲೆ ದಾಳಿಗಳು ತೀವ್ರವಾಗಿ ನಡೆದಿವೆ. ಇಂತಹ ಕೋಮುವಾದಿ ಕೃತ್ಯಗಳ ಬಗ್ಗೆ ಲೋಕಶಕ್ತಿ ವಿರೋಧ ವ್ಯಕ್ತಪಡಿಸುವ ರೀತಿಯಲ್ಲಿ ಮಾತನಾಡಿದೆಯಲ್ಲ?*

ಲೋಕಶಕ್ತಿಯು, ಕೋಮುವಾದಿ ಬಿಜೆಪಿಯು ಅಲ್ಪಸಂಖ್ಯಾತರ ಮೇಲೆ ದಾಳಿ ಮಾಡಿದಾಗ ಕಣ್ಣೊರೆಸುವ ಟೀಕೆ ಮಾಡದೆ ಮೈತ್ರಿ ಕೂಟದಿಂದ ಹೊರಬರಬೇಕಿತ್ತು. ಜಾತ್ಯಾತೀತ ಶಕ್ತಿಗಳ ಜೊತೆ ಕೈಜೋಡಿಸಬೇಕಿತ್ತು. ಒಂದು ರೀತಿಯಲ್ಲಿ ರಾಜಿ ಮನೋಭಾವ ಪ್ರಕಟಿಸಿತು. ಇವರ ಇಬ್ಬಗೆಯ ನೀತಿ ಬಿಜೆಪಿಯ ಕೋಮುವಾದವನ್ನು ಬಲಪಡಿಸುತ್ತೆ. ಜನರನ್ನು ತಪ್ಪು ದಾರಿಗೆಳೆಯಲು ಸಹಾಯಕವಾಗುತ್ತದೆ.

● *ಕೇಂದ್ರದಲ್ಲಿ ಬಿಜೆಪಿಯ ಜೊತೆ ಸೇರಿ ಜಾರಿಗೆ ತಂದಿರುವ EXIM (ರಫ್ತು-ಆಮದು) ನೀತಿಯ ಬಗ್ಗೆ*

ಹೆಗಡೆ ವಾಣಿಜ್ಯ ಮಂತ್ರಿ ಆದಮೇಲೆ ದೇಶದ ಸಣ್ಣ ಕೈಗಾರಿಕೆಗಳಿಗೆ ಮತ್ತು ರೈತಾಪಿ ಜನಕ್ಕೆ ಅತ್ಯಂತ ಮಾರಕವಾದ EXIM (ರಫ್ತು-ಆಮದು) ನೀತಿಯನ್ನು ಮಾಡಿದರು. ಎಲ್ಲಾ ನಿರ್ಬಂಧಗಳನ್ನು ತೆಗೆದುದರಿಂದ ಹೊರದೇಶದ ವಸ್ತುಗಳು ದೇಶದೊಳಗೆ ನುಗ್ಗಿ ನಮ್ಮ ಕೈಗಾರಿಕೆಗಳು ಮತ್ತು ಕೃಷಿ ನಷ್ಟವನ್ನು ಅನುಭವಿಸುವ ಪರಿಸ್ಥಿತಿ ಬಂದಿದೆ. ಈ ನೀತಿಯಿಂದಾಗಿಯೇ ತೊಗರಿಬೆಳೆಗಾರರು ಆತ್ಮಹತ್ಯೆ ಮಾಡಿಕೊಳ್ಳುವ ಪರಿಸ್ಥಿತಿ ಬಂದದ್ದು, ಶಿರಾದಲ್ಲಿ ಗೋಲಿಬಾರ್ ನಡೆದದ್ದು, ರೇಷ್ಮೆ ಕೃಷಿ ರೈತರ ಸಮಸ್ಯೆಗಳು ಹೆಚ್ಚಾಗಿರುವುದು, ಸಾಲಸೋಲಗಳಿಗೆ ತುತ್ತಾಗಿರುವುದು. ಕೇಂದ್ರದಲ್ಲಿ ಎಕ್ಸಿಮ್ ನೀತಿ ತಂದಿರುವುದು ವ್ಯಾಪಾರಿಗಳ ಮತ್ತು ಬಹುರಾಷ್ಟ್ರೀಯ ಕಂಪನಿಗಳ ಅನುಕೂಲಕ್ಕೆ. ಇದರ ಪರಿಣಾಮವೇ ಎಲ್ಲಾ ವಿಭಾಗದ ಜನರು ಸಂಕಷ್ಟಕ್ಕೆ ಈಡಾಗಿರುವುದು. ಇದರ ವಿರುದ್ಧ ನಮ್ಮ ದೇಶದಲ್ಲಿ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆ(NPMO) ಹೋರಾಟಗಳನ್ನು ಹಮ್ಮಿಕೊಂಡಿದೆ. ಇದನ್ನು ಇನ್ನೂ ತೀವ್ರಗೊಳಿಸಬೇಕಾಗಿದೆ.

● *ಬಿಜೆಪಿ ಮಿತ್ರಪಕ್ಷಗಳ ಪೈಕಿ, ನಿರಂತರವಾಗಿ ಭಿನ್ನ ನಿಲುವುಗಳನ್ನು ವ್ಯಕ್ತಪಡಿಸುತ್ತಿದ್ದ ಚಂದ್ರಬಾಬು ನಾಯ್ಡು, ಸರಕಾರದಲ್ಲಿ ಭಾಗವಹಿಸುವುದಿಲ್ಲ ಬದಲಿಗೆ ಮೈತ್ರಿಯಲ್ಲಿರುತ್ತೇವೆ ಎನ್ನುತ್ತಿದ್ದ ಮಮತಾ ಬ್ಯಾನರ್ಜಿ ಇಂತಹವರ ನಡುವೆ ಲೋಕಶಕ್ತಿಯ ನಿಲುವುಗಳನ್ನು ಹೇಗೆ ಕಾಣುವಿರಿ?*

ಬಂಡವಾಳ ಶಾಹಿ ಪ್ರಾದೇಶಿಕ ರಾಜಕೀಯ ಪಕ್ಷಗಳು ತಮ್ಮ ನಿಲುವನ್ನು ಸಂಕುಚಿತ ದೃಷ್ಟಿಯಲ್ಲಿ ನೋಡುತ್ತವೆ. ದೇಶದ ಐಕ್ಯತೆ ಮತ್ತು ಸಮಗ್ರತೆ ಬಗ್ಗೆ ಗಮನಹರಿಸುವುದಿಲ್ಲ. ಹೀಗಾಗಿ ಇದು ದೇಶಕ್ಕೆ ಗಂಡಾಂತರಕಾರಿಯಾಗಿದೆ. (ಕೋಮುವಾದಿಗಳ ಬಗ್ಗೆ ಹಿಂದೆ ತಳೆದ ನಿಲುವನ್ನು ಕೈಬಿಡುತ್ತಾರೆ.) ಈ ಎಲ್ಲಾ ಪಕ್ಷಗಳೂ ಜನಗಳ ಓಲವನ್ನು ಉಳಿಸಿಕೊಳ್ಳಲು, ಬಿಜೆಪಿಯ ನಿಲುವಿನ ಬಗ್ಗೆ ಟೀಕೆ ಮಾಡುತ್ತಿದ್ದರೂ ಸಹ, ಆ ಹಿರಿಯಣ್ಣನ ಪಕ್ಷದ ನಿಲುವನ್ನೇ ಕಾರ್ಯಗತ ಮಾಡಲು ಸಹಾಯ ಮಾಡುತ್ತಾರೆ. ಆದ್ದರಿಂದ ಜನತೆ ಇವರ ಮಾತಿಗೂ-ಕೃತಿಗೂ ಇರುವ ಅಂತರ, ವ್ಯತ್ಯಾಸ ತಿಳಿದುಕೊಳ್ಳಬೇಕು. ಇವರು ಒಟ್ಟಾರೆಯಾಗಿ ದೊಡ್ಡ ಪಕ್ಷದ ನಿಲುವನ್ನೇ ಸಂದಿಗ್ಧ ಸಮಯದಲ್ಲಿ ಬೆಂಬಲಿಸುತ್ತಾರೆ ಎಂಬುದನ್ನು ಮರೆಯಬಾರದು. ಇದರ ಬಗ್ಗೆ ಎಚ್ಚರಿಕೆ ಅಗತ್ಯ.

ಆದರೆ ತೆಲುಗುದೇಶಂ ಹಾಗೂ ತೃಣಮೂಲ ಪಕ್ಷಗಳು ಆಗಿಂದ್ದಾಗ್ಗೆ ತೀವ್ರ ಟೀಕೆ ಭಿನ್ನಾಭಿಪ್ರಾಯ ವ್ಯಕ್ತಪಡಿಸಿ ತಮ್ಮ ಜನಬೆಂಬಲವನ್ನು ಉಳಿಸಿಕೊಳ್ಳುವ ಯತ್ನ ಮಾಡುತ್ತಿದ್ದರೆ, ಲೋಕಶಕ್ತಿ ಬಿಜೆಪಿ ಸರ್ಕಾರದ ಸಮರ್ಥಕನಾಗಿ ದೃಢಬೆಂಬಲಗಾರನಾಗಿ ಆ ಸರ್ಕಾರದ ಜೊತೆ ಮಿಳಿತವಾಗಿತ್ತು ಎಂದರೆ ತೆಲುಗುದೇಶಂ ಮಮತಾ ಬ್ಯಾನರ್ಜಿಗಳಿಗಿಂತಲೂ ಬಿಜೆಪಿಯ ಸಹಚರನಾಗಿ ಗುರುತಿಸಿಕೊಂಡಿತ್ತು.

● *ಕಾರ್ಗಿಲ್ ಬಗ್ಗೆ ಲೋಕಶಕ್ತಿ ನೀತಿ ಏನು?*

ಲಾಹೋರ್‌ನ ಬಸ್ ಪ್ರಯಾಣ ಜಯಭೇರಿ ಎಂದುಕೊಂಡು ಮತ್ತು ಪೋಕ್ರಾನ್‌ನಲ್ಲಿ ಅಣುಬಾಂಬ್ ಸ್ಫೋಟದಿಂದ ಮೈಮರೆತು ದೇಶದ ರಕ್ಷಣೆ ಬಗ್ಗೆ ಅಗತ್ಯ ಕ್ರಮಗಳನ್ನು ಕೈಗೊಳ್ಳದಿದ್ದುದರಿಂದ ಕಾರ್ಗಿಲ್ ಸಮಸ್ಯೆ ಉಂಟಾಗಿದೆ. ಇಂದು ಕಾರ್ಗಿಲ್‌ನಲ್ಲಿ ನಮ್ಮ ವೀರ ಯೋಧರು ಪ್ರಾಣಾರ್ಪಣೆ ಮಾಡಿ, ಪಾಕಿಸ್ತಾನದ ಆಕ್ರಮಣಕಾರರನ್ನು ಹಿಮ್ಮೆಟ್ಟಿಸುವಲ್ಲಿ ತೊಡಗಿದ್ದಾರೆ.

ಲೋಕಶಕ್ತಿಯು ಈ ಬಗ್ಗೆ ಬಿಜೆಪಿ ತಳೆದಿರುವ ಅಮೆರಿಕನ್ ಸಾಮ್ರಾಜ್ಯವಾದಿಗಳ ಮೇಲೆ ವಿಶ್ವಾಸವಿಡುವ ನಿಲುವನ್ನು ವಿರೋಧಿಸುತ್ತಿಲ್ಲ. ಈ ನಿಲುವು ಜನಗಳ ಮಧ್ಯದಲ್ಲಿ, ಅಮೆರಿಕಾ ದೇಶಕ್ಕೆ ಅಂದರೆ ಕ್ಲಿಂಟನ್‌ರವಂಗೆ ಕಾರ್ಗಿಲ್ ಸಮಸ್ಯೆ ಪರಿಹಾರಕ್ಕೆ ಬಹಳ ಒಲವಿದೆ ಎನ್ನುವ ತಪ್ಪು ಅಭಿಪ್ರಾಯ ಮೂಡಿಸಿ ಕಾಶ್ಮೀರವನ್ನು ಕೊಸಾವೊ ರೀತಿಯಲ್ಲಿ ಮಾಡುವ ದುಷ್ಟ ಯೋಜನೆಗೆ ಸಹಾಯವಾಗುತ್ತೆ ಎಂಬುದನ್ನು ಮರೆಯಬಾರದು.

● *ಕಾರ್ಮಿಕ ವರ್ಗದ ಬಗ್ಗೆ ಲೋಕಶಕ್ತಿಯ ನಿಲುವನ್ನು ಹೇಗೆ ಕಾಣುತ್ತೀರಿ?*

ರಾಮಕೃಷ್ಣ ಹೆಗಡೆಯವರು, ಕಾರ್ಮಿಕರು ಮುಷ್ಕರ ಮಾಡುವುದರಿಂದ ನಮ್ಮ ರಫ್ತಿಗೆ ಹಾನಿಯಾಗಿದೆ ಎಂದು ಹೇಳಿ ಕಾರ್ಮಿಕರನ್ನು ಒಂದು ರೀತಿಯಲ್ಲಿ ಅಪಮಾನ ಮಾಡಿದ್ದಾರೆ. ನಮ್ಮ ದೇಶದ ರಫ್ತು ಕಡಿಮೆ ಆಗುವುದಕ್ಕೆ ಹೆಗಡೆ ಸೇರಿ ಬಿಜೆಪಿ ಸರ್ಕಾರ ತ್ವರಿತವಾಗಿ ಜಾರಿಗೆ ತರುತ್ತಿರುವ ಉದಾರೀಕರಣ, ಸರಳೀಕರಣ ನೀತಿ ಕಾರಣ ಎಂಬುದನ್ನು ಮರೆಯಬಾರದು. ಹೆಗಡೆಯವರೂ ಸಹ ಬಂಡವಾಳಶಾಹಿ ವರ್ಗದ ಪ್ರತಿನಿಧಿ ಆಗಿರುವುದರಿಂದ ಸಹಜವಾಗಿ ಕಾರ್ಮಿಕರ ವಿರೋಧಿ ಧೋರಣೆ ಪ್ರಕಟಿಸಿದ್ದಾರೆ. ಕಾರ್ಮಿಕರ ಒಗ್ಗಟ್ಟಿನಿಂದ ಮಾತ್ರ ಕೆಲವು ರಿಯಾಯಿತಿಗಳು ದೊರೆಯಬಹುದು.

● ಬಿಜೆಪಿ-ಲೋಕಶಕ್ತಿ ಮೈತ್ರಿಯಿಂದ ಕರ್ನಾಟಕಕ್ಕೆ ಪ್ರಯೋಜನವಾಗಿದೆಯೇ?

ಲೋಕಶಕ್ತಿ ಬಿಜೆಪಿಯೊಂದಿಗೆ ಸೇರಿದ್ದರಿಂದ ಕರ್ನಾಟಕಕ್ಕೆ ಹಲವು ರೀತಿಯಿಂದ ಹಾನಿಯಾಗಿದೆ. ಬಿಜೆಪಿ ಕೋಮುವಾದಿ ಎಂದು ದೂರಮಾಡುತ್ತಿದ್ದ ಪರಿಸ್ಥಿತಿಯಲ್ಲಿ ಲೋಕಶಕ್ತಿ ಅವರೊಡನೆ ಸೇರಿದ್ದು ಬಿಜೆಪಿಗೆ ಆ ಮೂಲಕ ಕೋಮುವಾದಕ್ಕೆ ವಿಶಾಲನೆಲೆ ಒದಗಿಸಲು ಕಾರಣವಾಗಿದೆ. ಹೀಗಾಗಿ ಕರ್ನಾಟಕದ ಜಾತ್ಯಾತೀತ, ಕೋಮುಸೌಹಾರ್ದ ಪ್ರೇಮಿ ಜನತೆಯನ್ನು ಒಯ್ದು ಬಿಜೆಪಿಯ ಕೋಮುವಾದದ ಮಡಿಲಿಗೆ ಹಾಕಲು ಸಹಾಯಕವಾಗಿದೆ. ಜನತೆಯಿಂದ ನಿರಾಕರಿಸಲ್ಪಡಬಹುದು ಎಂಬ ಭಯದಿಂದ ಬಿಜೆಪಿಗೆ ನೇರವಾಗಿ ಸೇರಲು ಭಯಪಡುತ್ತಿದ್ದ ಸಂದರ್ಭಸಾಧಕ ರಾಜಕಾರಣಿಗಳಿಗೆ ಬಿಜೆಪಿಯ ಮೂಲಕ ಅಧಿಕಾರದ ಗುತ್ತಿಗೆ ಹಿಡಿಯಲು ಲೋಕಶಕ್ತಿಯೊಂದು ಒಳ್ಳೆಯ ನೆಪವಾಗಿದೆ. ಆ ಮೂಲಕ ಜಾತ್ಯಾತೀತ ಕರ್ನಾಟಕವನ್ನು ಕೋಮುವಾದಿಗಳು ತಮ್ಮ ನೆಲೆ ಮಾಡಿಕೊಳ್ಳಲು ಲೋಕಶಕ್ತಿ ಆಸರೆಯಾಗಿದೆ. ಕರ್ನಾಟಕದಲ್ಲಿ ಹಿನ್ನಡೆಗೆ ಕಾರಣವಾದ ಹೆಗ್ಗಡೆ ಹಾಗೂ ಲೋಕಶಕ್ತಿಯನ್ನು ಇತಿಹಾಸ ಎಂದೂ ಕ್ಷಮಿಸುವುದಿಲ್ಲ. ಜೊತೆಗೆ ಆಮದು ನೀತಿ, ಆರ್ಥಿಕ ನೀತಿ ಕರ್ನಾಟಕದ ಕೃಷಿ, ಕೈಗಾರಿಕೆಗಳನ್ನು ಹಾಳುಮಾಡುವುದರಲ್ಲೂ ಬಿಜೆಪಿ-ಲೋಕಶಕ್ತಿ ಹೊಣೆ ಹೊರಬೇಕಾಗುತ್ತದೆ.

ಒಟ್ಟಾರೆಯಾಗಿ ಹೇಳುವುದಾದರೆ ಕರ್ನಾಟಕದ ಜನತೆಯಲ್ಲಿ ಲೋಕಶಕ್ತಿ ಮೂಡಿಸುತ್ತಿರುವ ತಪ್ಪು ಅಭಿಪ್ರಾಯದ ಬಗ್ಗೆ ಜನತೆ ಎಚ್ಚೆತ್ತುಕೊಳ್ಳಬೇಕು. ಈ ಹಿನ್ನೆಲೆಯಲ್ಲಿ ರಾಜ್ಯದಲ್ಲಿ ಪ್ರಗತಿಪರ, ಜಾತ್ಯಾತೀತ ಶಕ್ತಿಗಳನ್ನು ಕಟ್ಟಿ ಬೆಳೆಸುವುದು ಕರ್ನಾಟಕದ ಜನತೆಯ ಆದ್ಯ ಕರ್ತವ್ಯವಾಗುತ್ತದೆ.

ಬಿಜೆಪಿಯ 'ತಾರೆ'ಮ್ಯಯ್ಯ ಉದಯ ಟೀವಿಗೆ ಜಾಲ?

ಕನ್ನಡದ ನಿವೃತ್ತ ಹೀರೋ ಶ್ರೀನಾಥ್‌ರವರು ಬಿಜೆಪಿ ಸೇರಿದ್ದು ಒಂದು ಸುದ್ದಿ. ಚುನಾವಣೆಗಳು ಹತ್ತಿರ ಬರುತ್ತಿರುವಂತೆ ಹಲವು ಮಾಜಿ ನಟರನ್ನು ಸೇರಿಸಿಕೊಳ್ಳುವುದು, ಬಿಜೆಪಿ ಪಾಲಿಸಿಕೊಂಡು ಬಂದ ಪ್ರಚಾರದ ಪಾಲಿಸಿ. ಇಂತಹ ಕೆಲ ಸಿನಿಮಾ ತಾರೆಗಳು, ಕ್ರಿಕೆಟ್ ತಾರೆಗಳು ರಾಜ್ಯದಲ್ಲಿ ಎಲ್ಲಾ ಸುತ್ತಾಡಿ ಬಿಜೆಪಿಗೆ ಮಾನ ತಂದುಕೊಡಲು ತಮ್ಮೆಲ್ಲಾ ಕೌಶಲ್ಯಗಳನ್ನು ಬಳಸುವುದು ಮಾಮೂಲಿನ ಕಥೆಯಲ್ಲವೇ ಎನ್ನಬೇಡಿ!


ಬಿಜೆಪಿಗೆ ಶ್ರೀನಾಥರವರ ಸೇರ್ಪಡೆಗೆ ಮಹತ್ವ ಬರುವುದು ಅವರು ಕನ್ನಡದ ಏಕೈಕ ಚಾನಲ್ ಆಗಿರುವ 'ಉದಯ ಟಿ.ವಿ' ಯ ಕರ್ನಾಟಕದ ಒಡೆಯರು ಎಂಬ ಕಾರಣಕ್ಕೆ. ಇತ್ತಿತ್ತಲಾಗಿ, ಕಳೆದ ಆರೆಂಟು ತಿಂಗಳಿನಿಂದ ಉದಯವಾರ್ತೆಗಳ ನೋಡುಗರಿಗೆ ಒಂದು ಭಿನ್ನರೀತಿಯ ದೃಶ್ಯಗಳು ಕಾಣತೊಡಗಿದ್ದವು. ಇದು ಹೀಗೇಕೆ ಎಂಬ ಪ್ರಶ್ನೆಗಳೂ ಹುಟ್ಟಿರಬಹುದು. ಈಗಾಗಲೇ ದೂರದರ್ಶನದಲ್ಲಿ ತೆರೆಯನ್ನು ಬಿಜೆಪಿ ಸಂಘಪರಿವಾರ ಹಾಗೂ ಆದ್ವಾನಿ ವಾಜಪೇಯಿ, ಮಹಾಜನ್ ಮುಂತಾದ ಚೋಟಾಮೋಟಾ ನಾಯಕರೂ ಬಹುಪಾಲು ಆಕ್ರಮಿಸಿ, ಉಳಿದ ಯಾವುದೇ ಪಕ್ಷಗಳಿಗೂ ಹೆಸರಿಗೊಂದು ಜಾಗ ನೀಡದ್ದು ಗಾಢವಾಗಿ ತಟ್ಟುತ್ತಿದ್ದು, ಆದರೆ ಹಿಂದೆ ಉದಯ ಟಿ.ವಿ. ಇದ್ದುದರಲ್ಲೇ ಬಹುತೇಕವಾಗಿ ಎಲ್ಲರಿಗೂ ಅವಕಾಶ ನೀಡುತ್ತಿತ್ತು. ಆದರೆ ಇತ್ತೀಚೆಗೆ ಮಾತ್ರ ಬಿಜೆಪಿಯ ಘಾಟು ಹೆಚ್ಚಾಗುತ್ತಾ ಹೋಗಿತ್ತು. ಸದಾ ಕಾಲ ಅದ್ವಾನಿಯವರನ್ನೇ, ಸಚಿವ ಅನಂತಕುಮಾರರವರನ್ನೇ, ಇವರ ಜೊತೆಗೆ ಯಡಿಯೂರಪ್ಪ ಈಶ್ವರಪ್ಪನವರೂ, ಬಿಜೆಪಿ ವರದಿಗಳು ಸಹ ಉದಯದಲ್ಲಿ ಹೆಚ್ಚು ಜಾಗ ಗಿಟ್ಟಿಸಿಕೊಂಡು ಜನ ಮನಸ್ಸನ್ನು ಘಟ್ಟಿಸತೊಡಗಿದ್ದವು.

ಈ ಬೆಳವಣಿಗೆಗಳ ಬಗ್ಗೆ ಸುದ್ದಿ ಮಾಧ್ಯಮದವರು ಹೇಳುವುದು ಹೀಗೆ-ಶ್ರೀನಾಥ್ ಸಚಿವ ಅನಂತಕುಮಾರ್‌ರವರ ಸ್ವಜಾತಿ ಬಾಂಧವ್ಯ. ಇನ್ನು ಕರ್ನಾಟಕದಲ್ಲಿ ಮೂಲೆ ಮೂಲೆಗಳಿಗೆ ಉದಯದ ಜಾಲ ಹೆಚ್ಚು ಜನಪ್ರಿಯವಾಗುತ್ತಿದ್ದುದು, ಮತ್ತು ಅದರ ಶಕ್ತಿ, ಹೀಗಾಗಿ ಚೆಡ್ಡಿಗಳು ಉದಯದ ಮೇಲೆ ಕಣ್ಣು ಹಾಕಿದರು. ಸಂಬಂಧಗಳು ಗಾಢಗೊಂಡವು. ಇವೆಲ್ಲವುಗಳಿಗೂ ಹೆಚ್ಚು ಅನುಕೂಲ ತಂದಿದ್ದು ತಮಿಳುನಾಡಿನ ಡಿ.ಎಂ.ಕೆ. ಪಕ್ಷ ಮತ್ತು ಬಿಜೆಪಿಯ ಹೊಸ ಮೈತ್ರಿ.

ಕನ್ನಡದ 'ಉದಯ ಟಿ.ವಿ'-ಚೆನ್ನೈನ ಸನ್ ನೆಟ್‌ವರ್ಕ್‌ನ ಅಂಗಸಂಸ್ಥೆ. 'ಸನ್' ಕರುಣಾನಿಧಿ ಮತ್ತವರ ಪರಿವಾರದವರ ಉಸ್ತುವಾರಿಯಲ್ಲಿದೆ. ಇದರ ಮುಖ್ಯಸ್ಥ ಮುರಸೋಳಿ ಮಾರನ್. ಶ್ರೀನಾಥ್ ಅದರ ಉಪಾಧ್ಯಕ್ಷರು.

ಸಾಧಾರಣವಾಗಿ ಆಡಳಿತ ಮಂಡಳಿಯಲ್ಲಿರುವವರು ಯಾವುದೇ ರಾಜಕೀಯ ಪಕ್ಷ ಸೇರಿರಬಾರದು ಎಂಬ ನಿಯಮವೇನೋ ಇದೆ. ಮೊದ ಮೊದಲು ಶ್ರೀನಾಥ್‌ರವರು ಬಿಜೆಪಿ ಸೇರಲು ಆಡಳಿತಮಂಡಳಿ ಆಕ್ಷೇಪ ಎತ್ತಿದ್ದರೂ, ನಂತರ ಸಚಿವ ಅನಂತಕುಮಾರ್ ಮತ್ತಿತರೆ ಕೇಂದ್ರ ಮುಖಂಡರ ಒತ್ತಾಯಕ್ಕೆ ಮಣಿದು ಅವಕಾಶ

ಪುಟ 4 ಕ್ಕೆ





ಭಾರತದ ದುಡಿಯುವ ಅಪ್ರತಿಮ ನೇತಾರನ ಐದು ದಶಕಗಳಿಗೂ ಮೀರಿದ 'ಮಾಸದ ನೆನಪು' ಗಳಲ್ಲಿ ಇದುವರೆಗೆ ಬಾಲ್ಯದಲ್ಲಿ ರಾಷ್ಟ್ರೀಯವಾದಿ ಆಂದೋಲನದ ಪ್ರಭಾವ, ಬ್ರಿಟನ್ನಿನಲ್ಲಿ ಅಂತರಾಷ್ಟ್ರೀಯ ರಾಜಕೀಯದ ಪ್ರಭಾವ, ಸಮಾಜವಾದ ಕಮ್ಯುನಿಸಂನತ್ತ ಒಲವಿನೊಂದಿಗೆ ಲಂಡನ್ ಬಿಟ್ಟು ಸ್ವದೇಶಕ್ಕೆ ಮರಳಿ ಪಕ್ಷದ ಪೂರ್ಣಕಾಲದ ಕಾರ್ಯಕರ್ತರಾಗಿ ದುಡಿಯಲಾರಂಭಿಸಿದಾಗ ಪಕ್ಷದ ಭೂಗತ ಮುಖಂಡರಿಗೆ ನೆಲೆ ಒದಗಿಸುವುದು, ಯಾತ್ರೆಗಳನ್ನು ಏರ್ಪಾಡು ಮಾಡುವುದು ಅವರ ಮುಖ್ಯ ಕೆಲಸವಾಗಿತ್ತು. ಮುಂದೆ ಓದಿ.....

ದುಡಿಯುವ ಜನರೊಂದಿಗೆ

1944 ರಲ್ಲಿ ದುಡಿಯುವ ಜನರ ಜತೆ ಕೆಲಸ ಮಾಡುವಂತೆ ಪಕ್ಷದ ನಾಯಕರು ನನಗೆ ಸೂಚಿಸಿದರೆಂಬ ನೆನಪು. ಆರಂಭದಲ್ಲಿ ನಾನು ಬಂದರು ಮತ್ತು ಧಕ್ಕೆ ಕಾರ್ಮಿಕರ ಜತೆ ಸಂಪರ್ಕ ಇಟ್ಟುಕೊಂಡೆ. ಯಾಕೆಂದರೆ ಈ ಎರಡೂ ವಿಭಾಗಗಳಲ್ಲಿ ನಮ್ಮ ಸಂಘಟನೆ ಅಷ್ಟೊಂದು ಬಲವಾಗಿರಲಿಲ್ಲ. ಈ ವಿಭಾಗಗಳ ಮಧ್ಯೆ ಸ್ವಲ್ಪ ಕೆಲಸ ಮಾಡಲು ಸಾಧ್ಯವಾದ ನಂತರ ನನ್ನನ್ನು ರೈಲ್ವೆ ಕಾರ್ಮಿಕರ ನಡುವೆ ಸಂಘಟನೆಗೆ ಕಳಿಸಲಾಯಿತು.

ಬಿ.ಎನ್. ರೈಲ್ವೆಯಲ್ಲಿ ಕಾರ್ಮಿಕ ಸಂಘ ಬೇಕೆಂದು ಒತ್ತಾಯಿಸಲು ಪಕ್ಷ 1944 ರಲ್ಲಿ ಪ್ರಯತ್ನಿಸಿತು. ನಾನೂ ಅದರ ಭಾಗವಾಗಿದ್ದೆ. ಮಹಮದ್ ಇಸ್ಮಾಯಿಲ್ ಮತ್ತು ನಿಖಿಲ್ ಮೈತ್ರಾರಂಥಾ ನಾಯಕರನ್ನು ನಾನು ಭೇಟಿಯಾದೆ. ಮೈತ್ರಾ ಅವರನ್ನು ಆನಂತರ ಪಕ್ಷದಿಂದ ಹೊರಹಾಕಲಾಯಿತು. ರೈಲ್ವೆ ನೌಕರರ ಸಂಘಟನೆಯ ಕೆಲಸದಲ್ಲಿ ನನಗೆ ನೆರವಾದವರ ಪೈಕಿ ಕೆಲವರ ಹೆಸರು ಮಾತ್ರ ನೆನಪಿದೆ. ನಿತ್ಯಾನಂದ ಚೌಧರಿ, ಅಮೂಲ್ಯ ಉಕಿಲ್, ಪೂರ್ಣೇಂದು ದತ್ತಾ ರಾಯ್, ಸತ್ಯೇನ್ ಗಂಗೂಲಿ ಮತ್ತು ಸತ್ಯ ಗುಪ್ತ.

ಈ ಅವಧಿಯಲ್ಲಿ ಸರೋಜ್ ಮುಖರ್ಜಿ ಬಹುದೊಡ್ಡ ಪಾತ್ರವನ್ನು ನಿರ್ವಹಿಸಿದ್ದರು. ಉಕಿಲ್ ಮತ್ತು ಇತರ ಕೆಲವರಿಗೆ ನನ್ನನ್ನು ಪರಿಚಯಿಸಿದ್ದೇ ಅವರು. ಟ್ರೇಡ್ ಯೂನಿಯನ್ ಚಟುವಟಿಕೆ ಹೆಚ್ಚುತ್ತಿತ್ತು. ಢಾಕಾದಿಂದ ಕರೆಗಳು ಬರುತ್ತಿದ್ದವು ಬಂಕಿಮ್ ಮುಖರ್ಜಿ ಮತ್ತು ಸರೋಜ್ ಮುಖರ್ಜಿ ಜತೆ ನಾನು ಪಾರ್ವತಿಪುರ, ಸೋಧಪುರ ಮೊದಲಾದ ಸ್ಥಳಗಳಿಗೆ ಹೋಗಬೇಕಾಗುತ್ತಿತ್ತು.

ಕಷ್ಟದ ಕೆಲಸ

ನಂತರದ ದಿನಗಳಲ್ಲಿ ರಾಣಿಗಂಜ್ ಪುರಸಭೆಯ ಅಧ್ಯಕ್ಷರಾಗಿ ಪ್ರಸಿದ್ಧರಾದ ಕಮಾನಿಯಾ ದಾಸ್‌ಗುಪ್ತಾ ಸೋಧಪುರದ ಕಾರ್ಮಿಕ ವಲಯಗಳಲ್ಲಿ ಜನಪ್ರಿಯರಾಗಿದ್ದರು. ಸರೋಜ್ ಬಾಬು ಪ್ರಾಂತೀಯ ಸಮಿತಿಯ ಸದಸ್ಯ ಕಾರ್ಯದರ್ಶಿಯಾಗಿ ಅದರ ಕಾರ್ಯಚಟುವಟಿಕೆಗಳಿಗೆ ಹೆಚ್ಚಿನ ಗಮನ ನೀಡುತ್ತಿದ್ದರು.

ಬಿ.ಎನ್. ರೈಲ್ವೆ ನೌಕರರ ಸಂಘ ಎಂಬ ಒಂದು ಸಂಘ ಆಗಲೇ ಇದ್ದಿದ್ದರಿಂದ ರೈಲ್ವೆಯಲ್ಲಿ ಯೂನಿಯನ್ ಬೆಳೆಸುವುದು ತುಂಬಾ ಕಷ್ಟದ ಕೆಲಸವಾಗಿತ್ತು. ಹುಮಾಯೂನ್ ಕಬೀರ್ ನಂತರ ಈ ಸಂಘದ ಅಧ್ಯಕ್ಷರಾದರು.

ಸೀಲ್ದಾ, ಹೌರಾ, ಕಂಚರಪುರಾ ಮತ್ತು ಅಸ್ಸಾಮ್‌ನ ಗಡಿ ಭಾಗಗಳಲ್ಲಿರುವ ಸ್ಥಳಗಳಿಗೆ ನಾವು ಓಡಾಡಬೇಕಿತ್ತು. ಅಂತಿಮವಾಗಿ 1944 ರಲ್ಲಿ ಬಿಎನ್. ರೈಲ್ವೇಸ್ ಕಾರ್ಮಿಕರ ಸಂಘ ಸ್ಥಾಪನೆಯಾಯಿತು. ನಾನು ಪ್ರಧಾನಕಾರ್ಯದರ್ಶಿ, ಬಂಕಿಮ್ ಮುಖರ್ಜಿ ಅಧ್ಯಕ್ಷರು.

ಆಗಿನ್ನೂ ಯುದ್ಧ ನಿಂತಿರಲಿಲ್ಲ. ರೈಲು ಪ್ರಯಾಣ ಶ್ರಮದಾಯಕವಾಗಿತ್ತು. ಪ್ರಯಾಣದಲ್ಲಿ ನಾನು ಒಂದು ಬ್ಯಾಗನ್ನು ಮಾತ್ರ ಒಯ್ಯುತ್ತಿದ್ದೆ.

ದಣಿವರಿಯದೆ ನಮ್ಮ ಕೆಲಸವನ್ನು ಮುಂದುವರಿಸಿದೆವು. ಪೂರ್ವ ಬಂಗಾಳ, ಉತ್ತರ ಬಂಗಾಳ ಮತ್ತು ಅಸ್ಸಾಂನಲ್ಲಿ ಬಲು ಬೇಗನೆ ಶಾಖೆಗಳು ಬೆಳೆದವು. ವಿರೋಧಿ ಸಂಘಟನೆ ನಮ್ಮ ವಿರುದ್ಧ ಅಪಪ್ರಚಾರ ನಡೆಸಲು ಎಲ್ಲಾ ಪ್ರಯತ್ನಗಳನ್ನು ಮಾಡಿತು.

ಜಲಪಾಯ್‌ಗುರಿಯ ಡೊಮೊಹಂಜ್ ಎಂಬಲ್ಲಿ ಒಂದು ಸಣ್ಣ ಮಾನ್ಯತೆ ಪಡೆದ ಸಂಘವಿತ್ತು. ಬಿ.ಡಿ. ರೈಲ್ ರೋಡ್ ವರ್ಕರ್ಸ್ ಯೂನಿಯನ್ ಅದರ ಹೆಸರು. ಅದರ ಪ್ರಧಾನ ಕಾರ್ಯದರ್ಶಿಯಾಗಿದ್ದ ಬೀರೇನ್ ದಾಸ್ ಗುಪ್ತಾ ನಂತರ ನಮ್ಮ ಪಕ್ಷದ ಸದಸ್ಯರಾದರು. ಪರಿಮಳ ಮಿತ್ರ ಈ ಸಂಘದ ಉಪಾಧ್ಯಕ್ಷರಾಗಿದ್ದರು. ನಂತರ ಅವರು ಪಶ್ಚಿಮ ಬಂಗಾಳದ ಎಡರಂಗ ಸರಕಾರದಲ್ಲಿ ಅರಣ್ಯ ಮತ್ತು ಪ್ರವಾಸೋದ್ಯಮ ಮಂತ್ರಿಯಾದರು.

ಬಹಳ ಸಮಯದ ನಂತರ ಬಿ.ಎನ್. ರೈಲ್ವೆ ವರ್ಕರ್ಸ್ ಯೂನಿಯನ್ ಮತ್ತು ಬಿ.ಡಿ. ರೈಲ್ವೆ ರೋಡ್ ವರ್ಕರ್ಸ್ ಯೂನಿಯನ್ ವಿಲೀನಗೊಂಡವು. ಮಹಮದ್ ಇಸ್ಮಾಯಿಲ್ ಹೊಸ ಅಧ್ಯಕ್ಷರಾದರು. ಪರಿಮಳ ಮಿತ್ರಾ ಉಪಾಧ್ಯಕ್ಷರು. ನಾನು ಅದರ ಪ್ರಧಾನ ಕಾರ್ಯದರ್ಶಿ ಹಾಗೂ ಬೀರೇನ್ ದಾಸ್ ಗುಪ್ತಾ ಜಂಟಿ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾದೆವು.

ಕಮಲ್ ಸರ್ಕಾರ್ ಮತ್ತು ಮದ್ರಾಸ್‌ನ ಕೃಷ್ಣಮೂರ್ತಿ ಅವರನ್ನು ಕಾರ್ಯಕಾರಿ ಸಮಿತಿಗೆ ಸೇರಿಸಿಕೊಂಡೆವು. 'ರೈಲ್ ಮಜ್ದೂರ್' ಎಂಬ ಪತ್ರಿಕೆಯನ್ನು ಆರಂಭಿಸಿದೆವು. ಪರಿಮಳ ಮಿತ್ರ ಅದರ ಸಂಪಾದಕರಾದರೂ ಆಡಳಿತದ ಕೆಲಸವೆಲ್ಲಾ ಕಮಲ್ ಸರ್ಕಾರ್ ನೋಡಿಕೊಳ್ಳುತ್ತಿದ್ದರು.

ಗೆಲುವು..... ಗೆಲುವು

ಒಬ್ಬ ಬ್ರಿಟಿಷ್ ಬಿ.ಎನ್. ರೈಲ್ವೇಸ್‌ನ ಜನರಲ್ ಮ್ಯಾನೇಜರ್ ಆಗಿದ್ದರು. ನಮ್ಮ ಸಂಘಕ್ಕೆ ಅಧಿಕೃತ ಮಾನ್ಯತೆ ನೀಡಲೇಬೇಕೆಂದು ಒತ್ತಾಯಿಸಿದೆವು. ಆಡಳಿತ ವರ್ಗ ಮೀನ ಮೇಷ ಎಣಿಸಿತು. ಕೊನೆಗೂ ನಮಗೆ ಮಾನ್ಯತೆ ಸಿಕ್ಕಿತು. ನಮ್ಮ ಉತ್ಸಾಹ ಇಮ್ಮಡಿಗೊಂಡಿತು. ಕೆಲವು ಸೌಲಭ್ಯಗಳೂ ಸಿಕ್ಕಿದವು. ಮಾನ್ಯತೆ ಪಡೆದ ಸಂಘದ ಪ್ರಧಾನ ಕಾರ್ಯದರ್ಶಿ ಆಗಿದ್ದರಿಂದ ರೈಲ್ವೆ ಪ್ರಯಾಣಕ್ಕಾಗಿ ಪ್ರಥಮ ದರ್ಜೆ ಪಾಸ್ ನನಗೆ ದೊರೆಯಿತು. ಕಾರ್ಮಿಕ ವರ್ಗದ ಮೇಲಿನ ನಮ್ಮ ಪ್ರಭಾವ ದಿನದಿಂದ ದಿನಕ್ಕೆ ಬಲಗೊಳ್ಳುತ್ತಿತ್ತು.

ಅಖಿಲ ಭಾರತ ರೈಲ್ವೆ ಕಾರ್ಮಿಕರ ಒಕ್ಕೂಟ (AIRF) ಸುಧಾರಣವಾದಿಗಳಿಂದ ತುಂಬಿಹೋಗಿತ್ತು. ನಮ್ಮ ಸಂಘವನ್ನು ಒಕ್ಕೂಟದಲ್ಲಿ ಸೇರಿಸಿಕೊಳ್ಳಬೇಕೆಂಬ ಮನವಿಯನ್ನು ಅವರು ನಿರ್ಲಕ್ಷಿಸಿದರು.

ಆದರೆ ಕೊನೆಗೂ ಜಯ ನಮ್ಮದಾಯಿತು. ಇದಕ್ಕೂ ಮುಂಚೆ ಪಕ್ಷದ ನೇತೃತ್ವದ ಎಸ್.ಐ.ಆರ್ ವರ್ಕರ್ಸ್ ಯೂನಿಯನ್ ಅನ್ನು ಎ.ಐ.ಆರ್.ಎಫ್.ಗೆ ಸೇರಿಸಿಕೊಳ್ಳಲಾಗಿತ್ತು. ಇತರ ಕೆಲವು ಕಾರ್ಮಿಕ ಸಂಘಗಳಲ್ಲೂ ನನ್ನನ್ನು ತೊಡಗಿಸಿಕೊಂಡೆ.

ಒಂದು ಅನಿರೀಕ್ಷಿತ ಘಟನೆ

ಕೆಲವು ಅನಿರೀಕ್ಷಿತ ಘಟನೆಗಳು ನಡೆದವು. ಭಂಡಾರ್‌ಕರ್ ಎನ್ನುವವರು ಈಸ್ಟ್ ಬೆಂಗಾಲ್ ರೈಲ್ವೇಸ್‌ನ ಜನರಲ್ ಮ್ಯಾನೇಜರ್ ಆಗಿದ್ದರು ಅವರ ಮಗನಿಗೆ ಕಮ್ಯುನಿಸ್ಟ್ ಚಳುವಳಿ ಬಗ್ಗೆ ಸಹಾನುಭೂತಿಯಿತ್ತು. ಕೇಂಬ್ರಿಜ್‌ನಲ್ಲಿ ಶಿಕ್ಷಣ ಪಡೆದು ಮರಳಿದ ಆತ ವಾಣಿಜ್ಯ ಸಂಸ್ಥೆಯೊಂದರ ಉನ್ನತ ಹುದ್ದೆಗೆ ಸೇರಿಕೊಂಡ.

ಆತ ಅಕಾಲಿಕವಾಗಿ ನಿಧನಹೊಂದಿದ. ಸಾಯುವ ವೇಳೆ ಆತನ ಬಳಿ ಉಳಿತಾಯ ಮಾಡಿದ್ದ 10 ಸಾವಿರ ರೂಪಾಯಿ ಇತ್ತು. ಅದನ್ನು ಆತನ ತಂದೆ ನಮಗೆ ನೀಡಿದರು. ಮಗನ ರಾಜಕೀಯ ಒಲವಿನ ಬಗ್ಗೆ ತಮಗೆ ತಿಳಿದಿತ್ತು ಎಂದವರು ಹೇಳಿದರು. ಮಗ ಉಳಿಸಿದ ಹಣವನ್ನು ಪಕ್ಷದ ನೆರವಿಗೆ ಬಂದರಷ್ಟೇ ಅದು ಸಾರ್ಥಕ ಎಂಬ ಭಾವನೆಯಿಂದ ಭಂಡಾರ್‌ಕರ್ ಅದನ್ನು ನಮಗೆ ಕೊಟ್ಟರು.

ರೈಲ್ವೆ ಕಾರ್ಮಿಕರು ಆರ್ಥಿಕ ಪ್ರಶ್ನೆಗಳನ್ನಷ್ಟೆ ಮುಂದಿಟ್ಟು ಸಂಘಟಿತಗೊಳ್ಳದೆ ರಾಜಕೀಯ ಸಿದ್ಧಾಂತವೊಂದರ ಪರಿಚಯವನ್ನು ಪಡೆಯತೊಡಗಿದರು ರೈಲ್ವೆ ಕಾರ್ಮಿಕರು ಅನೇಕ ಸಂದರ್ಭಗಳಲ್ಲಿ ರಾಜಕೀಯ ಪ್ರಶ್ನೆಗಳನ್ನು ಎತ್ತಿಕೊಂಡು ಮುಷ್ಕರ ನಡೆಸಿದರು.

ಸಾಮ್ರಾಜ್ಯ ಶಾಹಿಯನ್ನು ನಡುಗಿಸಿದ ಸಂಘರ್ಷ

ನಾವಿಕರು ಬಂಡೆದ್ದರು. ಮುಂಬಯಿ ಬಂದರಿನಲ್ಲಿ ಭಾರತೀಯ ನೌಕಾಪಡೆ ಸೈನಿಕರು ಹೊಸ ಇತಿಹಾಸವೊಂದನ್ನು ಬರೆಯುತ್ತಿದ್ದರು. ಇಡೀ ದೇಶಕ್ಕೆ ದೇಶವೇ ತಲ್ಲಣಗೊಂಡಿತು. 24 ಗಂಟೆಯೊಳಗೆ ಶರಣಾಗಬೇಕೆಂದು ಬ್ರಿಟಿಷ್ ನೌಕಾಪಡೆಯ ಅಡ್ಮಿರಲ್ ಗಡುವು ನೀಡಿದ. ಇಲ್ಲದಿದ್ದರೆ ಬಂಡಾಯಗಾರರಿದ್ದ ನೌಕೆಯನ್ನು ಮುಳುಗಿಸುವುದಾಗಿಯೂ ಆತ ಬೆದರಿಕೆ ಹಾಕಿದ.

ಕಲ್ಕತ್ತದ ಚೌಬಜಾರ್ ಬೀದಿಯ 249 ನೇ ಸಂಖ್ಯೆಯ ಕಟ್ಟಡದಲ್ಲಿ ಬಿಪಿಟಿಯುಸಿ (Bengal Pradesh Trade Union Congress) ಕಚೇರಿಯಿತ್ತು. ಅಲ್ಲಿ ಸಭೆ ಸೇರಿದ ನಾವು ಪ್ರತಿ ಆಕ್ರಮಣದ ಯೋಜನೆಯನ್ನು ರೂಪಿಸಿದೆವು. ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳಿಗೆ ಒಂದು ಪಾಠ ಕಲಿಸಬೇಕಿತ್ತು. 24 ಗಂಟೆಗಳ ರೈಲ್ವೆ ಮುಷ್ಕರಕ್ಕೆ ಕರೆ ಕೊಟ್ಟೆವು. ಒಂದೇ ಒಂದು ಬೋಗಿಯೂ ಚಲಿಸಬಾರದು. ಏನೇನೂ ಕೆಲಸ ನಡೆಯಬಾರದು. ಪೂರ್ಣ ಬಂದ್ ನಡೆಯಬೇಕೆಂಬುದು ನಮ್ಮ ಯೋಜನೆಯಾಗಿತ್ತು. ಆದರೆ ನಾವು ಯಶಸ್ವಿ ಆದೇವೇ ಎಂಬ ಅನುಮಾನವೂ ನಮ್ಮ ನಡುವೆ ಇತ್ತು.

ಹೌದು, ನಾವು ಯಶಸ್ವಿಯಾದೆವು. ರೈಲ್ವೆ ಕಾರ್ಮಿಕ ವರ್ಗ ಸಾಮ್ರಾಜ್ಯಶಾಹಿ ವಿರೋಧಿ ಹೋರಾಟದಲ್ಲಿ ಒಂದು ಹೊಸ ದೃಷ್ಟಾಂತವನ್ನೇ ಸೃಷ್ಟಿಸಿತು.

(ಮುಂದುವರಿಯುವುದು)

ಕುಂಟು ನೆಪಗಳು ಬೇಡ..........

2ನೇ ಪುಟದಿಂದ

ಮಹತ್ವದ ಪ್ರಶ್ನೆ ಮುಂದಿರುವಾಗ ರಾಜ್ಯಸಭೆಯ ವಿಶೇಷ ಅಧಿವೇಶನ ಕರೆಯಬೇಕು ಎಂದು ಒತ್ತಾಯಿಸುತ್ತಿವೆ.

ಆದರೆ ವಾಜಪೇಯಿ ಸರಕಾರ ಕಳೆದ ಮೂರು ವಾರಗಳಿಂದ ಇದಕ್ಕೆ ಕುಂಟುನೆಪಗಳನ್ನು ಒಡ್ಡುತ್ತಾ ಬರುತ್ತಿದೆ. ರಾಜ್ಯಸಭೆಯ ಅಧಿವೇಶನ ಕರೆದರೆ ಪರಸ್ಪರ ದೂಷಣೆಯ ಚರ್ಚೆ ನಡೆಯುತ್ತದೆ, ಇದರಿಂದ ನಮ್ಮ ಸೈನಿಕರ ಮನೋಸ್ಥೈರ್ಯದ ಮೇಲೆ ಕೆಟ್ಟ ಪರಿಣಾಮವಾಗುತ್ತದೆ, ಆದ್ದರಿಂದ ವಿಶೇಷ ಅಧಿವೇಶನದ ಮಾತು ಬೇಡ ಎಂಬುದೊಂದು ವಾದ. ಗಡಿ ಘರ್ಷಣೆ ನಡೆಯುತ್ತಿರುವಾಗ ರಾಜ್ಯಸಭೆಯ ಅಧಿವೇಶನ ಸಲ್ಲದಂತೆ. ಹಾಗಿದ್ದರೆ ಒಂದು ವೇಳೆ ಲೋಕಸಭೆ ಇದ್ದಿದ್ದರೆ ಇದೇ ತರ್ಕ ಬಳಸಿ ಲೋಕಸಭೆಯ ಅಧಿವೇಶನಕ್ಕೂ ಆಕ್ಷೇಪ ಬರುತ್ತಿತ್ತೇ? ಸಂಸತ್ತು ಯುದ್ಧದ ಸಮಯದಲ್ಲಿ ಅಧಿವೇಶನ ನಡೆಸಬಾರದೆಂಬ ತರ್ಕವನ್ನು ಇನ್ನು ಮುಂದೊಯ್ದರೆ ಈಗ ಇರುವ ಪರಿಸ್ಥಿತಿಯಲ್ಲಿ ಸಾಮಾನ್ಯ ಪ್ರಜಾಪ್ರಭುತ್ವ ಕಾರ್ಯನಿರ್ವಹಣೆಗಳನ್ನೆಲ್ಲಾ ಸದ್ಯಕ್ಕೆ ನಿಲ್ಲಿಸಿ ತುರ್ತು ಪರಿಸ್ಥಿತಿ ಹೇರಬೇಕೆಂದೇ ಅರ್ಥವಾಗುತ್ತದೆ. ಇದನ್ನು ಯಾವ ಪ್ರಜಾಪ್ರಭುತ್ವವಾದಿಯೂ ಒಪ್ಪಲು ಸಾಧ್ಯವಿಲ್ಲ.

ರಾಜ್ಯಸಭೆಯಲ್ಲಿ ಇಂತಹ ಮಹತ್ವದ ಪ್ರಶ್ನೆಯ ಬಗ್ಗೆ ಗಂಭೀರವಾದ, ಮಾಹಿತಿಪೂರ್ಣವಾದ ಚರ್ಚೆ ನಡೆಯುವುದಿಲ್ಲ ಎಂಬುದು ಸಂಸದೀಯ ಪ್ರಜಾಪ್ರಭುತ್ವದ ಬಗ್ಗೆ ಜನಗಳ ಪ್ರಜ್ಞಾಹೀನತೆಯ ಬಗ್ಗೆ ಅನುಮಾನ, ತಿರಸ್ಕಾರ ಇರುವವರು ಮಾತ್ರ ಮುಂದಿಡಬಹುದಾದ ಕುತರ್ಕ. ಕಾರ್ಗಿಲ್ ಪ್ರಶ್ನೆಯನ್ನು ನಿರ್ವಹಿಸಿದ ರೀತಿ, ಮಿಲಿಟರಿ ರಂಗದಲ್ಲಿ, ರಾಜತಾಂತ್ರಿಕ ರಂಗದಲ್ಲಿ ಏನೇನು ಮಾಡಬಹುದಿತ್ತು ಎಂಬ ಬಗ್ಗೆ ಗಂಭೀರ ವಿಮರ್ಶೆ ಹಾನಿಕಾರಕ ಎಂಬ ನಿಲುವು ಬಾಲಿಶವೆಂದೇ ಹೇಳಬೇಕಾಗುತ್ತದೆ. ಪಾಕಿಸ್ತಾನ ನಿಯಂತ್ರಣ ರೇಖೆಯನ್ನು ಏಕೆ ಉಲ್ಲಂಘಿಸಿತು, ಅದನ್ನು ಸೂಕ್ತ ಸಮಯದಲ್ಲಿ ಏಕೆ ಗಮನಿಸಲಿಲ್ಲ ಎಂಬ ಚರ್ಚೆ ನಡೆಸಿ, ತಮ್ಮ ಮುಂದಿರುವ ಮಾಹಿತಿಗಳ ಆಧಾರದಲ್ಲಿ ಸೂಕ್ತ ತೀರ್ಮಾನಕ್ಕೆ ಬಂದು ಪಾಕಿಸ್ತಾನದ ಆಕ್ರಮಣಕಾರಿ ಪ್ರಯತ್ನಗಳನ್ನು ತಡೆಯಲು ಕೈಗೊಳ್ಳಬೇಕಾದ ಕ್ರಮಗಳನ್ನು ನಿರ್ಧರಿಸುವ ಹಕ್ಕು ರಾಜ್ಯಸಭೆಗೆ ಖಂಡಿತಾ ಇದೆ. ಕೇವಲ ರಾಜಕೀಯ ಪಕ್ಷಗಳೊಂದಿಗೆ ಆಗೊಮ್ಮೆ-ಈಗೊಮ್ಮೆ ಸಮಾಲೋಚನೆನಡೆಸಿದರೆ ಸಾಲದು. (ಎರಡು ಬಾರಿ ಸಭೆ ಕರೆಯಲಾಗಿದೆಎಂದು ಹೇಳಲಾಗುತ್ತಿದೆ. ನಿಜವಾಗಿ ಈ ಆರುವಾರಗಳಲ್ಲಿ ಸರ್ವಪಕ್ಷ ಸಭೆ ನಡೆದದ್ದು ಜೂನ್ 28 ರಂದು ಮಾತ್ರ) ಜೂನ್ 24 ರಂದು ನಡೆದ ಸರ್ವಪಕ್ಷ ಸಭೆಯಲ್ಲಿ ರಾಜ್ಯಸಭೆಯ ವಿಶೇಷ ಅಧಿವೇಶನ ಕರೆಯಬೇಕು, ರಾಜ್ಯಗಳೊಂದಿಗೆ ನಿಕಟ ಸಂಯೋಜನೆಗೆ ಮುಖ್ಯಮಂತ್ರಿಗಳ ಸಭೆ ಕರೆಯಬೇಕು ಎಂದು ಸಿಪಿಐ(ಎಂ) ಸೂಚಿಸಿತು. ಈಗ ಜುಲೈ 7 ರಂದು ಮುಖ್ಯಮಂತ್ರಿಗಳ ಸಭೆ ಕರೆಯಲಾಗಿದೆ. ಈ ಮೂಲಕ ರಾಜ್ಯಸಭೆಯ ಅಧಿವೇಶನದಿಂದ ತಪ್ಪಿಸಿ ಕೊಳ್ಳಬಹುದು ಎಂದು ಬಿಜೆಪಿ ಯೋಚಿಸುವಂತಿಲ್ಲ.

ಬಿಜೆಪಿ ಏಕೆ ಹೀಗೆ ಹಿಂದೇಟು ಹಾಕುತ್ತದೆ ಎಂಬುದೂ ಕೂಡಾ ಪರಿಶೀಲಿಸಬೇಕಾಗ ಸಂಗತಿ. ಎಂಟು ದೊಡ್ಡ ದೇಶಗಳ (ಜಿ-8) ಸಭೆಯ ಮೊದಲು ಅಧ್ಯಕ್ಷ ಕ್ಲಿಂಟನ್‌ಗೆ ವಾಜಪೇಯಿಯವರು ಪತ್ರ ಕಳಿಸಿದ್ದರಂತೆ. ಅದರ ಬಗ್ಗೆ ಸರಕಾರ ದೇಶಕ್ಕೆ ಏನೂ ಮಾಹಿತಿ ನೀಡಿಲ್ಲ. ಈ ಪತ್ರದ ಪರಿಣಾಮವಾಗಿ ಪಾಕಿಸ್ತಾನಕ್ಕೆ ಅಮೆರಿಕನ್ ಸೇನಾಪಡೆಗಳ ಸೆಂಟ್ರಲ್ ಕಮಾಂಡ್‌ನ ಸೇನಾಧಿಪತಿ ಜನರಲ್ ಝಿನ್ನಿ ಪಾಕಿಸ್ತಾನಕ್ಕೆ ಭೇಟಿ ನೀಡಿದರು. ಅವರ ಬೆನ್ನಹಿಂದೆಯೇ ಅಮೆರಿಕದ ಉಪಸಹಾಯಕ ವಿದೇಶಾಂಗ ಕಾರ್ಯದರ್ಶಿಲಾಂಫರ್ ನವದೆಹಲಿಗೆ ಬಂದರು. ಅದೇ ವೇಳೆಗೆ ಪಾಕಿಸ್ತಾನದ ಮಾಜಿ ವಿದೇಶಾಂಗ ಕಾರ್ಯದರ್ಶಿ ನಿಯಾಝ್ ನಾಯಕ್ ಕೂಡಾ ದಿಲ್ಲಿಗೆ ಬಂದು ಹೋದರು. ಇವರು ಯಾವಾಗ ಬಂದರು, ಏಕೆ ಬಂದರು, ಏನು ಮಾತನಾಡಿದರು ಎಂಬುದನ್ನು ಗುಟ್ಟಾಗಿಡಲು ಸರಕಾರ ಪ್ರಯತ್ನಿಸುತ್ತಿದೆ. ಪೋಖ್ರಾನ್ ಸ್ಫೋಟದ ನಂತರ ಅಮೆರಿಕಾದ ಸ್ಟ್ರೋಬ್ ಟಾಲ್ಬೋಟ್ ಮತ್ತು ಭಾರತದ ಜಸ್ವಂತ್ ಸಿಂಗ್ ನಡುವೆ ನಡೆದ ಗುಪ್ತ ಮಾತುಕತೆಗಳ ಮುಂದುವರಿಕೆಯಂತೆ ಇವು ಕಾಣುತ್ತದೆ. ಮತ್ತೆ ಮತ್ತೆ ಅಮೆರಿಕಾ ವಿನಂತಿಸಿಕೊಂಡ ಈ ಘರ್ಷಣೆಯಲ್ಲಿ ಅದು ಮಧ್ಯಸ್ಥಿಕೆ ವಹಿಸಲು ವಾಜಪೇಯಿ ಸರಕಾರ ಅವಕಾಶ ಮಾಡಿ ಕೊಡುತ್ತಿದೆಯೇ, ಒಂದು ಗುಟ್ಟಿನ ಇತ್ಯರ್ಥಕ್ಕೆ ಪ್ರಯತ್ನ ನಡೆದಿದೆಯೇ ಎಂಬ ಸಂದೇಹವೂ ಬರುತ್ತಿದೆ. ಆದ್ದರಿಂದಲೇ ರಾಜ್ಯಸಭೆಯ ಅಧಿವೇಶನವನ್ನು ಕರೆಯಲು ಅದು ಹಿಂದೇಟು ಹಾಕುತ್ತಿದೆಯೇ? ಹಾಗಿದ್ದರೆ ಕಾಶ್ಮೀರದ ವಿಷಯದಲ್ಲಿ ಅಮೆರಿಕಾವನ್ನು ಒಳಗೊಳ್ಳುವುದನ್ನು ವಾಜಪೇಯಿ ಸರಕಾರ ತಕ್ಷಣ ನಿಲ್ಲಿಸಬೇಕು ಎಂದು ಎಚ್ಚರಿಸಬೇಕಾಗುತ್ತದೆ. ಅದು ಈಗಲೂ ಇಡೀ ಕಾಶ್ಮೀರ 'ಒಂದು ವಿವಾದಿತ ಪ್ರದೇಶ' ಎಂಬ ನಿಲುವು ತಳೆದಿರುವ ದೇಶ, ತನ್ನ ಸಂಕುಚಿತ ಹಿತಸಾಧನೆಗಾಗಿ ಕಾಶ್ಮೀರ ಒಂದು ಸ್ವತಂತ್ರ ದೇಶವಾಗಿರಬೇಕು ಎಂದು ಬಯಸುವಂತದ್ದು ಎಂಬುದನ್ನು ಬಿಜೆಪಿ ಮರೆಮಾಚಲು ಪ್ರಯತ್ನಿಸುತ್ತಿರುವಂತಿದೆ.

ಇಂತಹ ಆಟಗಳನ್ನಾಡದೆ ತಕ್ಷಣವೇ ರಾಜ್ಯಸಭೆಯ ವಿಶೇಷ ಅಧಿವೇಶನವನ್ನು ಕರೆಯಲಿ, ಇಡೀ ದೇಶದ ದೃಢ ನಿರ್ಧಾರ ರಾಜ್ಯಸಭೆಯ ಮೂಲಕ ವ್ಯಕ್ತಗೊಳ್ಳಲಿ.

'ತಾರೆ'ಮ್ಮಯ್ಯ..............

3ನೇ ಪುಟದಿಂದ

ಕೊಡಲಾಯಿತು ಎಂಬ ಮಾತೂ ಇದೆ. ಆದರೆ ಡಿಎಂಕೆ-ಬಿಜೆಪಿ ಮೈತ್ರಿಯ ಹೊಸ ಬದಲಾದ ಸನ್ನಿವೇಶವು ಶ್ರೀನಾಥ್ ಹಾಗೂ ಉದಯ ನೆಟ್‌ವರ್ಕ್‌ನ್ನು ಬಳಸಲು ಬಿಜೆಪಿಗೆ ಹೆಚ್ಚಿನ ಅವಕಾಶಗಳನ್ನು ಒದಗಿಸಿಕೊಟ್ಟಿದೆ. 80 ರ ದಶಕದ ಪ್ರಣಯರಾಜನಿಗೆ ಹೊಸ ಹುಮ್ಮಸ್ಸು ಹುಟ್ಟಿಸಿದೆ. ರಾಜಕೀಯ ಸ್ಥಾನಗಳ ಕನಸು ಹಚ್ಚಿಸಿದೆ.

ಮಾಧ್ಯಮ ಲೋಕದ ಮಹಾದೈತ್ಯ ಮರ್ಡೋಕ್‌ನ ಎದುರು ಪ್ರಾದೇಶಿಕ ಚಾನೆಲ್ ಒಂದು ಬದುಕುಳಿಯುತ್ತಿದೆ ಎಂಬುದೇ ಮುಖ್ಯವಾಗಿದ್ದು ಈ ಸನ್ನಿವೇಶದಲ್ಲಿ ಬಿಜೆಪಿ ಸಂಘ ಪರಿವಾರದಂತಹ ಫ್ಯಾಸಿಸ್ಟ್ ಮನೋಭಾವದ ಶಕ್ತಿಗಳತ್ತ ಅದು ಸರಿಯುತ್ತಿದೆ ಎಂಬುದೇ ಆತಂಕಕಾರಿ ವಿಷಯ. ಎಲ್ಲಾ ವಿಭಾಗಗಳ, ಜನಾಂಗಗಳ ಹಲವು ಪ್ರೇಕ್ಷಕರನ್ನು ಗಳಿಸಿರುವ ಉದಯ, ಎಲ್ಲರ ಮನಸ್ಸುಗಳಿಗೆ ವಿಷ ಪ್ರಾಶನ ಮಾಡುವುದು ಸುಲಭವೇನಲ್ಲ.

ಅಹೋರಾತ್ರಿ ಶ್ರಮಿಸುವ ಸಂಪಾದಕರು, ವರದಿಗಾರರು ಅವರ ಧ್ವನಿ ಅಡಗಿಸಲಾಗುತ್ತಿದೆ ಎಂಬ ಮಾತೂ ಕೇಳುತ್ತಿದೆ.

ಆರ್.ಎಸ್.ಎಸ್.ನ ಫ್ಯಾಸಿಸ್ಟ್ ಮನೋಭಾವದ ಸಿದ್ಧಾಂತವನ್ನು, ಬಿಜೆಪಿಯ ಕೊಳಕು ರಾಜಕೀಯವನ್ನು ವಿರೋಧಿಸುವ ನೆಟ್‌ವರ್ಕ್‌ನ ಒಳಗಿನ, ಹೊರಗಿನ ಜಾಗೃತ ವೀಕ್ಷಕರು ಮಾಧ್ಯಮದವರು ಕ್ರಿಯಾಶೀಲರಾಗಬೇಕಿದೆ. ಈ ನಡುವೆ ತೆಲುಗುದೇಶಂನ ಚಂದ್ರಬಾಬು ನಾಯ್ಡು ಜೊತೆಗಿರುವ ರಾಮೋಜಿ ರಾವ್‌ರವರ 'ಈ ಟಿ.ವಿ' ಈ ವರ್ಷದ ಕೊನೆಯಲ್ಲಿ ಕನ್ನಡದಲ್ಲಿ ಚಾನೆಲ್ ಆರಂಭಿಸುವ ಸುದ್ದಿಯೂ ಬಂದಿದೆ.

ಮಾಧ್ಯಮಗಳ ಮಲಿನತೆಗೆ ಪ್ರತಿರೋಧಿಸುವ ಮನಸ್ಸುಗಳು ಸಿದ್ಧಗೊಳ್ಳಬೇಕಿದೆ.

ಎಸ್.ವೈ.ಜೆ.

ಕಾರ್ಮಿಕ ಚಳುವಳಿಯನ್ನು ಹತ್ತಿಕ್ಕುವ ಪೋಲೀಸ್ ದುರ್ನೀತಿ

ಕಾರ್ಮಿಕರ ಪ್ರತಿಭಟನೆ



ಬೆಂಗಳೂರನ್ನು ಹಾಗೂ ಕರ್ನಾಟಕದ ದುಡಿಯುವ ಜನರ ಶ್ರಮವನ್ನು ಬಹುರಾಷ್ಟ್ರೀಯ ಕಂಪನಿಗಳಿಗೊಪ್ಪಿಸುವ ಭರದಲ್ಲಿ ಜನತಾದಳ ಸರ್ಕಾರ ಕಾರ್ಮಿಕ ಪ್ರತಿಭಟನೆಯನ್ನು ಹತ್ತಿಕ್ಕಲು, ಪ್ರಜಾಸತ್ತಾತ್ಮಕ ಚಳುವಳಿಯನ್ನು ಹತ್ತಿಕ್ಕಲು ಪೋಲೀಸರನ್ನು ಹರಿಯಬಿಟ್ಟಿದೆ. ಇದರಿಂದ ಭ್ರಷ್ಟ ಪೋಲೀಸ್ ವ್ಯವಸ್ಥೆಗೆ ಕೋತಿಗೆ ಹೆಂಡ ಕುಡಿಸಿದಂತಾಗಿದೆ. ಈ ಬಗ್ಗೆ 'ಐಕ್ಯರಂಗ'ದಲ್ಲಿ ವಿಶೇಷ ವರದಿಯನ್ನು ನೀವು ಓದಿದ್ದೀರಿ. ಈ ಪೋಲೀಸ್ ಹಾವಳಿಯ ವಿರುದ್ಧ ನಡೆದ ಪ್ರತಿಭಟನೆ ವಿಧಾನಸಭೆಯಲ್ಲಿ ಎದ್ದ ಕೂಗು ರಾಜ್ಯದ ಕಾರ್ಮಿಕರೆಲ್ಲರನ್ನೂ ಬಡಿದೆಬ್ಬಿಸಬೇಕು.

ರಾಜ್ಯ ಸರ್ಕಾರದ ಕಾರ್ಮಿಕ ವಿರೋಧಿ ನೀತಿ ಪ್ರತಿಭಟಿಸಿ ರಾಜ್ಯಾದ್ಯಂತ ಜೂನ್ 28 ರಂದು ಪ್ರತಿಭಟನೆಗೆ ಸೆಂಟರ್ ಆಫ್ ಇಂಡಿಯನ್ ಟ್ರೇಡ್ ಯೂನಿಯನ್ (ಸಿಐಟಿಯು) ಕರ್ನಾಟಕ ರಾಜ್ಯ ಸಮಿತಿ ಕರೆ ನೀಡಿತ್ತು.

ಇದರ ಅಂಗವಾಗಿ ಬೆಂಗಳೂರು ಜಿಲ್ಲಾ ಸಮಿತಿಯು ಮೈಸೂರುಬ್ಯಾಂಕ್ ವೃತ್ತದಿಂದ ಬನಪ್ಪ ಪಾರ್ಕ್‌ವರೆಗೆ ಸಿಐಟಿಯು ರಾಜ್ಯ ಪ್ರಧಾನ ಕಾರ್ಯದರ್ಶಿ ವಿ.ಜೆ.ಕೆ.ನಾಯರ್‌ರವರ ನೇತೃತ್ವದಲ್ಲಿ ಬೃಹತ್ ಪ್ರತಿಭಟನೆ ಮೆರವಣಿಗೆ ನಡೆಸಿತು. ಪವರ್ ಲೂಂ, ವಿಪ್ರೋ, ಐ.ಟಿ.ಸಿ., ಬಿ.ಪಿ.ಎಲ್. ಇನ್ನಿತರೆ ಕಾರ್ಖಾನೆಗಳಿಂದ ನೂರಾರು ಕಾರ್ಮಿಕರು ಸರ್ಕಾರದ ಹಾಗೂ ಪೋಲೀಸರ ದೌರ್ಜನ್ಯದ ವಿರುದ್ಧ ಘೋಷಣೆಗಳನ್ನು ಕೂಗುತ್ತಾ ಪ್ರತಿಭಟನಾ ಮೆರವಣಿಗೆಯಲ್ಲಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು. ಪೋಲೀಸರು ವ್ಯವಸ್ಥಿತವಾಗಿ ಕಾರ್ಮಿಕರು ಪ್ರತಿಭಟನಾಮೆರವಣಿಗೆ ಮಾಡಬಾರದೆಂದು ವಿಧಾನಸೌಧದ ಸುತ್ತಾ 144 ಸೆಕ್ಷನ್ ಜಾರಿಯ ನೆಪ ತೋರಿಸಿ ಮತ ಪ್ರದರ್ಶನ ಮಾಡದಂತೆ ತಡೆಯೊಡ್ಡಿದರು. ಇದ್ಯಾವುದನ್ನು ಲೆಕ್ಕಿಸದೆ ಕಾರ್ಮಿಕರು ಮೆರವಣಿಗೆಯಲ್ಲಿ ಭಾಗವಹಿಸಿದ್ದರು.

ಮೆರವಣಿಗೆಯ ನಂತರ ಪ್ರತಿಭಟನಾ ಸಭೆಯಲ್ಲಿ ವಿ.ಜೆ.ಕೆ.ನಾಯರ್ ಮಾತನಾಡುತ್ತಾ ಜೆ.ಹೆಚ್.ಪಟೇಲ್‌ರ ಕಾರ್ಮಿಕ ವಿರೋಧಿ ನೀತಿಯ ಧೋರಣೆಯನ್ನು ತರಾಟೆಗೆ ತೆಗೆದುಕೊಂಡರು. ನಮ್ಮ ರಾಜ್ಯದಲ್ಲಿ ಪ್ರಜಾಪ್ರಭುತ್ವ ಉಳಿಯಬೇಕಾದರೆ ಇವತ್ತಿನ ಪ್ರತಿಭಟನಾ ಕಾರ್ಯಕ್ರಮ ಅತಿಮುಖ್ಯವಾಗಿದೆ, ಕಾರ್ಮಿಕರ ನ್ಯಾಯಪರ ಬೇಡಿಕೆಗಳನ್ನು ಕೇಳಿದರೆ ಕಾರ್ಮಿಕರನ್ನು ಹಾಗೂ ಮುಖಂಡರನ್ನು ಜೈಲಿನಲ್ಲಿ ಇಟ್ಟಿದ್ದಾರೆ, ಇದರಲ್ಲೇ ಗೊತ್ತಾಗುತ್ತದೆ ಜನತಾದಳ ಸರ್ಕಾರ ಮಾಲಿಕರ ಜೊತೆ ಶಾಮೀಲಾಗಿದೆಯೆಂದು. ಆದ್ದರಿಂದ ದುಡಿಯುವ ವರ್ಗವಾದ ನಾವು ಇಂದೂ ನಮ್ಮ ಪ್ರಜಾಪ್ರಭುತ್ವದ ರಕ್ಷಣೆಗಾಗಿ ಮತ ಪ್ರದರ್ಶನ ನಡೆಸಬೇಕಾಗಿದೆ. ಕಾರ್ಮಿಕ ವರ್ಗ ನಾವೆಲ್ಲಾ ಒಂದಾಗಿ ಸರ್ಕಾರದ ಈ ಧೋರಣೆಯನ್ನು ವಿರೋಧಿಸೋಣ ಎಂದರು.

ಜಿಲ್ಲಾ ಕಾರ್ಯದರ್ಶಿ ಮೀನಾಕ್ಷಿ ಸುಂದರಂ ಮನವಿ ಪತ್ರವನ್ನು ಪ್ರತಿಭಟನಾ ಸಭೆಯ ಮುಂದೆ ವಿವರವಾಗಿ ಓದಿದರು. ಹೆಜ್ಜಾಲ, ಫೋರೆಸ್ಸ್, ಬಿ.ಪಿ.ಎಲ್., ದಾಂಡೇಲಿಯ ವೆಸ್ಟ್ ಕೋಸ್ಟ್ ಪೇಪರ್ ಮಿಲ್, ಗುಲ್ಬರ್ಗದ ಮಳಖೇಡದ ರಾಜಶ್ರೀ ಸಿಮೆಂಟ್ ಕಾರ್ಖಾನೆಗಳ ಕಾರ್ಮಿಕ ಮುಖಂಡರ ಮೇಲೆ ಹಾಕಿರುವ ಎಲ್ಲಾ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕು, ಇನ್ನೂ ಮುಂತಾದ ಪ್ರಮುಖ ಬೇಡಿಕೆಗಳು ಮನವಿ ಪತ್ರದಲ್ಲಿದ್ದವು. ಆನಂತರ ಗೃಹಸಚಿವ ಪಿ.ಜಿ.ಆರ್. ಸಿಂಧ್ಯರವರಿಗೆ ಕಾರ್ಮಿಕ ನಾಯಕರುಗಳಾದ ವಿ.ಜೆ.ಕೆ. ನಾಯರ್, ಗೋಪಾಲಗೌಡ, ಮೀನಾಕ್ಷಿ ಸುಂದರಂ ಮನವಿ ಪತ್ರವನ್ನು ಸಲ್ಲಿಸಿದರು. ಹಲವು ಸಂಘಗಳ ನಾಯಕರು ಪ್ರತಿಭಟನಾ ಸಭೆಯನ್ನು ಉದ್ದೇಶಿಸಿ ಮಾತನಾಡಿದರು. ಕೊನೆಗೆ ಸಿಐಟಿಯು ರಾಜ್ಯ ಕಾರ್ಯದರ್ಶಿ ಇ.ಕೆ.ಎನ್. ರಾಜನ್‌ರವರ ಭಾಷಣ ದೊಂದಿಗೆ ಪ್ರತಿಭಟನಾ ಕಾರ್ಯಕ್ರಮ ಮುಕ್ತಾಯವಾಯಿತು.

ಗೃಹಸಚಿವ ಸಿಂಧ್ಯಾರವರೊಡನೆ ಮಾತುಕತೆ

ಪ್ರತಿಭಟನಕಾರರ ಪರವಾಗಿ ವಿಧಾನಸೌಧಕ್ಕೆ ತೆರಳಿದ ಸಿಐಟಿಯು ನಾಯಕರ ತಂಡ ಗೃಹಸಚಿವರನ್ನು ಕಂಡು ಮಾತುಕತೆ ನಡೆಸಿತು. ಜುಲೈ ಆರರಂದು ಸಿಐಟಿಯು ನಾಯಕರನ್ನು ಭೇಟಿಯಾಗಿ ಪ್ರತಿಯೊಂದು ಕೇಸುಗಳನ್ನು ಪರಿಶೀಲಿಸಿ ಬಗೆಹರಿಸಲಾಗುವುದೆಂದು ಗೃಹ ಸಚಿವರು ಆಶ್ವಾಸನೆಯಿತ್ತರು.

ವಳ್ಳಿಯಪ್ಪ ಟೆಕ್ಸ್‌ಟೈಲ್ ಹೋರಾಟದ ಸಂದರ್ಭದಲ್ಲಿ 1999 ರಲ್ಲೇ 19 ಸುಳ್ಳು ಕೇಸುಗಳನ್ನು ಪೋಲೀಸರು ಕಾರ್ಮಿಕರು ಹಾಗೂ ಕಾರ್ಮಿಕ ಮುಖಂಡರ ಮೇಲೆ ಹಾಕಿದ್ದಾರೆ. ಸುಮಾರು 20 ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಇವನ್ನು ಹಾಕಲಾಗಿದೆ. ಇವುಗಳಲ್ಲಿ 13 ಕೇಸುಗಳು ರಾಮನಗರ ಕೋರ್ಟ್‌ನಲ್ಲಿ ವಿಚಾರಣೆಗೊಳಪಟ್ಟಿದ್ದರೆ, ನಾಲ್ಕು ಬೆಂಗಳೂರಿನ ಮೆಟ್ರೋಪಾಲಿಟನ್ ಕೋರ್ಟ್‌ನಲ್ಲಿ ಹಾಗೂ ಒಂದು ಗ್ರಾಮೀಣ ಸೆಶನ್ಸ್ ಕೋರ್ಟ್‌ನಲ್ಲಿ, ಇನ್ನೊಂದು ಗ್ರಾಮೀಣ ಅಡಿಶನಲ್ ಸೆಶನ್ಸ್ ಕೋರ್ಟಿನಲ್ಲಿದೆ. ಒಟ್ಟು 250 ಕ್ಕೂ ಹೆಚ್ಚು ಮಂದಿಯ ಮೇಲೆ ಈ ಸುಳ್ಳು ಕೇಸುಗಳು ಇವೆ.

ಫೋರೆಸ್ ಕಾರ್ಮಿಕ ಮುಖಂಡರು ಹಾಗೂ ಕಾರ್ಯಕರ್ತರ ಮೇಲೆ 13 ಕೇಸುಗಳು ನಡೆಯುತ್ತಿವೆ, 13 ವಿವಿಧ ಸೆಕ್ಷನ್‌ಗಳಡಿ, ನೂರಕ್ಕೂ ಹೆಚ್ಚು ಮಂದಿಯ ಮೇಲೆ ಪೋಲೀಸರು ಸುಳ್ಳು ಆಪಾದನೆಗಳನ್ನು ಹಾಕಿದ್ದಾರೆ. ಒಂದು ಕೇಸನ್ನಂತೂ ಎಲ್ಲಾ ಕಾರ್ಮಿಕರ ಮೇಲೆ ಹಾಕಲಾಗಿದೆ.

ಜೂನ್ 28 ರಂದು ಸಿಐಟಿಯು ಅರ್ಪಿಸಿದ ಮನವಿ ಪತ್ರದಲ್ಲಿ ಈ ಎಲ್ಲಾ ಕೇಸುಗಳ ವಿವರಗಳನ್ನು ಕೊಡಲಾಗಿದೆ.

ವಿಧಾನ ಸಭೆಯಲ್ಲಿ

ಜನಪ್ರತಿನಿಧಿಯಿಂದ ಪ್ರತಿಧ್ವನಿ

ಜಿ.ವಿ. ಶ್ರೀರಾಮರೆಡ್ಡಿ(ಬಾಗೇಪಲ್ಲಿ):- ಮಾನ್ಯ ಉಪಾಧ್ಯಕ್ಷರೆ, ಇದು ಬಹಳ ಪ್ರಮುಖವಾದಂಥ ವಿಷಯವಾಗಿರುವುದರಿಂದ ಮಾನ್ಯ ಗೃಹಮಂತ್ರಿಗಳು ಸ್ವಲ್ಪ ಗಮನ ಹರಿಸಬೇಕೆಂದು ವಿನಂತಿ. ಬೆಂಗಳೂರು ನಗರದಲ್ಲಿ ಮತ್ತು ಕರ್ನಾಟಕ ರಾಜ್ಯದಲ್ಲಿ ಕಾರ್ಮಿಕರು ನಡೆಸತಕ್ಕಂಥ ಚಳುವಳಿಯಲ್ಲಿ ಪೊಲೀಸ್‌ನವರು ಮಧ್ಯೆ ಪ್ರವೇಶ ಮಾಡಿ ಕಾರ್ಮಿಕ ಮುಖಂಡರಿಗೆ ಮತ್ತು ಕಾರ್ಮಿಕರಿಗೆ ತೀವ್ರ ರೀತಿಯಾದ ಹಿಂಸೆ ಮತ್ತು ಕಿರುಕುಳ ಕೊಡತಕ್ಕಂತದ್ದು ಮತ್ತು ಸುಳ್ಳು ಮೊಕದ್ದಮೆಗಳನ್ನು ಹಾಕಿ ಅವರನ್ನು ಜೈಲಿಗೆ ಕಳುಹಿಸತಕ್ಕಂಥ ಒಂದು ವ್ಯವಸ್ಥಿತವಾದಂಥ ಪಿತೂರಿ ಪೊಲೀಸರಿಂದ ನಡೆಯುತ್ತಿದೆ. ಇದು 1997ನೇ ಇಸವಿಯಿಂದ ಈಚೆಗೆ, ಅಂದರೆ ವಳ್ಳಿಯಪ್ಪ ಟೆಕ್ಸ್‌ಟೈಲ್ಸ್ ಕಾರ್ಖಾನೆಯಲ್ಲಿ ಗೋಲಿಬಾರ್ ಆಗಿ ಜನ ಸತ್ತ ಮೇಲೆ ಪೋಲೀಸರ ಕಿರುಕುಳ ಜಾಸ್ತಿಯಾಗಿದೆ. ಪೀಣ್ಯ ಎಸ್ಟೇಟ್‌ನಲ್ಲಿ ಮತ್ತು ಕಾಮಾಕ್ಷಿಪಾಳ್ಯ ಮತ್ತು ಬಿಪಿಎಲ್ ಕಾರ್ಮಿಕರ ಮೇಲೆ ನಡೆದ ಘಟನಾವಳಿಗಳು ಮತ್ತು ಇನ್ನೂ ಹಲವಾರು ಪ್ರಸಂಗಗಳಿವೆ. ನಾನು ಈಗ ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. 1997 ರಿಂದ ಈಚೆಗೆ ಕರ್ನಾಟಕ ರಾಜ್ಯದಲ್ಲಿ ಅದರಲ್ಲಿಯೂ ಪ್ರತ್ಯೇಕವಾಗಿ ಬೆಂಗಳೂರು ನಗರದಲ್ಲಿ ಕಾರ್ಮಿಕರ ಮುಷ್ಕರದಲ್ಲಿ ಪೊಲೀಸ್‌ನವರು ಮಧ್ಯೆ ಪ್ರವೇಶ ಮಾಡುವುದು ಯಾವ ಕಾನೂನಿನಲ್ಲಿದೆ ಎಂಬುದು ನನಗೆ ಅರ್ಥವಾಗುತ್ತಿಲ್ಲ. ಸುಳ್ಳು ಮೊಕದ್ದಮೆ ಹಾಕಿರತಕ್ಕಂಥ ಒಂದು ಉದಾಹರಣೆಯನ್ನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ ಒಬ್ಬ ಮಹಿಳಾ ಕಾರ್ಮಿಕ ಮುಖಂಡರಾಗಿರುವ ವರಲಕ್ಷ್ಮಿಯವರ ಮೇಲೆ 307 ನೇ ಸೆಕ್ಷನ್ ಕೇಸ್ ಸೇರಿ 26 ಮೊಕದ್ದಮೆಗಳನ್ನು ಹಾಕಿದ್ದಾರೆ. ಇದುವರೆಗೂ ಅವರಿಗೆ ನೋಟೀಸ್ ಕೊಟ್ಟಿಲ್ಲ. ವಳ್ಳಿಯಪ್ಪ ಟೆಕ್ಸ್‌ಟೈಲ್ಸ್‌ನ ಎನ್‌ಕ್ವೈರಿ ಆಗತಕ್ಕಂಥ ಸಂದರ್ಭದಲ್ಲಿ ಕ್ರಾಸ್ ಎಗ್ಸಾಮಿನೇಶನ್ ಮಾಡುವಾಗ ನಿಮ್ಮ ಮೇಲೆ 32 ಮೊಕದ್ದಮೆಗಳಿವೆ ಎಂದು ಹೇಳಿದ್ದಾರೆ. ಆದರೆ, ಇದುವರೆಗೆ ಯಾವುದೇ ಚಾರ್ಜ್ ಶೀಟ್ ಮತ್ತು ಕೇಸ್‌ನ್ನು ಸಹ ಹಾಕಿಲ್ಲ. ಈ ರೀತಿಯಲ್ಲಿ ಕಾರ್ಮಿಕರ ಮೇಲೆ ತೀವ್ರ ರೀತಿಯಾದ ಕಿರುಕುಳ ನಡೆಯುತ್ತಿದೆ ಮತ್ತು ಪೋಲೀಸರ ಹಸ್ತಕ್ಷೇಪ ಮತ್ತು ಮಧ್ಯೆ ಪ್ರವೇಶ ವಿಪರೀತವಾಗುತ್ತಿದೆ. ಇದನ್ನು ತಪ್ಪಿಸಬೇಕು. ಕಾರ್ಮಿಕರ ಚಳುವಳಿ ಪ್ರಜಾಪ್ರಭುತ್ವದ ಚಳುವಳಿ. ಪ್ರಜಾಪ್ರಭುತ್ವದ ರೀತಿಯಲ್ಲಿ ನಡೆಯತಕ್ಕಂಥ ಚಳುವಳಿಯನ್ನು ದಮನ ಮಾಡತಕ್ಕಂತ ಹಕ್ಕು ಅಥವಾ ಮಧ್ಯೆ ಪ್ರವೇಶ ಮಾಡತಕ್ಕಂತ ಹಕ್ಕು ಯಾವುದೇ ಕಾನೂನಿನಲ್ಲಿ ಪೋಲೀಸರಿಗೆ ಇಲ್ಲ. ಏಕೆ ಈ ರೀತಿ ಆಗುತ್ತಿದೆ? ಪೋಲೀಸರ ಹಸ್ತಕ್ಷೇಪ ಮತ್ತು ಸುಳ್ಳು ಮೊಕದ್ದಮೆಗಳನ್ನು ಹಾಕುವುದನ್ನು ತಡೆಹಿಡಿಯಬೇಕು ಮತ್ತು ಈಗ ಹಾಕಿರತಕ್ಕಂಥ ಸುಳ್ಳು ಮೊಕದ್ದಮೆಗಳನ್ನು ವಾಪಸು ಪಡೆಯಬೇಕು. ಇದಕ್ಕೆ ಸೂಕ್ತ ಉತ್ತರ ಕೊಡಬೇಕೆಂದು ತಮ್ಮ ಮುಖಾಂತರ ಸರ್ಕಾರವನ್ನು ಕೇಳಿಕೊಳ್ಳುತ್ತೇನೆ.

ಪಿ.ಜಿ.ಆರ್.ಸಿಂಧ್ಯಾ (ಗೃಹ ಮಂತ್ರಿಗಳು): - ಮಾನ್ಯ ಉಪಾಧ್ಯಕ್ಷರೆ ಕಾರ್ಮಿಕರ ಮೇಲೆ ಪೋಲಿಸರು ಹಾಕಿರತಕ್ಕಂಥ ಸುಳ್ಳು ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳಬೇಕೆಂದು ಮಾನ್ಯ ಸದಸ್ಯರು ಪ್ರಸ್ತಾಪ ಮಾಡಿದ್ದಾರೆ. ಹಾಗೆಯೇ ಕಾರ್ಮಿಕರ ಮೇಲೆ ಪೋಲೀಸ್‌ನವರು ಹೆಚ್ಚು ಕಿರುಕುಳವನ್ನು ಕೊಡುತ್ತಿದ್ದಾರೆಂದು ಹಾಗೂ ಕೆಲವು ಕಾರ್ಮಿಕ ಸಮಸ್ಯೆಗಳ ಬಗ್ಗೆ ಸ್ಪೆಸಿಫಿಕ್ ಆಗಿ ಪ್ರಸ್ತಾಪ ಮಾಡಿದ್ದಾರೆ. ಮೊದಲನೆಯದಾಗಿ, ನನಗೆ ಗೊತ್ತಿರುವ ಹಾಗೆ ಯಾವುದೂ ಸುಳ್ಳು ಮೊಕದ್ದಮೆಗಳನ್ನು ಹಾಕಿಲ್ಲ. ಆದರೆ, ಕೆಲವು ಸಂದರ್ಭದಲ್ಲಿ ಸಾರ್ವಜನಿಕ ಹಿತದೃಷ್ಟಿಯಿಂದ ಮೊಕದ್ದಮೆಗಳನ್ನು ಹಾಕಿರುತ್ತಾರೆ. ಇದನ್ನು ವಾಪಸ್ಸು ಪಡೆಯುವುದಕ್ಕೆ ನಾನು ಕೂಡ ಮಾನ್ಯ ಸದಸ್ಯರ ಅಭಿಪ್ರಾಯವನ್ನು ಒಪ್ಪುತ್ತೇನೆ. ಪ್ರಜಾತಂತ್ರವ್ಯವಸ್ಥೆಯಲ್ಲಿ ಅವರ ಹಕ್ಕುಗಳಿಗೋಸ್ಕರ ಹೋರಾಟ ಮಾಡತಕ್ಕಂಥ ಹಕ್ಕು ಪ್ರತಿಯೊಬ್ಬರಿಗೂ ಇರುತ್ತದೆ. ಇಂಥ ರೈತರ ಚಳುವಳಿ, ಕಾರ್ಮಿಕರ ಚಳುವಳಿ ಅಥವಾ ವಿದ್ಯಾರ್ಥಿಗಳ ಚಳುವಳಿ, ಯಾವುದೇ ಜನಪರವಾಗಿರತಕ್ಕಂಥ ಹೋರಾಟದಲ್ಲಿ ಹಾಕಿರತಕ್ಕಂಥ ಮೊಕದ್ದಮೆಗಳನ್ನು ವಾಪಸ್ಸು ಪಡೆಯತಕ್ಕಂಥ ಒಂದು ತತ್ವ, ನೀತಿ, ಸಿದ್ಧಾಂತಕ್ಕೆ ನಮ್ಮ ಸರ್ಕಾರ ಬದ್ಧವಾಗಿದೆ. ಇಂಥ ಹೋರಾಟದ ಹಿನ್ನೆಲೆಯಲ್ಲಿ ಹಾಕಿರತಕ್ಕಂಥ ಯಾವುದೇ ಮೊಕದ್ದಮೆಗಳನ್ನು ನಾನು ವಾಪಸ್ಸು ಪಡೆಯತಕ್ಕಂಥ ಭರವಸೆಯನ್ನು ತಮ್ಮ ಮುಖಾಂತರ ಮಾನ್ಯ ಸದಸ್ಯರಿಗೆ ಕೊಡುತ್ತೇನೆ. ಈ ದಿವಸ ಸಿಐಟಿಯು ಸದಸ್ಯರಾದ ನನ್ನ ಮಿತ್ರ ಸನ್ಮಾನ್ಯ ನಾಯರ್‌ರವರು ನನ್ನ ಜೊತೆಯಲ್ಲಿ ತುರ್ತು ಪರಿಸ್ಥಿತಿಯಲ್ಲಿದ್ದಂತ ಸಂದರ್ಭದಲ್ಲಿ 20 ತಿಂಗಳು ಜೈಲಿನಲ್ಲಿದ್ದರು. ಇವರು ನನಗೆ ಒಳ್ಳೆಯ ಸ್ನೇಹಿತರು. ಇವತ್ತು ಬಂದು ನನ್ನ ಹತ್ತಿರ ಚರ್ಚೆ ಮಾಡಿದರು. ಬಿಪಿಎಲ್ ಮತ್ತು ವಳ್ಳಿಯಪ್ಪ ಟೆಕ್ಸಟೈಲ್ ಇತ್ಯಾದಿ ಸಂಸ್ಥೆಗಳಲ್ಲಿ ಆಡಳಿತ ವರ್ಗ ಮತ್ತು ಕಾರ್ಮಿಕರ ನಡುವೆ ಇರತಕ್ಕಂಥ ಭಿನ್ನಾಭಿಪ್ರಾಯ ಮತ್ತು ಚಳುವಳಿ ಮಾಡಿರತಕ್ಕಂಥ ಸಂದರ್ಭದಲ್ಲಿ ಪೋಲೀಸರು ಕೆಲವು ಅಪಾದನೆಗಳನ್ನು ಮಾಡಿದ್ದಾರೆ. ಇದಕ್ಕೋಸ್ಕರವೇ ನಾನು ಸಿಐಟಿಯು ಎಲ್ಲಾ ಸದಸ್ಯರಿಗೂ ಮುಂದಿನ ವಾರದಲ್ಲಿ ಅವರಿಗೆ ಅನುಕೂಲಕ್ಕೆ ತಕ್ಕಂತೆ ಒಂದು ಸಭೆಯನ್ನು ಕರೆಸುತ್ತಿದ್ದೇನೆ. ಈ ಸಭೆಗೆ ಪೋಲೀಸ್ ಇಲಾಖೆಯ ಹಿರಿಯ ಅಧಿಕಾರಿಗಳು ಮತ್ತು ಕಾರ್ಮಿಕ ಇಲಾಖೆಯ ಅಧಿಕಾರಿಗಳು ಸಹ ಬರುತ್ತಾರೆ. ಮಾನ್ಯ ಶ್ರೀರಾಮರೆಡ್ಡಿಯವರಿಗೂ ತಮ್ಮ ಮುಖಾಂತರ ಈ ಸಭೆಗೆ ಆಹ್ವಾನವನ್ನು ಕೊಡುತ್ತೇನೆ. ಈ ಸಭೆಯಲ್ಲಿ ನಾವೆಲ್ಲರೂ ಕುಳಿತು ಚರ್ಚೆ ಮಾಡೋಣ. ಸಾರ್ವಜನಿಕರ ಹಿತದೃಷ್ಟಿಯಿಂದ ಮತ್ತು ಕಾರ್ಮಿಕರ ಹಿತಾಸಕ್ತಿಯಿಂದ ಎಲ್ಲಿ ಹಿಂಸಾತ್ಮಕ ಘಟನೆಗಳು ನಡೆದಿಲ್ಲ ಮತ್ತು ಅಹಿಂಸಾತ್ಮಕ ರೀತಿಯಲ್ಲಿ ಎಲ್ಲಿ ಚಳುವಳಿ ನಡೆದಿದೆ ಅಂಥ ಚಳುವಳಿಗಳಲ್ಲಿ ಇರತಕ್ಕಂಥ ಎಲ್ಲಾ ಮೊಕದ್ದಮೆಗಳನ್ನು ವಾಪಸ್ಸು ತೆಗೆದುಕೊಳ್ಳತಕ್ಕಂಥ ಭರವಸೆ ಮತ್ತೊಮ್ಮೆ ಕೊಡುತ್ತೇನೆ ಮತ್ತು ಈ ರೀತಿಯ ಕಿರುಕುಳಗಳ ಬಗ್ಗೆ ವಿಶೇಷವಾಗಿ ನನ್ನ ಗಮನಕ್ಕೆ ತಂದಲ್ಲಿ ಇವುಗಳನ್ನು ತಪ್ಪಿಸುವುದಕ್ಕೂ ಸಹ ನಾನು ಕ್ರಮ ಕೈಗೊಳ್ಳುತ್ತೇನೆ. ಅನೇಕ ಸಂದರ್ಭದಲ್ಲಿ ಪೋಲೀಸ್‌ನವರು ಇಂಥ ಮುಷ್ಕರಗಳಲ್ಲಿ ಏಕೆ ಮಧ್ಯೆ ಪ್ರವೇಶ ಮಾಡುತ್ತಾರೆಂದರೆ, ಪೋಲೀಸ್ ಇಲಾಖೆಯವರು ಕಾನೂನಿನ ಸುವ್ಯವಸ್ಥೆಯನ್ನು ಕಾಪಾಡುವ ದೃಷ್ಟಿಯಿಂದ ಸಂಬಂಧಪಟ್ಟ ಇಲಾಖೆಯವರ ಜೊತೆ ಚರ್ಚೆ, ಸಂಧಾನ ಮಾಡುವ ದೃಷ್ಟಿಯಿಂದ ಕೆಲವು ಸಂದರ್ಭಗಳಲ್ಲಿ ಮಧ್ಯೆ ಪ್ರವೇಶ ಮಾಡುತ್ತಾರೆ. ಇವರು ಮಧ್ಯೆ ಪ್ರವೇಶ ಮಾಡುವುದರಿಂದ ಅನೇಕ ಸಂದರ್ಭಗಳಲ್ಲಿ ಕಾನೂನಿನ ಪರಿಸ್ಥಿತಿಯನ್ನು ಹದಗೆಡದಂತೆ ನೋಡಿಕೊಳ್ಳುವುದಷ್ಟೇ ಅಲ್ಲದೆ, ಅನೇಕ ಸಮಸ್ಯೆಗಳು ಬಗೆಹರಿದಿರತಕ್ಕಂಥ ಪರಿಸ್ಥಿತಿಗಳು ಇವೆ. ಇತ್ತೀಚಿನ ದಿನಗಳಲ್ಲಿ ಸಂಘಟನಾ ಸಂಸ್ಥೆಗಳು ಮತ್ತು ಸಂಘಟನಾ ಕಾರ್ಮಿಕರು ಹಾಗೂ ಎಲ್ಲಾ ವರ್ಗದ ಜನರು ಹೋರಾಟ ಮಾಡುತ್ತಿರುವುದು ಎಲ್ಲರಿಗೂ ಗೊತ್ತಿದೆ. ಇದರಲ್ಲಿ ಕೆಲವು ನ್ಯಾಯಸಮ್ಮತವಾದ ಚಳುವಳಿ ಇರುತ್ತವೆ, ಕೆಲವು ನ್ಯಾಯಸಮ್ಮತವಾಗಿರುವುದಿಲ್ಲ. ಇದು ತಮಗೂ ಗೊತ್ತಿದೆ. ಸರಿ ಇರತಕ್ಕಂಥ ವಿಚಾರಗಳಲ್ಲಿ ಪೋಲೀಸರು ಮಧ್ಯೆ ಪ್ರವೇಶ ಮಾಡಿ ಅವುಗಳನ್ನು ಬಗೆಹರಿಸಿದ್ದಾರೆ. ಮುಂದು ಇದೇ ವಿಧಾನವನ್ನು ಅನುಸರಿಸಿಕೊಂಡು ಹೋಗುತ್ತಾರೆ.

ಚುನಾವಣೆಗಳು ಹತ್ತಿರ ಬರುತ್ತಿವೆ. ಚುನಾವಣೆ ಹತ್ತಿರ ಬರುತ್ತಿದ್ದಂತೆ ಎಲ್ಲಾ ಮಾಧ್ಯಮಗಳು ಚುನಾವಣೆ ಸುದ್ದಿ ನೀಡಲು ಸಿದ್ಧವಾಗುತ್ತಿವೆ. ಸ್ಯಾಟಲೈಟ್/ಕೇಬಲ್ ಟೀವಿ ಚಾನೆಲ್‌ಗಳು ಈ ಬಾರಿ ಚುನಾವಣೆಯ ಮೇಲೆ ಮಹತ್ವದ ಪರಿಣಾಮ ಬೀರಲಿವೆ. ಮನರಂಜನೆ ಕಾರ್ಯಕ್ರಮಗಳ ಮೂಲಕ ಜನರನ್ನು ಆಕರ್ಷಿಸುವ ಆಕಾಶದಿಂದ ಧರೆಗಿಳಿದ ರಂಭೆಯಂತಿದ್ದ ಕೇಬಲ್ ಟೀ.ವಿ. ಚಾನೆಲ್‌ಗಳು ಈಗ ಸುದ್ದಿ, ಪ್ರಚಲಿತ ವಿದ್ಯಮಾನಗಳತ್ತ ಲಗ್ಗೆ ಹಾಕಿವೆ: ಈ ಚಾನಲ್‌ಗಳ ಸ್ವರೂಪ, ಒಡೆತನ, ಪರಿಣಾಮಗಳ ಮೇಲೆ ಬೆಳಕು ಚೆಲ್ಲುವ ಲೇಖನ.

ಆಕಾಶದಿಂದ ಧರೆಗಿಳಿದ ರಂಭೆಯರು!

ಈಗ ಸುದ್ದಿಗಳತ್ತ ಖಾಸಗೀ ಚಾನಲ್‌ಗಳ ಲಗ್ಗೆ


ಶರತ್ ಚಂದ್ರ

ಭಾನುವಾರ ಬೆಳಗ್ಗೆ ಪೇಫಾಽಽರ್ ಪೇಫಾಽಽರ್ ಅಂತ ಹಳೆ ಪೇಪರ್ ವಾಲಾ ಕೂಗಿಕೊಂಡು ಹೋಗುತ್ತಿದ್ದ. ಹಳೆ ಪೇಪರ್ ಕೊಡುತ್ತಿದ್ದಂತೆ ಪೇಪರ್‌ವಾಲಾ ಮಾತಿಗಿಳಿದ. ಈ ಕೆಲಸ ಬಿಟ್ಟು ಬಿಡೋಣ ಅಂತಿದ್ದಿನಿ ಅಂದ. 'ಯಾಕೆ? ಅಂದೆ. ಬೆಳಗ್ಗೆ ಒಂದು ಗಂಟೆಯಿಂದ ತಿರುಗಿಕೊಳ್ತಾ ಇದ್ದೀನಿ. ನೀವೇ ಫಸ್ಟ್ ಗಿರಾಕಿ. ಯಾರನ್ನ ಕೇಳಿದ್ರೂ ನಾವು ಪೇಪರ್ ನಿಲ್ಲಿಸಿ ಬಿಟ್ಟಿದ್ದೀವಿ. ಸನ್ ಟೀವಿ, ಝಿ ಟೀವಿ, ಉದಯ ಟೀವಿ ಸ್ಟಾರ್ ಟೀವಿ ನಲ್ಲಿ ನಮಗೆ ಬೇಕಾದಷ್ಟು ನ್ಯೂಸ್ ಬರ್ತದೆ ಇನ್ನು ಪೇಪರ್ ಯಾಕೆ ಅನ್ತಾರೆ. ನೀವು ಇನ್ನೂ ಮೂರು ಪೇಪರ್ ತಗೊಳ್ತಾ ಇದ್ದೀರಾ ಅಂತ ಆಶ್ಚರ್ಯಪಟ್ಟ.

ನನಗೆ ಕೇಬಲ್/ ಸ್ಯಾಟಲೈಟ್ ಟೀವಿ ಚಾನೆಲ್‌ಗಳು ಸರ್ವ ವ್ಯಾಪಿಯಾಗಿ ಪ್ರಬಲವಾಗಿದ್ದು ಅನುಭವಕ್ಕೆ ಬಂದಿತ್ತು. ಥಿಯೇಟರಿಗೆ ಹೋಗಿ ಸಿನಿಮಾ ನೋಡುವ ಜನ ಕಡಿಮೆಯಾಗಿದ್ದು ಗಮನಕ್ಕೆ ಬಂದಿತ್ತು. ಆದರೆ ನ್ಯೂಸ್‌ಗೆ ಜನ ಇನ್ನೂ ಪತ್ರಿಕೆಗಳನ್ನೇ ಅವಲಂಬಿಸ್ತಾರೆ ಅಂತ ತಿಳಿದಿದ್ದೆ. ಹಳೆ ಪೇಪರ್ ವಾಲಾ ಹೇಳಿದ್ದು ಪೂರ್ಣ ನಿಜವಲ್ಲದಿರಬಹುದು. ಆದರೂ ಕೇಬಲ್ ಟಿವಿ ಚಾನೆಲ್‌ಗಳು ಪ್ರಚಲಿತ ವಿದ್ಯಮಾನಗಳ ಬಗ್ಗೆ ಮುಖ್ಯ ಮೂಲ ಆಗಿಬಿಟ್ಟಿವೆ ಎಂಬುದಂತೂ ನಿಜ. **ಓದಲು ಬಾರದ, ಓದುವ ರೂಢಿ ಇಲ್ಲದ ಬಹುಭಾಗ ಜನರಿರುವ ನಮ್ಮ ದೇಶದಲ್ಲಿ ಇದು ಆಶ್ಚರ್ಯಕರವೇನಲ್ಲ.** ಅಲ್ಲದೆ ಇತ್ತೀಚಿನ ವರ್ಷಗಳಲ್ಲಿ ಕೇಬಲ್ ಟಿವಿ ಚಾನೆಲ್‌ಗಳ ಪ್ರೋಗ್ರಾಂನಲ್ಲಿ ಆಗುತ್ತಿರುವ ಬದಲಾವಣೆಗಳ ದೃಷ್ಟಿಯಿಂದಲೂ ಇದೇನು ಆಶ್ಚರ್ಯಕರವಲ್ಲ.

ಉದಯ ವಾರ್ತೆಗಳು, ಸ್ಟಾರ್ ನ್ಯೂಸ್

ಕೇಬಲ್ / ಸ್ಯಾಟಲೈಟ್ ಟೀವಿಯಿಂದ ಸುಮಾರು 50 ಚಾನೆಲ್‌ಗಳು ಬರುತ್ತಿದ್ದು; ಇನ್ನೂ ಹೆಚ್ಚುತ್ತಲೇ ಇವೆ. ಒಂದೆರಡು ವರ್ಷಗಳ ಹಿಂದೆ ಟಿವಿಯಲ್ಲಿ ನ್ಯೂಸ್ ಅಂದ್ರೆ ದೂರದರ್ಶನದ್ದೇ. ಅಂತರ್ರಾಷ್ಟ್ರೀಯ ಸುದ್ದಿಗೆ ಬಿಬಿಸಿ, ಸಿಎನ್‌ಎನ್ ಎಲ್ಲಾ ಇತ್ತು. ಆದರೆ ನಮ್ಮ ದೇಶದ ನ್ಯೂಸ್‌ಗೆ ದೂರದರ್ಶನವೇ ಗತಿಯೆಂದಿತ್ತು. ದೂರದರ್ಶನದ ನ್ಯೂಸ್ ಸರ್ಕಾರಿ ಮತ್ತು ಆಗಿನ ಆಳುವ ಪಕ್ಷದ ಪ್ರಚಾರ ಎಂಬ ಭಾವನೆ (ಸರಿಯಾದ್ದೇ) ಇದ್ದದ್ದರಿಂದ ಪತ್ರಿಕೆಗಳೇ ಸುದ್ದಿಯ ಮುಖ್ಯ ಮೂಲವಾಗಿದ್ದವು. ಸ್ಟಾರ್ ಟಿವಿ ನ್ಯೂಸ್ ಆರಂಭಿಸಿದಾಗಿನಿಂದ ಇದು ಬದಲಾಯಿತು. ದೂರದರ್ಶನದಲ್ಲಿ ಕಾರ್ಯಕ್ರಮ ಕೊಡುತ್ತಿದ್ದ ಪ್ರಣಯ್ ರಾಯ್‌ನ ಎನ್.ಡಿ ಟಿ.ವಿ. ತಂಡ ಕೊಡಲು ಆರಂಭಿಸಿದ ಸ್ಟಾರ್‌ನ್ಯೂಸ್ ಜನಪ್ರಿಯ ಆಯ್ತು. ನ್ಯೂಸ್‌ನ ಅವಧಿ ಮತ್ತು ಸಂಖ್ಯೆ ಜಾಸ್ತಿ ಮಾಡುತ್ತಾ ಈಗ ಸ್ಟಾರ್ ನ್ಯೂಸ್ ಎಂಬುದೇ ಬೇರೆ ಚಾನೆಲ್ ಆಗಿದೆ. ಇದೇ ರೀತಿ ಝಿ ಟಿವಿಯ ನ್ಯೂಸ್ ಕಥೆ ಸಹ. ಈಗ ಝಿ ನ್ಯೂಸ್ ಎಂಬ ಪ್ರತ್ಯೇಕ ಚಾನೆಲ್ ಆಗಿದೆ. ಇವೆರಡೂ 24 ಗಂಟೆಯೂ ನ್ಯೂಸ್ ಕೊಡುತ್ತಾ ಇರುತ್ತವೆ. ಅದೇ ರೀತಿ ದಕ್ಷಿಣದ ಪ್ರಾದೇಶಿಕ ಭಾಷೆಗಳಲ್ಲಿ ಸಹ ಕೇಬಲ್ ಟಿವಿ ಚಾನೆಲ್‌ಗಳ ಸುದ್ದಿ, ದೂರದರ್ಶನದ ಸುದ್ದಿಯನ್ನು ಹಿಂದಕ್ಕೆ ಹಾಕಿವೆ. ತಮಿಳಿನಲ್ಲಿ ಸನ್ ಟೀವಿ, ಕನ್ನಡದಲ್ಲಿ ಉದಯ ಟೀವಿ, ಮಲಯಾಳಂನಲ್ಲಿ ಏಶಿಯನೆಟ್, ತೆಲುಗಿನಲ್ಲಿ ಈನಾಡು ಟೀವಿಯ ನ್ಯೂಸ್ ಪ್ರಮುಖ ಆಕರ್ಷಣೆಯಾಗಿದೆ. ಈ ಎಲ್ಲಾ ಖಾಸಗಿ ಟೀವಿ ಚಾನೆಲ್‌ಗಳ ಸುದ್ದಿ ಪ್ರಸಾರ ಜನಪ್ರಿಯವಾಗಲು ಮುಖ್ಯ ಕಾರಣ, ದೂರದರ್ಶನದ ಸುದ್ದಿಗಳು ಅಷ್ಟು ಕೆಟ್ಟದಾಗಿರುವುದು. ಮಾತ್ರವಲ್ಲ ಈ ಎಲ್ಲಾ ಖಾಸಗಿ ಚಾನೆಲ್‌ಗಳು ಸರ್ಕಾರಿ ಆಳುವ ಪಕ್ಷದ ಪ್ರಚಾರ ಅಲ್ಲ. ಆದ್ದರಿಂದ ಹೆಚ್ಚು ನಂಬಲರ್ಹ ಎಂಬ ಭಾವನೆಯಿಂದ. ಅಲ್ಲದೆ ದೂರದರ್ಶನದ ಸುದ್ದಿಯ ಸ್ವರೂಪದಲ್ಲಿದ್ದ ಕೆಲವು ಪ್ರಮುಖ ದೋಷಗಳನ್ನು ಇವು ದೂರ ಇಟ್ಟದ್ದರಿಂದ.



ಮುರ್ಡೋಕ್ ಸಾಮ್ರಾಜ್ಯದ ಸಾಮಂತರು ಸ್ಟಾರ್ ಮತ್ತು ಝಿ ಟೀವಿ

ಮುರ್ಡೋಕ್‌ನದ್ದು ನಿಜವಾಗಲೂ ಈಗ ಸೂರ್ಯ ಮುಳುಗದ ಮಾಧ್ಯಮ ಸಾಮ್ರಾಜ್ಯ. ಆರು ಖಂಡಗಳಲ್ಲೂ ಆತನ ಒಡೆತನದ ಮಾಧ್ಯಮ ಕಂಪನಿಗಳು ಪ್ರಬಲವಾಗಿವೆ. ಜಗತ್ತಿನಾದ್ಯಂತ 132 ಪತ್ರಿಕೆಗಳು 22 ಅಮೇರಿಕನ್ ಟಿವಿ ಸ್ಟೇಶನ್ನುಗಳು ಅವನ ಸೊತ್ತು. ಜರ್ಮನಿ, ಬ್ರಿಟನ್, ಆಸ್ಟ್ರೇಲಿಯಾ, ಜಪಾನ್‌ಗಳ ಬೆಳೆಯುತ್ತಿರುವ ಖಾಸಗಿ ಟಿ.ವಿ. ಕೇಬಲ್, ಚಾನೆಲ್‌ಗಳ ಒಡೆತನ ಅವನ ಕೈಯಲ್ಲಿದೆ.

ಏಶ್ಯಾದಲ್ಲಿ ಆತನ ಸಾಮ್ರಾಜ್ಯದ ಭಾಗಗಳೆಂದರೆ ಸ್ಟಾರ್ ಟಿ.ವಿ. ನೆಟವರ್ಕ್. ಸ್ಟಾರ್ ಟೀವಿ ಕೆಲವೇ ವರ್ಷಗಳಲ್ಲಿ ಮಧ್ಯ ಏಶ್ಯಾ, ದಕ್ಷಿಣ ಏಶ್ಯಾ, ದಕ್ಷಿಣಪೂರ್ವ ಏಶ್ಯಾ ಮಾಜಿ ಸೋವಿಯೆತ್ ಗಣರಾಜ್ಯಗಳ ದೇಶಗಳನ್ನು ತಲುಪುತ್ತಿದೆ. ನಾಲ್ಕು ಇಂಗ್ಲೀಷ್ ಮತ್ತು ಇತರ 19 ಪ್ರಾದೇಶಿಕ ಭಾಷೆಗಳ ಚಾನೆಲ್‌ಗಳ ಮೂಲಕ. ಭಾರತದಲ್ಲೇ ಸ್ಟಾರ್ ಚಾನೆಲ್‌ಗಳು ಟಿವಿ. ಇರುವ ಮನೆಗಳಲ್ಲಿ ಮೂರನೇ ಒಂದು ಭಾಗವನ್ನು ಮುಟ್ಟುತ್ತಿವೆ. ಝೀಟಿವಿಯ ಅರ್ಧ ಭಾಗ ಬಂಡವಾಳ ಮುರ್ಡೋಕ್‌ನದ್ದು. ಝಿ ಟೀವಿ ಅತ್ಯಂತ ದೊಡ್ಡ ಭಾರತದ ಭಾಷೆಯ ಚಾನೆಲ್. ದೂರದರ್ಶನವನ್ನು ಬಿಟ್ಟರೆ ಅತಿ ದೊಡ್ಡ ಪ್ರೇಕ್ಷಕರನ್ನು ಹೊಂದಿರುವ ಚಾನೆಲ್. ಒಂದು ಸಮೀಕ್ಷೆಯ ಪ್ರಕಾರ ಜನ ಟಿವಿ ನೋಡುವ ಪ್ರಮುಖ ಗಂಟೆಯಲ್ಲಿ ಅದು ದೂರದರ್ಶನವನ್ನು ಹಿಂದಕ್ಕೆ ಹಾಕಿದೆ. ಅಂದರೆ ಆ ಗಂಟೆಯಲ್ಲಿ ಶೇಕಡಾ 37 ಜನ ಝಿಟೀವಿ ನೋಡಿದರೆ ಶೇಕಡಾ 28 ಜನ ದೂರದರ್ಶನ ನೋಡುತ್ತಾರೆ. ಇದಲ್ಲದೆ ಸಂಗೀತಕ್ಕೆ ಮೀಸಲಾದ ಚಾನೆಲ್ ವಿ ಸಹ ಮುರ್ಡೋಕ್‌ನ ಸಾಮ್ರಾಜ್ಯದ ಭಾಗ. ಚಾನೆಲ್ 'ವಿ' ಸಹ ಪಾಶ್ಚಿಮಾತ್ಯ ಪಾಪ್ ಸಂಗೀತ ಮತ್ತು ಪ್ರಾದೇಶಿಕ ಸಂಗೀತಗಳನ್ನು ಮಿಶ್ರಮಾಡಿ ಏಶ್ಯಾದಲ್ಲಿ ಪ್ರೇಕ್ಷಕರನ್ನು ಗಳಿಸುವಲ್ಲಿ ಸಫಲವಾಗಿರುವ ಚಾನೆಲ್.

ಇಂತಹ ಮುರ್ಡೋಕ್‌ನ ಸಾಮ್ರಾಜ್ಯದ ಸಾಮಂತರಾದ ಸ್ಟಾರ್ ಮತ್ತು ಝಿ ಟೀವಿಗಳು ಜನಪರ ಪಾತ್ರ ವಹಿಸುತ್ತಾರೆಂದು ಯಾರಾದರು ನಂಬುವ ಮಾತೆ? ಮುರ್ಡೋಕ್ ಈಗ ಸನ್ ಟಿವಿ ನೆಟವರ್ಕ್ ಕಂಪನಿಯಲ್ಲೂ ದೊಡ್ಡಪ್ರಮಾಣದಲ್ಲಿ ಶೇರುಗಳನ್ನು ಕೊಂಡಿದ್ದಾನಂತೆ.

ದೂರದರ್ಶನದ ದೋಷಗಳಿಂದ ಲಾಭ

ಏನು ಈ ದೂರದರ್ಶನದ ದೋಷಗಳು? ಮೊದಲನೆಯದು, ಸರ್ಕಾರಿ ಸಮಾರಂಭಗಳಿಗೆ ಆದ್ಯತೆ ಮತ್ತು ರಾಜಧಾನಿ ಕೇಂದ್ರಿತ ಸುದ್ದಿಗಳು. ಪ್ರಧಾನ ಮಂತ್ರಿ, ಮುಖ್ಯಮಂತ್ರಿಗಳ ಕಾರ್ಯಕ್ರಮ ಇದ್ದಾಗ ಇತರ ಪ್ರದೇಶಗಳು ದೂರದರ್ಶನ ಸುದ್ದಿಗೆ ಕಾಣ ದಿರುವುದು. ರಾಜಧಾನಿಯಲ್ಲಿ ಬೆರಳೆಣಿಕೆಯಷ್ಟು ಜನ ಭಾಗವಹಿಸಿದ ಕೆಲಸಕ್ಕೆ ಬಾರದ ಸೆಮಿನಾರು ಸುದ್ದಿ, ಇತರ ಭಾಗಗಳಲ್ಲಿ ಏನು ನಡೆದರೂ ಸುದ್ದಿ ಇಲ್ಲ. ಉದಾಹರಣೆಗೆ-ಉದಯ ಟೀವಿ ಜಿಲ್ಲಾ ಸುದ್ದಿಗಳಿಗೆ ಇತ್ತೀಚೆಗೆ ಭಾರಿ ಮಹತ್ವ ನೀಡಿದೆ.

ಇನ್ನೊಂದು ವಿರೋಧ ಪಕ್ಷಗಳ ಸುದ್ದಿಗಳನ್ನು ಬ್ಲಾಕ್ ಔಟ್ ಮಾಡುವುದು. ಖಾಸಗಿ ಟೀವಿ ಚಾನೆಲ್‌ಗಳು ವಿರೋಧ ಪಕ್ಷಗಳ ಸುದ್ದಿಯನ್ನು ಕೊಡುವ ಮೂಲಕ ತಮ್ಮ ಸ್ವತಂತ್ರ ಸ್ವರೂಪವನ್ನು ರುಜುವಾತು ಮಾಡಲು ಪ್ರಯತ್ನಿಸಿವೆ. ರಾಜಕೀಯೇತರ ಸುದ್ದಿಗಳನ್ನು (ಜನರ ಸಮಸ್ಯೆ, ಸಾಂಸ್ಕೃತಿಕ ಇತರ ಆಸಕ್ತಿ ಕಾರಕ) ದೂರದರ್ಶನ ಪೂರ್ಣವಾಗಿ ಕಡೆಗಣಿಸುತ್ತಿತ್ತು. ಅದೂ ಮಾತ್ರವಲ್ಲ ದೂರದರ್ಶನ ಹಿಂದಿ, ಇಂಗ್ಲೀಷ್ ಬಿಟ್ಟರೆ ಪ್ರಾದೇಶಿಕ ಭಾಷೆಗಳ ಸುದ್ದಿಗಳನ್ನು ತೀರಾ ಕಡೆಗಣಿಸಿತ್ತು. ಅವಧಿ ಮತ್ತು ಸುದ್ದಿ ಪ್ರಸಾರದ ಸಂಖ್ಯೆ ಸೀಮಿತವಾಗಿತ್ತು. ಆ ಅವಧಿಯನ್ನು ತುಂಬಿಸಲೂ ಅವರು ಏದುಸಿರು ಬಿಡುತ್ತಿದ್ದರು. ಉದಾಹರಣೆಗೆ ಕನ್ನಡ ಸುದ್ದಿ ತಯಾರು ಮಾಡಲು ಇದ್ದ ಸಂಪನ್ಮೂಲಗಳ ಸುದ್ದಿಗಾರರು, ಕ್ಯಾಮೆರಾಮನ್‌ಗಳು ಅವರ ಪ್ರಸಾರಕ್ಕೆ ವ್ಯವಸ್ಥೆ ಇತ್ಯಾದಿ- ತೀರಾ ಸೀಮಿತವಾಗಿದ್ದವು. ಹೀಗೆ **ದೂರದರ್ಶನದ ಕಣ್ಣಿಗೆ ಹೊಡೆಯುವ ದೋಷಗಳನ್ನು ದೂರ ಮಾಡಿದ್ದರಿಂದ ಈ ಖಾಸಗೀ ಟೀವಿಗಳ ಸುದ್ದಿಗಳು ಜನಪ್ರಿಯತೆ ಗಳಿಸಿವೆ.**

ನ್ಯೂಸ್ ಮಾತ್ರವಲ್ಲ ಪ್ರಸಿದ್ಧ ವ್ಯಕ್ತಿಗಳ ಸಂದರ್ಶನ, ಪ್ರಚಲಿತ ವಿದ್ಯಮಾನಗಳ ಬಗ್ಗೆ ಪರಿಣಿತ ಆಹ್ವಾನಿತರ ಚರ್ಚೆ, ವೀಕ್ಷಕರು ಫೋನ್ ಮೂಲಕ ಅಥವಾ ಸ್ವತಃ ಭಾಗವಹಿಸಿ ಕೇಳುವ ಪ್ರಶ್ನೆಗಳನ್ನೊಳಗೊಂಡ ಕಾರ್ಯಕ್ರಮಗಳೂ ಜನಪ್ರಿಯವಾಗಿವೆ. ಉದಯ ಟೀವಿಯ ಮುಖಾ ಮುಖಿ ಸ್ಟಾರ್‌ಪ್ಲಸ್‌ನ ಜನತಾ ಕೀ ಅದಾಲತ್, ಝೀಯ ಘೂಮ್ತಾ ಆಯಿನಾ ಬಿಬಿಸಿಯ ಕೊಶ್ಚನ್ ಟೈಮ್ ಇಂಡಿಯಾ, ಇತ್ಯಾದಿ ಇದಕ್ಕೆ ಉದಾಹರಣೆಗಳು. ದೂರದರ್ಶನ ಸಹ ಇಂತಹ ಕಾರ್ಯಕ್ರಮಗಳನ್ನು ಆರಂಭಿಸಿತ್ತು. ಉದಾಹರಣೆಗೆ, ಜನವಾಣಿ ಇತ್ಯಾದಿ. ಈಗಲೂ ಡಿಡಿ-ಮೆಟ್ರೋನಲ್ಲಿ ಬರುತ್ತಿರುವ ಆಜ್‌ತಕ್. ಆದರೂ ಹೇಗೋ ಅವು ಖಾಸಗಿ ಚಾನೆಲ್‌ಗಳ ಕಾರ್ಯಕ್ರಮಗಳಷ್ಟು ಆಕರ್ಷಕವಾಗಿಲ್ಲ. ಮುಖ್ಯವಾಗಿ ಪ್ರಾದೇಶಿಕ ಭಾಷೆಗಳಲ್ಲಿ ದೂರದರ್ಶನ ಅಂತಹ ಪ್ರಯತ್ನ ಮಾಡೇ ಇಲ್ಲ. ದೂರದರ್ಶನಕ್ಕೆ ಇಂತಹ ಕಾರ್ಯಕ್ರಮಗಳನ್ನು ಮಾಡುತ್ತಿದ್ದವರನ್ನು ಖಾಸಗೀ ಚಾನೆಲ್‌ಗಳು ಸೆಳೆದು ಕೊಂಡಿವೆ.

ಚುನಾವಣೆಗಳ ಸುದ್ದಿ, ವಿಶ್ಲೇಷಣೆಯಲ್ಲಿ ದೂರದರ್ಶನದ ರೆಕಾರ್ಡ್ ಅಷ್ಟೇನೂ ಕೆಟ್ಟದಾಗಿರಲಿಲ್ಲ. ಆದರೂ ಖಾಸಗೀ ಟೀವಿಗಳ ಚುನಾವಣಾ ಕಾರ್ಯಕ್ರಮಗಳು ಹೆಚ್ಚು ನಂಬಲರ್ಹ ಎನ್ನಿಸಿ ಕೊಂಡಿವೆ.

ಮಹತ್ವದ ಚುನಾವಣೆ ಹತ್ತಿರ ಬರುತ್ತಿರುವಾಗ ಖಾಸಗಿ ಚಾನೆಲ್‌ಗಳ ಈ ಪ್ರಭಾವ ಭಾರತದ ಪ್ರಜಾಪ್ರಭುತ್ವಕ್ಕೆ ಮುನ್ನಡೆಯೆ? ಆರೋಗ್ಯಕರ ಬೆಳವಣಿಗೆಯೇ ಎಂದು ಪರಿಶೀಲಿಸುವುದು ಅಗತ್ಯ. ಜನ ಜನಿತ ಅಭಿಪ್ರಾಯವೆಂದರೆ ಇದು ಪ್ರಜಾಪ್ರಭುತ್ವಕ್ಕೆ ಮುನ್ನಡೆ. ಆರೋಗ್ಯಕರ ಬೆಳವಣಿಗೆ ಅಂತ. ಈ ಚಾನೆಲ್‌ಗಳ ಒಡೆತನದ ಸ್ವರೂಪ, ಕಾರ್ಯಶೈಲಿ ಸೂಕ್ಷ್ಮವಾಗಿ ನೋಡಿದರೆ ಇದು ನಿಜವಲ್ಲ ಎಂದು ಗೊತ್ತಾಗುತ್ತದೆ.


ಈ ಚಾನೆಲ್‌ಗಳ ಒಡೆಯರು ಯಾರು?:

ಮುಖ್ಯವಾಗಿ ಒಡೆತನದ ಬಗ್ಗೆ ಬರೋಣ. ಈ ಖಾಸಗೀ ಟೀವಿಗಳ ಒಡೆಯರು ಯಾರು? ಈಗ ಅಖಿಲ ಭಾರತ ವ್ಯಾಪ್ತಿ ಗಳಿಸಿಕೊಂಡು ದೂರದರ್ಶನಕ್ಕೆ ಸವಾಲು ಒಡ್ಡಿರುವ ಸ್ಟಾರ್‌ಟೀವಿ ಝೀಟಿವಿಗಳ ಒಡೆಯರು ಯಾರು ಗೊತ್ತೆ? ಇವೆರಡು ರೂಪರ್ಟ್ ಮುರ್ಡೋಕ್ ಎಂಬ ಆಸ್ಟ್ರೇಲಿಯನ್ ಸಂಜಾತ ಈಗ ಅಮೆರಿಕನ್ ಪ್ರಜೆಯಾಗಿರುವಾತನ ಮಾಧ್ಯಮ ಸಾಮ್ರಾಜ್ಯದ ಭಾಗ. ಈತನ ನ್ಯೂಸ್ ಕಾರ್ಪೊರೇಶನ್ ಎಂಬ ಬಹುರಾಷ್ಟ್ರೀಯ ಕಂಪನಿ ಈಗ ಜಗತ್ತಿನ ಅತಿ ದೊಡ್ಡ ಐದು ಮಾಧ್ಯಮ ಕಂಪನಿಗಳಲ್ಲಿ ಒಂದು. ಮಾಧ್ಯಮ ಕಂಪನಿಗಳೆಂದರೆ ರೇಡಿಯೋ, ಟೀವಿ ಸ್ಟೇಶನ್, ಉಪಗ್ರಹ ಟೀವಿ ಚಾನೆಲ್, ದಿನಪತ್ರಿಕೆಗಳು, ಮ್ಯಾಗಝೀನ್‌ಗಳು ಪುಸ್ತಕಗಳು, ಸಂಗೀತ ಮತ್ತು ವಿಡಿಯೋ ಕ್ಯಾಸೆಟ್‌ಗಳು ಇವೆಲ್ಲವನ್ನು ಉತ್ಪಾದಿಸುವ, ವಿತರಿಸುವ ಎಲ್ಲಾ ವ್ಯವಹಾರಗಳನ್ನು ಹೊಂದಿರುವ ಕಂಪನಿಗಳು. ಜಾಗತೀಕರಣದೊಂದಿಗೆ ಈ ಮಾಧ್ಯಮ ಕಂಪನಿಗಳು ಜಾಗತೀಕರಣಗೊಂಡಿದ್ದು, ಇವುಗಳಿಗೆ ಈಗ ಗಡಿ ಇಲ್ಲ. ಜಗತ್ತಿನ ಬಹುಭಾಗದ ಮಾಧ್ಯಮಗಳು ಇವುಗಳ ಕೈಯಲ್ಲಿವೆ. ಇವುಗಳಲ್ಲಿ ಪ್ರಮುಖವಾದದ್ದು ಸ್ಯಾಟಲೈಟ್ ಟೀವಿ ಚಾನೆಲ್‌ಗಳು ಎಂದು ಬೇರೆ ಹೇಳಬೇಕಾಗಿಲ್ಲ. (ಮುರ್ಡೋಕ್ ಸಾಮ್ರಾಜ್ಯ-ಬಾಕ್ಸ್ ನೋಡಿ) ಮುರ್ಡೋಕ್‌ನ ಮಾಧ್ಯಮ ಸಾಮ್ರಾಜ್ಯವಾದ 'ನ್ಯೂಸ್ ಕಾರ್ಪೋರೇಶನ್ ಕಂಪನಿ'ಯ ವಾರ್ಷಿಕ ವಹಿವಾಟು (1996 ರ ಅಂಕೆ ಸಂಖ್ಯೆ) 40 ಸಾವಿರ ಕೋಟಿ ರೂಪಾಯಿ. ಇದು ನಮ್ಮ ಕೇಂದ್ರೀಯ ಬಜೆಟ್‌ನಲ್ಲಿ ಗ್ರಾಮೀಣಾಭಿವೃದ್ಧಿಗೆ ತೆಗೆದಿಟ್ಟ ಹಣದ ಐದು ಪಟ್ಟು, ಹೆಚ್ಚು ಕಡಿಮೆ ಪೆಟ್ರೋಲಿಯಂ ಉತ್ಪನ್ನಗಳ ಒಟ್ಟು ಆಮದಿನ ವೆಚ್ಚದಷ್ಟು.

ಚಾನೆಲ್ ಒಡೆಯರ ರಾಜಕೀಯ

ಅಷ್ಟು ಮಾತ್ರವಲ್ಲ ಈ ಮುರ್ಡೋಕ್, ರಾಜಕೀಯದಲ್ಲಿ ಕೈಯಾಡಿಸುವುದರಲ್ಲಿ ಕುಖ್ಯಾತ. ಹಿಂದೆ ಬ್ರಿಟನ್‌ನಲ್ಲಿ ತನ್ನ ಪತ್ರಿಕೆಗಳನ್ನು ಬಳಸಿ ಲೇಬರ್ ಪಾರ್ಟಿ ಸರ್ಕಾರಕ್ಕೆ ಬರಗಂತೆ, ಜಾನ್ ಮೇಜರ್ ಪುನರಾಯ್ಕೆಗೆ ಎಲ್ಲಾ ಕೊಳಕು ತಂತ್ರಗಳನ್ನು ಬಳಸಿದ ಕುಖ್ಯಾತಿ ಇವನದು. ಆತನೇ ಹೇಳಿಕೊಳ್ಳುತ್ತಾನೆ, ವಾಶಿಂಗ್‌ಟನ್ ನನ್ನ ಜೇಬಿನಲ್ಲಿದೆ ಅಂತ. **ಅಭಿವೃದ್ಧ ದೇಶಗಳಲ್ಲೇ ತನ್ನ ವ್ಯವಹಾರ ವಿಸ್ತರಿಸಲು ಅನುಕೂಲವಾದ ನೀತಿ ರೂಪಿಸಲು ಬಳಸುವ. ಈತನ ಹಿಡಿತ ನಮ್ಮಂತಹ ದೇಶದಲ್ಲಿ ಹೇಗಿರಬಹುದು ಎಂದು ಊಹಿಸಿಕೊಳ್ಳಬಹುದು.** ಭಾರತೀಯ ಜನತೆ ಪ್ರಜಾಪ್ರಭುತ್ವದಲ್ಲಿ ಅರ್ಥ ಪೂರ್ಣವಾಗಿ ಭಾಗವಹಿಸಲು ಬೇಕಾದ ವಾತಾವರಣ ನಿರ್ಮಿಸಲು ಆತನಿಗೆ ಏನು ಆಸಕ್ತಿ ಇದೆ ಹೇಳಿ?

ಇನ್ನು ಕನ್ನಡದ ಉದಯ ಟೀವಿಯ ಮಾಲಿಕರು ಯಾರು? ಈಗ ದೊಡ್ಡ ಕಂಪನಿಯಾಗಿ ಬೆಳೆದಿರುವ ಸನ್ ನೆಟವರ್ಕ್, ಸ್ಟಾರ್, ಝೀ ಬಿಟ್ಟರೆ ಅತಿದೊಡ್ಡ ಸ್ಯಾಟಲೈಟ್ ಟೀವಿ ಕಂಪನಿ. ದಕ್ಷಿಣದ ನಾಲ್ಕೂ ಭಾಷೆಗಳಲ್ಲಿ ಚಾನೆಲ್ ಹೊಂದಿರುವ ಕಂಪನಿ. ಇದರ ಮಾಲಿಕರು ಡಿ.ಎಂ.ಕೆ. ಮುಖ್ಯಸ್ಥ ಕರುಣಾನಿಧಿಯ ಅಳಿಯ ಮತ್ತು ಮಾಜಿ ಕೇಂದ್ರ ಸಚಿವ ಮುರ ಸೋಳಿ ಮಾರನ್. ಈಗ ಡಿ.ಎಂ.ಕೆ. ಬಿಜೆಪಿಯ ರಂಗ ಸೇರಿರುವ ಹಿನ್ನೆಲೆಯಲ್ಲಿ (ಅಥವಾ ಇಲ್ಲದಿದ್ದರೂ) ಇದು ಸ್ವತಂತ್ರ ಮಾಧ್ಯಮ ಎನ್ನುವುದು ಹೇಗೆ? ಒಡೆಯರ ನಿಲುವುಗಳು ಆ ಚಾನೆಲ್‌ನ ಸುದ್ದಿ, ವಿದ್ಯಮಾನಗಳ ಬಗ್ಗೆ ಚರ್ಚೆ, ಚುನಾವಣಾ ಕಾರ್ಯಕ್ರಮಗಳಲ್ಲಿ ತತ್‌ಕ್ಷಣ ಕಾಣದಿರಬಹುದು. ಆದರೆ ಪ್ರಭಾವ ಬೀರುವುದಿಲ್ಲ ಎಂದು ಹೇಳಲು



ಖಂಡಿತ ಸಾಧ್ಯವಿಲ್ಲ. ಕಳೆದ ಚುನಾವಣೆಯಲ್ಲಿ ಡಿ.ಎಂ.ಕೆ. ಸನ್ ಟೀವಿಯನ್ನು ಚುನಾವಣಾ ಪ್ರಚಾರಕ್ಕೆ ಅತ್ಯಂತ ಸಮರ್ಥವಾಗಿ ಬಳಸಿಕೊಂಡಿತ್ತು. ಈಗ ಉದಯ ಟೀವಿಯ ಉಪಾಧ್ಯಕ್ಷ ಮತ್ತು ಪ್ರಸಿದ್ಧ ಚಿತ್ರನಟ ಶ್ರೀನಾಥ್ ಬಿಜೆಪಿ ಸೇರಿರುವ ಹಿನ್ನೆಲೆಯಲ್ಲಿ ಈ ಚಾನೆಲ್ ನಮ್ಮ ರಾಜ್ಯದ ಜನ ಮಾನಸವನ್ನು ರೂಪಿಸುತ್ತದೆ ಎಂದು ದಿಗಿಲಾಗದೆ, ಅದೂ ಉದಯ ಟೀವಿ ಕನ್ನಡದಲ್ಲಿ ಈಗ ಏಕಮಾತ್ರ ಕೇಬಲ್ ಚಾನೆಲ್ ಆಗಿರುವ ಹಿನ್ನೆಲೆಯಲ್ಲಿ,

ಜಾಹೀರಾತುದಾರರ ಹಿಡಿತ

ಒಡೆತನ ಒಂದು ಕಡೆಯಾದರೆ ಈ ಚಾನೆಲ್‌ಗಳು ತಮ್ಮ ಆರ್ಥಿಕ ಉಳಿವು, ಬೆಳವಣಿಗೆಗೆ ಯಾರ ಹಣವನ್ನು ಆಧರಿಸಿವೆ ಎಂಬುದರ ಮೇಲೂ ಈ ಚಾನೆಲ್‌ಗಳ ಸ್ವಭಾವ ನಿರ್ಧರಿಸಬಹುದು. ಎಲ್ಲಾ ಖಾಸಗಿ ಚಾನೆಲ್‌ಗಳು ನಂಬಿರುವುದು ಭಾರಿ ಪ್ರಮಾಣದ ಜಾಹೀರಾತುಗಳನ್ನು. ಈ ಜಾಹೀರಾತುಗಳನ್ನು ಕೊಡುವವರು ಯಾರು? ಭಾರಿ ಬಹುರಾಷ್ಟ್ರೀಯ ಕಂಪನಿಗಳು, **ಮತ್ತು ನಮ್ಮ ದೇಶದ ಗುತ್ತೇದಾರಿ ಕಂಪನಿಗಳು ಒಂದು ಅಧ್ಯಯನದ ಪ್ರಕಾರ ಎಲ್ಲಾ ಚಾನೆಲ್‌ಗಳಿಗೆ ಜಾಹೀರಾತು ಮೂಲಕ ಹರಿದು ಬರುವ ಹಣದಲ್ಲಿ ಸಿಂಹಪಾಲು ಆರು ದೊಡ್ಡ ಕಂಪನಿಗಳದ್ದಂತೆ.** ಈ ಚಾನೆಲ್‌ಗಳು ಈ ಜಾಹೀರಾತುದಾರರ ಹಿಡಿತದಲ್ಲಿದ್ದಾರೆ. ಅವರಿಗೆ ಅಪ್ರಿಯವಾದ ಯಾವುದೇ ವಿಷಯದ ಬಗ್ಗೆ ಅವರು ಪ್ರಸಾರ ಮಾಡಲಾರರು.

ಬಿಪಿಎಲ್ ಉದಯ ಟೀವಿಯಲ್ಲಿ ಒಂದು ಪ್ರಮುಖ ಕಾರ್ಯಕ್ರಮದ ಪ್ರಾಯೋಜಕರು. ಅಲ್ಲದೆ ಹೇರಳ ಜಾಹೀರಾತು ಕೊಡುತ್ತಾರೆ. ಇಂತಹ ಸ್ಥಿತಿಯಲ್ಲಿ ಉದಯ ಟೀವಿ ಬಿಪಿಎಲ್‌ನ ಕಾರ್ಮಿಕರ ಸಮಸ್ಯೆ, ಮುಷ್ಕರಗಳ ಬಗ್ಗೆ, ಮ್ಯಾನೇಜ್‌ಮೆಂಟ್‌ನ ಕಾರ್ಮಿಕ ವಿರೋಧಿ ನೀತಿಗಳ ಬಗ್ಗೆ ಕಾರ್ಯಕ್ರಮ ತಯಾರಿಸುವ, ಸುದ್ದಿ ಕೊಡುವ ಉಸಾಬರಿಗೆ ಹೋದೀತೆ?

ಇತ್ತೀಚೆಗೆ ಕೊಕಾ ಕೋಲಾ ಕುಡಿದು ಬೆಲ್ಜಿಯಂನಲ್ಲಿ ನೂರು ಮಕ್ಕಳು ಅಸ್ವಸ್ಥರಾಗಿ ಅಲ್ಲಿನ ಸರ್ಕಾರ ಕೊಕಾ ಕೋಲಾವನ್ನು ಸಧ್ಯಕ್ಕೆ ನಿಷೇಧಿಸಿದೆ. ಈ ಸುದ್ದಿ ಯಾವ ಚಾನೆಲ್‌ಗಳಲ್ಲೂ ಬರಲಿಲ್ಲ- ಎಲ್ಲಾ ಪತ್ರಿಕೆಗಳಲ್ಲಿ ಬಂದರೂ ಇದೇ ರೀತಿ ಸಿಗರೇಟು ಸೇವನೆಯ ದುಷ್ಪರಿಣಾಮಗಳ ಬಗ್ಗೆ ಕಾರ್ಯಕ್ರಮ ಪ್ರಸಾರ ಮಾಡಿದರೆ ವಿಲ್ಸ್ ಸಿಗರೇಟು ಕಂಪನಿ ಜಾಹೀರಾತು ಸಿಕ್ಕೀತೆ?

ದೂರದರ್ಶನವೂ ಸಾರ್ವಜನಿಕ ಒಡೆತನದಲ್ಲಿದ್ದರೂ ಜಾಹೀರಾತುದಾರರನ್ನೇ ಅವಲಂಬಿಸಿರುವುದರಿಂದ ಸಾರ್ವಜನಿಕ ಹಿತಾಸಕ್ತಿಗಳನ್ನು ಬಿಂಬಿಸಲು ಅಶಕ್ತವಾಗಿರುವುದು.

ಗ್ರಾಹಕರನ್ನು ಆಕರ್ಷಿಸುವ ತಂತ್ರ

ಹಾಗಿದ್ದರೆ ಈ ಖಾಸಗಿ ಚಾನೆಲ್‌ಗಳು ದೂರದರ್ಶನಕ್ಕಿಂತ ಆಕರ್ಷಕ ನ್ಯೂಸ್, ಪ್ರಚಲಿತ ವಿದ್ಯಮಾನಗಳ ಬಗ್ಗೆ ಕಾರ್ಯಕ್ರಮ ಹೇಗೆ ಮಾಡಲು ಸಾಧ್ಯವಾಗಿದೆ? **ಜನಕ್ಕೆ ಇದು ಸ್ವತಂತ್ರ ಮಾಧ್ಯಮ ಎಂದು ನಂಬಿಸಲು ಸಾಧ್ಯವಾಗಿದೆ? ಇಂದು ಈ ಚಾನೆಲ್‌ಗಳು ಆರಂಭದ, ಅವರಿಗೆ ವಿಸ್ತರಿಸುವ ಹಂತದಲ್ಲಿರುವುದರಿಂದ ಇದೊಂದು ಅನಿವಾರ್ಯ ವ್ಯಾಪಾರೀ ತಂತ್ರ.** ಯಾಕೆಂದರೆ ಅವರು ದೂರದರ್ಶನದಿಂದ ದರ್ಶಕರನ್ನು ತಮ್ಮೆಡೆಗೆ ಆಕರ್ಷಿಸದೆ ಉಳಿಯುವಂತಿಲ್ಲ. ಅವು ಶುದ್ಧ ಕಮರ್ಶಿಯಲ್ ಕಂಪನಿಗಳಾದ್ದರಿಂದ. ಇದಕ್ಕಾಗಿ ಸಿನಿಮಾ ಆಧಾರಿತ ಮನೋರಂಜನಾ ಕಾರ್ಯಕ್ರಮಗಳು, ದೂರದರ್ಶನದಿಂದ ಕಸಿದುಕೊಂಡ ಜನಪ್ರಿಯ ಸೀರಿಯಲ್‌ಗಳು ಇವುಗಳಿಂದ ಜನರನ್ನು ಆಕರ್ಷಿಸಿದರು. 24 ಗಂಟೆ ಕಾರ್ಯಕ್ರಮ, ಭೂತ ಪ್ರೇತ ಆಧಾರಿತ ಸೀರಿಯಲ್‌ಗಳು ಭವಿಷ್ಯವಾಣಿ ಮುಂತಾದ ಸಾಮಾಜಿಕ ಜವಾಬ್ದಾರಿ ರಹಿತ ಕಾರ್ಯಕ್ರಮಗಳಿಂದ ತಮ್ಮ ನೋಡುಗರನ್ನು ವಿಸ್ತರಿಸಿದ್ದಾರೆ. ಇನ್ನೂ ವಿಸ್ತರಿಸಲು ಹಾಗೂ ಅವರನ್ನು ಉಳಿಸಿಕೊಳ್ಳಲು ಸುದ್ದಿ ಪ್ರಚಲಿತ ವಿದ್ಯಮಾನಗಳ ಬಗ್ಗೆ ಆಧಾರಿತ ಕಾರ್ಯಕಮ ಅನಿವಾರ್ಯ ಎಂದು ಕಂಡು ಕೊಂಡಿವೆ. ಸ್ವತಂತ್ರ ಜನ-ಪರ ಕಾರ್ಯಕ್ರಮಗಳನ್ನು ಕೊಡುವ ಉದ್ದೇಶವೂ ಅವುಗಳಿಗಿಲ್ಲ. ಉದ್ದೇಶವಿದ್ದರೂ ಒಡೆಯರ ಜಾಹೀರಾತುದಾರರ ಹಿತಾಸಕ್ತಿಗಳನ್ನು ಕಾಪಾಡುವುದರ ಜತೆ ಅದು ಸಾಧ್ಯವೂ ಇಲ್ಲ.

ಇನ್ನೊಂದು, ಈ ಖಾಸಗಿ ಚಾನೆಲ್‌ಗಳ ಕಾರ್ಯಕ್ರಮಗಳನ್ನು ಪ್ರಭಾವಿಸುವ ಸಂಗತಿಯೆಂದರೆ ಅವು ಹೆಚ್ಚೆಚ್ಚು ವಿದೇಶಿ ಕಂಪನಿಗಳ ಕಾರ್ಯಕ್ರಮಗಳನ್ನು ಅವಲಂಬಿಸುವುದು. ಇದು ಮನೋರಂಜನಾ ಕಾರ್ಯಕ್ರಮ ಕಾರ್ಟೂನ್‌ಗಳಿಗೆ ಮಾತ್ರವಲ್ಲ ಸುದ್ದಿ, ಪ್ರಚಲಿತ ವಿದ್ಯಾಮಾನಗಳಿಗೂ ಅನ್ವಯಿಸುತ್ತದೆ. ವಿದೇಶಿ ಸುದ್ದಿಗಳಿಗಂತೂ ಇವು ಪೂರ್ಣವಾಗಿ ಸಿ.ಎನ್.ಎನ್. ಬಿ.ಬಿ.ಸಿ.ಗಳ ಮೊರೆ ಹೋಗುತ್ತವೆ. ವಿದೇಶಿ ಶಕ್ತಿಗಳು ನಮ್ಮ ದೇಶದ ವಿದ್ಯಾಮಾನಗಳ ಬಗ್ಗೆ ಇಟ್ಟಿರುವ ಅಭಿಪ್ರಾಯ ಒಂದಲ್ಲ ಒಂದು ರೀತಿಯಲ್ಲಿ ಈ ಸುದ್ದಿಗಳಿಗೂ ಪ್ರಭಾವ ಬೀರುತ್ತವೆ ಎಂದು ಬೇರೆ ಹೇಳಬೇಕಾಗಿಲ್ಲ.

ಚುನಾವಣೆ ಮತ್ತು ಖಾಸಗೀ ಚಾನೆಲ್‌ಗಳು

ಚುನಾವಣೆಗಳಲ್ಲಂತೂ ಖಾಸಗಿ ಟಿವಿ ಚಾನೆಲ್‌ಗಳ ಪ್ರಭಾವ ವಿಪರೀತವಾಗಿ ಏರಿದೆ. ಇದು ಅಮೆರಿಕ ಮತ್ತು

ಪುಟ 8 ನೋಡಿ

ಆಟೋಟ, ಸಂಗೀತ, ಪ್ರಕೃತಿ ಕಾರ್ಟೂನ್ ಚಾನೆಲ್‌ಗಳ ರಾಜಕೀಯ ಏನು?

ಖಾಸಗೀ ಟಿವಿ ಚಾನೆಲ್‌ಗಳ ಪ್ರವಾಹದಲ್ಲಿ ಆಟೋಟಗಳು, ಸಂಗೀತ, ಪ್ರಕೃತಿಗೆ ಮೀಸಲಾದ ಚಾನೆಲ್‌ಗಳೂ ಇವೆ. ಸ್ಟಾರ್ ಸ್ಪೋರ್ಟ್ಸ್, ಇ.ಎಸ್.ಪಿ.ಎನ್. ಎಂಟಿವಿ. ಚಾನೆಲ್ ವಿ, ಕಾರ್ಟೂನ್ ನೆಟ್‌ವರ್ಕ್, ಡಿಸ್ಕವರಿ, ನೇಶನಲ್ ಜಿಯೋಗ್ರಾಫಿಕ್ - ಇವು ಇಂತಹ ಚಾನೆಲ್‌ಗಳು. ಇವು ಜನಪರ ರಾಜಕಾರಣಕ್ಕೆ ಏನೂ ಅಪಾಯಕಾರಿಯಲ್ಲ. ಇವು ಜನರಿಗೆ ಅರ್ಥಪೂರ್ಣ ಮನರಂಜನೆ ಒದಗಿಸುತ್ತವೆ ಮತ್ತು ಆರೋಗ್ಯಕರ ಎಂಬುದು ಸಾಮಾನ್ಯ ಭಾವನೆ. ಇದೂ ನಿಜವಲ್ಲ.

ಇವೆಲ್ಲದರ ಹಿಂದೆಯೂ ರಾಜಕೀಯವಿದೆ. ಅಮೇರಿಕದಲ್ಲಿ ಹುಟ್ಟಿ ಜಗತ್ತಿನ ಐದು ದೈತ್ಯ ಮಾಧ್ಯಮ ಕಂಪನಿಗಳ ಭಾಗವಾದ ಈ ಚಾನೆಲ್‌ಗಳು ಹುಟ್ಟಿದ್ದೇ ಅಲ್ಲಿನ ಜನಗಳನ್ನು ರಾಜಕೀಯದಿಂದ ದೂರ ಸರಿಸಲು. ಇವೆಲ್ಲಾ 24ಗಂಟೆ ಚಾನೆಲ್‌ಗಳು. ಆಟೋಟದ ಚಾನೆಲ್‌ಗಳು, ಈ ಆಟೋಟಗಳನ್ನು ಯುವಕರಿಗೆ ಚಟವಾಗಿ ಮಾಡಿಬಿಟ್ಟು ಬೇರೆ ಯಾವುದರಲ್ಲೂ ಆಸಕ್ತಿ ಇಲ್ಲದಂತೆ ಮಾಡಲು ಪ್ರಯತ್ನಿಸಿ ಸಫಲವಾಗಿವೆ.

ಅದೇ ರೀತಿ ಸಂಗೀತ ವಿಡಿಯೋಗಳ ಚಾನೆಲ್‌ಗಳು. ತಮ್ಮ ವಿರಾಮವನ್ನೆಲ್ಲಾ ಎಂ ಟಿವಿ ಅಥವಾ ಇ.ಎಸ್.ಪಿ.ಎನ್ ಚಾನೆಲ್ ಮುಂದೆ ಕಳೆಯುವವರು ಬಹಳ ಸಂಖ್ಯೆಯಲ್ಲಿ ಇದ್ದಾರೆ. ಇದೇ ರೀತಿ ಮಕ್ಕಳಿಗೆ ಚಟ ಹಿಡಿಸಲು ಕಾರ್ಟೂನ್ ನೆಟ್‌ವರ್ಕ್, ನೇಶನಲ್ ಜಿಯೋಗ್ರಾಫಿಕ್, ಡಿಸ್ಕವರಿ ಪ್ರಾಕೃತಿಕ ಜ್ಞಾನ ಕೊಟ್ಟರೂ ಅದನ್ನೇ ನೋಡುತ್ತಾ ಕುಳಿತು ಉಳಿದದ್ದೆನ್ನೆಲ್ಲಾ ಮರೆಯುವ ಅಥವಾ ಅರ್ಥಹೀನ ಎನ್ನಿಸುವಂತೆ ಮಾಡಬಲ್ಲ ಚಾನೆಲ್‌ಗಳು. ಇವೆಲ್ಲಾ ಜನರನ್ನು ತಮ್ಮ ಮನೆಗಳಲ್ಲಿ ಕೂತು ಒಂದು ಚಾನೆಲ್‌ನ ಚಟಕ್ಕೆ ಅಂಟಿಕೊಂಡು ಯಾವುದೇ ಸಾರ್ವಜನಿಕ ವ್ಯವಹಾರದಲ್ಲಿ ಆಸಕ್ತಿ ವಹಿಸಿ ಪಾಲ್ಗೊಳ್ಳುವುದರಿಂದ ತಪ್ಪಿಸುವಂತೆ ಮಾಡುವ ಈ ಚಾನೆಲ್‌ಗಳೂ ರಾಜಕೀಯವಾಗಿ ಅಷ್ಟೇ ಅಪಾಯಕರ.

ಕೋಮುವಾದಿ ವಕ್ತಾರರಾಗುವ ಪತ್ರಕರ್ತರು!

- ವೀಕ್ಷಕ

ಪತ್ರಕರ್ತರ ರಾಜಕೀಯ ಒಲವು ನಿಲವುಗಳು ಪತ್ರಿಕಾಧರ್ಮ- ವೃತ್ತಿನಿಷ್ಠೆಯ ಎಲ್ಲೆಗಳನ್ನು ಮೀರಿ ರೇಜಿಗೆ ಹುಟ್ಟಿಸುವ ಮಟ್ಟದಲ್ಲಿ ಪತ್ರಿಕೆಗಳಲ್ಲಿ ವ್ಯಕ್ತವಾಗುವ ಪ್ರಕರಣಗಳು ಹಲವು. ಅವುಗಳ ಪೈಕಿ ಓದುಗರೊಬ್ಬರು ಮಾಡಿರುವ ಒಂದು ಪತ್ರಿಕೆಯ ಅಧ್ಯಯನ ಇಲ್ಲಿದೆ.

ಈ ವರ್ಷದ ಎಪ್ರಿಲ್ ತಿಂಗಳು ದೇಶದ ರಾಜಕೀಯ ರಂಗದಲ್ಲಿ ಕಾವೇರಿದ್ದ ದಿನಗಳವು. ಪತ್ರಿಕೆಗಳ ಗಂಭೀರ ಓದುಗನಾದ ನಾನು ಆ ಅವಧಿಯಲ್ಲಂತೂ ತುಂಬಾ ಕುತೂಹಲದಿಂದಲೇ ಪತ್ರಿಕೆಗಳ ಮೇಲೆ ಕಣ್ಣಾಡಿಸುತ್ತಿದ್ದೆ. ಹಿಂದೆಲ್ಲಾ ಕೇವಲ ಒಂದು ಪತ್ರಿಕೆ ಓದುತ್ತಿದ್ದವನು ಈಚೆಗೆ ಮೂರ್ನಾಲ್ಕು ಪತ್ರಿಕೆಗಳನ್ನಾದರೂ ಓದುವ ಹವ್ಯಾಸ ಬೆಳೆಸಿಕೊಂಡಿದ್ದೆ. ಬಹುಶಃ ಪತ್ರಿಕೆಗಳೆಲ್ಲವೂ ಪರಮ ಸತ್ಯವನ್ನು ಸಾರುವ ಪಾವನ ಸಾಧನಗಳು ಎಂಬ ನಂಬಿಕೆಯೇ ಇದಕ್ಕೆ ಕಾರಣವಾಗಿದ್ದಿರಬಹುದು.

ಪತ್ರಿಕಾ ಮಾಧ್ಯಮವನ್ನು ತುಂಬಾ ಹತ್ತಿರದಿಂದ ಗಮನಿಸುತ್ತಿದ್ದ ನನಗೆ ಅದರ ಕೆಲವು ತಾಂತ್ರಿಕ ಅಂಶಗಳ ಪರಿಚಯವೂ ಆಗತೊಡಗಿತ್ತು. ಉದಾಹರಣೆಗೆ ಪತ್ರಿಕೆಗಳ ಆವೃತ್ತಿಗಳು ಈಗೀಗ ಬಹಳಷ್ಟು ಪತ್ರಿಕೆಗಳು ಹಲವಾರು ಆವೃತ್ತಿಗಳನ್ನು ಮುದ್ರಿಸುತ್ತವೆ. ದೂರದ ಪ್ರದೇಶಗಳಿಗೆ ಪತ್ರಿಕೆ ಬೇಗನೆ ತಲುಪಬೇಕು ಹಾಗೂ ಆಯಾ ಪ್ರದೇಶಗಳ ಹೆಚ್ಚಿನ ಸುದ್ದಿಗಳಿಗೆ ಜಾಗ ಸಿಗಬೇಕು ಎನ್ನುವುದು ಈ ಆವೃತ್ತಿ ಮುದ್ರಣದ ಉದ್ದೇಶ. ಹೀಗಾಗಿಯೇ ಈಚೀಚೆ ಒಂದೇ ಪತ್ರಿಕೆಯಲ್ಲಿ ಬಂದ ಒಂದು ಊರಿನಲ್ಲಿ ಓದಿದ ಸುದ್ದಿ ಇನ್ನೊಂದು ಊರಿನಲ್ಲಿ ಕಾಣಸಿಗುವುದಿಲ್ಲ.

ಆದರೆ ಪತ್ರಿಕೆಗಳಲ್ಲಿ ಬರುವುದೆಲ್ಲವೂ ಪರಮ ಸತ್ಯವಲ್ಲ, ವಾಸ್ತವವೂ ಅಲ್ಲ. ಅಲ್ಲಿಯೂ ತಿರುಚಿದ ಸುದ್ದಿಗಳಿರುತ್ತವೆ. ಕೆಲವು ವಿಷಯಗಳನ್ನು ಪ್ರಕಟಿಸುವುದೇ ಇಲ್ಲ. ಪತ್ರಕರ್ತ-ವರದಿಗಾರರೇ ಇರಲಿ, ಸಂಪಾದಕೀಯ ವಿಭಾಗದ ನಾನಾ ಹಂತದ ಪತ್ರಕರ್ತರೇ ಆಗಿರಲಿ- ಒಲವು ನಿಲುವುಗಳು, ರಾಜಕೀಯ ಇಷ್ಟಾನಿಷ್ಟಗಳೂ ಪತ್ರಿಕೆಗಳಲ್ಲಿ ವ್ಯಕ್ತಗೊಳ್ಳುತ್ತವೆ ಎಂಬ ಕಟು ಸತ್ಯಕ್ಕೆ ನಾನು ತೆರೆದು ಕೊಳ್ಳುತ್ತಿದ್ದೇನೆ.

ಒಂದು ನಿರ್ದಿಷ್ಟ ಪತ್ರಿಕೆ ಈಚಿನ ಮಹತ್ವದ ರಾಜಕೀಯ ವಿದ್ಯಾಮಾನಕ್ಕೆ ಹಲವು ದಿನಗಳ ಕಾಲ ಸ್ಪಂದಿಸಿದ ಪರಿಯನ್ನು ಮುಂದಿಟ್ಟುಕೊಂಡು ಪತ್ರಿಕೆಗಳ ಓದುಗನಾಗಿ ನಾನು ಕಂಡುಕೊಂಡ ಸತ್ಯವನ್ನು ನನಗೆದುರಾದ ಪ್ರಶ್ನೆ, ಅನುಮಾನಗಳನ್ನು 'ಐಕ್ಯರಂಗ'ದ ಓದುಗರ ಜತೆ ಹಂಚಿಕೊಳ್ಳಲು ಯತ್ನಿಸುತ್ತೇನೆ.

ದೂರದ ಒಂದು ಹಳ್ಳಿಯವನಾದ ನಾನು ಎಪ್ರಿಲ್ 16 ರ ಬೆಳಿಗ್ಗೆ ಓದಿದ ಪತ್ರಿಕೆ 'ಕನ್ನಡ ಪ್ರಭ' **ವಿಶ್ವಾಸಗೊತ್ತುವಳಿ ಮೇಲೆ ಚರ್ಚೆ; ನಾಳೆ ಮತದಾನ** ಎಂಬುದು ಅಂದಿನ ಪ್ರಮುಖ ಹೆಡ್ಡಿಂಗ್ ಆಗಿತ್ತು. ಜಯಲಲಿತಾ ನೇತೃತ್ವದ ಅಖಿಲ ಭಾರತ ಅಣ್ಣಾ ಡಿ.ಎಂ.ಕೆ. ಪಕ್ಷ ಬಿಜೆಪಿ ಸರಕಾರಕ್ಕೆ ನೀಡಿದ್ದ ಬೆಂಬಲವನ್ನು ವಾಪಾಸ್ಸು ಪಡೆದಿದ್ದರಿಂದ ಸರಕಾರ ಅಲ್ಪಮತಕ್ಕೆ ಇಳಿದ ಹಿನ್ನೆಲೆಯಲ್ಲಿ ವಾಜಪೇಯಿ ವಿಶ್ವಾಸಮತ ಯಾಚಿಸುವ ಗೊತ್ತುವಳಿಯನ್ನು 15 ರಂದು ಮಂಡಿಸಿದ್ದರು. ಅದರ ಮೇಲೆ ಚರ್ಚೆ ಆರಂಭವಾಗಿದ್ದ ಹಿನ್ನೆಲೆಯಲ್ಲಿ ಬಂದ ಶೀರ್ಷಿಕೆ ಸೂಕ್ತವಾಗಿತ್ತು.

ಅದೇ ದಿನ, ಅಂದರೆ 16 ರಂದು ನಾನು ತುರ್ತು ಕೆಲಸದ ಮೇಲೆ ಊರಿನಿಂದ ಹೊರಟು ಬೆಂಗಳೂರು ತಲುಪಿ ಸಂಬಂಧಿಕರೊಬ್ಬರ ಮನೆಗೆ ಹೋದೆ. ಕಾಕತಾಳೀಯವೆಂಬಂತೆ ಅಲ್ಲಿಯೂ ಕನ್ನಡಪ್ರಭ ತರಿಸುತ್ತಿದ್ದರು. ಅದರ ಮೇಲೆ ಕಣ್ಣಾಡಿಸಿದಾಗ 'ಬಿಜೆಪಿ ಸರಕಾರ ಉರುಳಿಸಿ ನೋಡಿ' ಎಂಬ ದಪ್ಪಕ್ಷರದ ಹೆಡ್ಡಿಂಗ್ ಆ ಪತ್ರಿಕೆಯಲ್ಲಿತ್ತು. ಇದನ್ನು ನೋಡಿದಾಗ ನನಗೆ ಊರಲ್ಲಿ ಓದಿದ್ದು 'ಕನ್ನಡ ಪ್ರಭ' ಹೌದೋ ಅಲ್ಲವೋ ಅಥವಾ ಇಲ್ಲಿ ಕಂಡಿರುವುದು ಅದೇ ಪತ್ರಿಕೆ ಹೌದೋ ಅಲ್ಲವೋ ಎಂಬ ಗೊಂದಲ ಉಂಟಾಯಿತು. ಯಾಕೆಂದರೆ ಶೀರ್ಷಿಕೆಯಲ್ಲಿ ಅಷ್ಟೊಂದು ವ್ಯತ್ಯಾಸ ವಿತ್ತು (ಆವೃತ್ತಿಗಳ ವ್ಯವಸ್ಥೆಯ ಪರಿಚಯವಾಗಿದ್ದು ಆಗಲೇ)

ಬೆಂಗಳೂರು ಆವೃತ್ತಿಯಲ್ಲಿನ ಶೀರ್ಷಿಕೆ ದಿಗಿಲು ಹುಟ್ಟಿಸಲು ಕಾರಣವಿದೆ. ಒಳಗಿನ ಸುದ್ದಿಯೂ ಊರಿನ ಆವೃತ್ತಿಯಲ್ಲಿ ಓದಿದ್ದೇ. ಇಲ್ಲಿ ಶೀರ್ಷಿಕೆ ಮಾತ್ರ ಬದಲು, ಸುದ್ದಿ ಅದೇ.

ಹೀಗೇಕಾಯಿತು?

ಈ ಶೀರ್ಷಿಕೆಯನ್ನು ಕಂಡ ಓದುಗ ಇದು ಭಾರತೀಯ ಜನತಾ ಪಕ್ಷದ ಅಥವಾ ಅದರ ಮಿತ್ರಪಕ್ಷದ ಯಾರಾದರೊಬ್ಬ ಮುಖಂಡರ ಹೇಳಿಕೆ ಎಂದು ಸಹಜವಾಗಿಯೇ ಅಂದುಕೊಂಡರೆ ತಪ್ಪಿಲ್ಲ. ಆದರೆ ಮೇಲಿನ ಶೀರ್ಷಿಕೆ ಖಂಡಿತಾ ಅಂಥದ್ದಲ್ಲ.

15 ರಂದು ಮಂಡನೆಯಾದ ಗೊತ್ತುವಳಿ ಮೇಲೆ ಎರಡು ದಿನ ಚರ್ಚೆ ನಡೆದು 17 ರಂದು ಮತದಾನವಾಗಲಿದೆ ಎನ್ನುವುದು ಸುದ್ದಿಯ ಸಾರ. ಆ ದಿನ ಚರ್ಚೆ ಆರಂಭವಾಗಿತ್ತಷ್ಟೆ ಈ ಶೀರ್ಷಿಕೆಯಲ್ಲಿ ಇರಬಹುದಾದ ಧ್ವನಿಯ ಹೇಳಿಕೆ ಚರ್ಚೆಯಲ್ಲಿ ಪಾಲ್ಗೊಂಡವರ ಪೈಕಿ ಯಾರಿಂದಲೂ ಬಂದಿರಲಿಲ್ಲ. ಸುದ್ದಿ ಸಂಸ್ಥೆಗಳ ಮತ್ತು ಬೇರೆಲ್ಲಾ ಪತ್ರಿಕೆಗಳ ಸುದ್ದಿಗಳ ಮೇಲೆ ಕಣ್ಣಾಡಿಸಿದಾಗ ಈ ಅಂಶ ಸ್ಪಷ್ಟವಾಗುತ್ತದೆ.

ಹಾಗಾದರೆ ಇಂಥ ಶಿರ್ಷಿಕೆ ಹೇಗೆ ಬಂತು, ಇದು ಸರಿಯೇ, ಇದು ಪತ್ರಿಕಾ ವೃತ್ತಿಗೆ ತಕ್ಕುದೇ ಎಂಬಿತ್ಯಾದಿ ಪ್ರಶ್ನೆಗಳು ಸಹಜವಾಗಿಯೇ ಉದ್ಭವಿಸುತ್ತವೆ. ಪತ್ರಕರ್ತ ಮಿತ್ರರನ್ನು ಕೇಳಲಾಗಿ ಒಂದು ಸಂಗತಿ ತಿಳಿಯಿತು. ಬೆಂಗಳೂರು ಬಿಟ್ಟು ದೂರದ ಊರುಗಳಿಗೆ ಹೋಗುವ ಆವೃತ್ತಿಗಳು ಮೊದಲು ಮುದ್ರಣ ಗೊಳ್ಳುತ್ತವೆ ಎಂದು. ಅಂದರೆ ಆರಂಭದ ಮುದ್ರಣದ ಉಸ್ತುವಾರಿ ಹೊಂದಿದವರು ಕೋಮುವಾದದ ವಿರೋಧಿಗಳು ಇದ್ದಿರಬಹುದಾದರೂ ಅವರ ಆ ನಿಲುವು ಈ ಸುದ್ದಿಯಲ್ಲಿ ವ್ಯಕ್ತಗೊಳ್ಳದೆ ವಸ್ತು ನಿಷ್ಠವಾಗಿ ಸುದ್ದಿಗೆ ನ್ಯಾಯ ಒದಗಿಸಲಾಗಿದೆ; ವಿಶೇಷವಾಗಿ ಶೀರ್ಷಿಕೆ. ನಂತರ ಏಕೋ ಏನೋ ಮೇಲಿನವರ ನಿರ್ದೇಶನವಿರಬಹುದೋ, ಪಾಳಿಯಲ್ಲಿದ್ದವರ ಒಲವಿರಬಹುದೋ ಭಾರತೀಯ ಜನತಾ ಪಕ್ಷವನ್ನು ವಹಿಸಿಕೊಂಡು ಶೀರ್ಷಿಕೆ ಬಂದಿದೆ.

ಹಾಗೆ ನೋಡಲು ಹೋದರೆ ಅಂದಿನ ಸನ್ನಿವೇಶದಲ್ಲಿ ಸಾಕಷ್ಟು ಬೆಂಬಲವನ್ನು ಕ್ರೋಢೀಕರಿಸಿ ಸರಕಾರವನ್ನು ಉಳಿಸಿಕೊಳ್ಳುವ ವಿಶ್ವಾಸ ಬಿಜೆಪಿಗೆ ಇರಲಿಲ್ಲ. 'ಬಿಜೆಪಿ ಸರಕಾರ ಉರುಳಿಸಿ ನೋಡಿ' ಎಂದು ಅದು ಸವಾಲು ಹಾಕುವ ಪ್ರಶ್ನೆ ದೂರದ ಮಾತೇ ಆಗಿತ್ತು.

ಇಷ್ಟೆಲ್ಲಾ ಇದ್ದರೂ ವೃತ್ತ ಪತ್ರಿಕೆಯೊಂದು ಒಂದು ರಾಜಕೀಯ ಪಕ್ಷದ ಪರವಾಗಿ ಇನ್ನೂ ಮುಂದೆ ಹೋಗಿ ಅದರ ವಕ್ತಾರರಂತೆ ತಿಳಿಸಿದ್ದು ನಾಚಿಕೆಗೇಡಿನ ಸಂಗತಿಯಾಗಿದೆ. ಇದು ಅಪ್ಪಟ ಬಿಜೆಪಿ ಪರ ಶೀರ್ಷಿಕೆ ಎನ್ನುವುದು ರಾಜಕೀಯದ ಗಂಧಗಾಳಿ ಇಲ್ಲದವರೂ ಹೇಳಬಹುದಾಗಿದೆ.

ಈ ರೀತಿಯ ಶೀರ್ಷಿಕೆ ಕೊಡುವ ಮೂಲಕ (ಅದರಲ್ಲೂ ಆ ಸುದ್ದಿಯಲ್ಲಿ ಎಲ್ಲೆಲ್ಲೂ ಇಲ್ಲದ ವಿಷಯ) ಪತ್ರಿಕಾ ವೃತ್ತಿ ಧರ್ಮಕ್ಕೆ ಅನ್ಯಾಯ ಎಸಗಿರುವುದು ಢಾಳಾಗಿ ಎದ್ದು ಕಾಣುತ್ತದೆ. ಈ ಪ್ರಕರಣದಲ್ಲಿ ಪತ್ರಿಕೆಗಳು ಸುದ್ದಿ ನಿಷ್ಠವಾಗಿರಬೇಕೆಂಬ ಪತ್ರಿಕೋದ್ಯಮದ ಪ್ರಾಥಮಿಕ ಹಾಗೂ ಮೂಲಭೂತ ಪರಿಕಲ್ಪನೆಗೇ ಇಲ್ಲಿ ಕೊಡಲಿಯೇಟು ಬಿದ್ದಿದೆ.

ಪತ್ರಕರ್ತರ ಒಲವು ನಿಲುವುಗಳು ವೃತ್ತಿಯಲ್ಲಿ ಹೇಗೆ ಸಕಾರಾತ್ಮಕ ಆಗಿಯೂ ವ್ಯಕ್ತಗೊಳ್ಳಬಹುದು ಎನ್ನುವುದಕ್ಕೆ ಇದೊಂದು ಉದಾಹರಣೆಯಾಗಿದೆ.

ಕಾವಿ ಪ್ರಭಾವ

13 ತಿಂಗಳ ಬಿಜೆಪಿ ಮೈತ್ರಿಕೂಟದ ಸರಕಾರದ ಪತನದ ಸುತ್ತ ಮುತ್ತಲ ಇನ್ನಷ್ಟು ಸುದ್ದಿಗಳನ್ನು ಗಮನಿಸುವಾಗಲೂ ಮುದ್ರಣ ಮಾಧ್ಯಮದಲ್ಲಿ ಕಾವಿ ಪಡೆಯ ಪ್ರಭಾವ ಹೇಗೆ ಕೆಲಸ ಮಾಡುತ್ತಿದೆ ಎನ್ನುವುದು ಅರಿವಿಗೆ ಬರುತ್ತದೆ.

'ಲೋಕದಳ, ಡಿಎಂಕೆ ಬೆಂಬಲ ಬೀಜೇಪಿ ನಿರಾಳ- ಇದು ಅದೇ 'ಕನ್ನಡ ಪ್ರಭ'ದಲ್ಲಿ (17-4-99) ಪ್ರಕಟವಾದ ಶೀರ್ಷಿಕೆ. ಆದರೆ ಬಿಜೆಪಿ ಸರಕಾರ ಸೋತ ನಂತರ ಅಂದರೆ ಮರುದಿನವೇ ಪ್ರಕಟವಾದ ಶೀರ್ಷಿಕೆಯಿದು - **ಬಿಜೆಪಿ ಬಿತ್ತು, ಇನ್ನು ಕಾಂಗ್ರೆಸ್ ಕಸರತ್ತು**

ಬಹುಮತದ ಲಾಟರಿಯಲ್ಲಿ ವಾಜಪೇಯಿ ಸರಕಾರಕ್ಕೆ ಒಂದಂಕಿ ಸೋಲು (ಮೊದಲನೆ ಸಾಲು ದಪ್ಪಕ್ಷರ ಎರಡನೇಯ ಸಾಲು ಚಿಕ್ಕ ಅಕ್ಷರ)ಈ ಶೀರ್ಷಿಕೆಯಲ್ಲಿ ಸರಕಾರದ ಪತನದ ಗಹನತೆಯೇ ವ್ಯಕ್ತವಾಗುವುದಿಲ್ಲ ಎನ್ನುವುದು ಎದ್ದು ಕಾಣುತ್ತದೆ. ಬದಲಿಗೆ ಬಿಜೆಪಿ ಪರ

ಪುಟ 8 ನೋಡಿ

ಕಳಪೆ ಬೀಜದ ಹಾವಳಿಗೆ ತತ್ತರಿಸಿದ ರೈತರು

ಕುರುಗೋಡು: ಜ:21

ಸುಮಾರು ವರ್ಷಗಳಿಂದ ಕಾಣೆಯಾಗಿದ್ದ ಭರಣಿಮಳೆ, ಈ ವರ್ಷ ಬಳ್ಳಾರಿ ಜಿಲ್ಲೆಗೆ ಬಂದಿದೆ. ರೈತಾಪಿಯ ಕೆಲಸ ಚುರುಕುಗೊಂಡಿದೆ. ಇನ್ನೂ ಎಲ್.ಎಲ್.ಆರ್.ಸಿ ಕಾಲುವೆಗೆ ನೀರು ಬರದಿದ್ದರೂ ಭರಣಿಯನ್ನು ಅನುಸರಿಸಿದ ಇನ್ನೆರೆಡು ಬಾರಿಯ ಮಳೆ ಒಣ ಬೇಸಾಯದಲ್ಲಿ ಬಿತ್ತನೆಗೂ ಒತ್ತಡ ಬಂದಿದೆ. ಮಳೆ ತಂದ ಹರ್ಷಕ್ಕೆ ಜಿಲ್ಲೆಯ ರೈತರು ಖುಷಿಗೊಂಡು. ಉತ್ತಮ ಬೆಳೆತೆಗೆದು ಹಳೇ ಸಾಲಗಳನ್ನೆಲ್ಲಾ ಹೊಸಕಿ ಹಾಕಿ ಸ್ವಲ್ಪ ಲಾಭವನ್ನಾದರೂ ಕಾಣಬಹುದೆಂಬ ಕನಸು ಹೊತ್ತು ಒಳ್ಳೆಯ ಬೀಜಗಳಿಗಾಗಿ ಹುಡುಕಾಟ ನಡೆಸಿದ್ದಾರೆ. ಸಾಲದ ಶೂಲ ಹಿಡಿದು ಸಂಪತ್ತು ಗಳಿಸುವ ಬಡ್ಡಿ ಸಾಲ ಕೊಡುವ ಈ ದಣಿಗಳಿಗೂ ಈ ವರ್ಷ ಖುಷಿ. ಗ್ರಾಮಗಳಲ್ಲಿ ರೈತರು ಇವರ ಮನೆ ಬಾಗಿಲುಗಳಿಗೆ ಸಾಲು ಹಿಡಿದಿದ್ದಾರೆ.

ಕಳ್ಳ ವ್ಯಾಪಾರಿಗಳು

ರೈತರ ಮುಂಗಾರಿನ ಬಿತ್ತನೆ ರೈತರ ಎದೆಯ ತುಂಬಾ ಆಶಾದಾಯಕ ಕನಸುಗಳ ಹೊತ್ತು ಸಾಗುತ್ತಿದ್ದಂತೆ ಗುರು ಪ್ರಸಾದ ಎಂಟರ್ ಪ್ರೈಸಸ್, ಗುರು ಸಿದ್ದೇಶ್ವರ ಪ್ರಸನ್ನ ಟ್ರೇಡರ್ಸ್ ಮತ್ತು ಭಾರಿ ಕಮಿಷನ್ ವ್ಯಾಪಾರಿಯಾದ ಕಾಡಿಕಿ ಉಮಾಪತಿ ಎಂಬ ಲಾಭಬಡುಕ ಕುಳಗಳು ಈ ಜಿಲ್ಲೆಯಾದ್ಯಂತ ಕಳಪೆ ಹತ್ತಿ ಬೀಜಗಳನ್ನು ಮಾರುವ ಮೂಲಕ ರೈತರ ಕತ್ತು ಕೊಯ್ದಿದ್ದಾರೆ ಇಂಥಹ ಕಂತ್ರಿ ಮಾರಾಟಗಾರರಲ್ಲಿ ಒಬ್ಬರಾದ ಕುರುಗೋಡಿನ ವ್ಯಾಪಾರಿಯ ಮಳಿಗೆ ಯೊಂದರಲ್ಲಿ 3 ಲಾರಿ ಲೋಡಗಿಂತ ಹೆಚ್ಚು, ಬೀಜದ ಚೀಲಗಳು ರೈತರನ್ನು ಮುಳುಗಿಸಲು ಸಿದ್ಧವಾಗಿರು ವಾಗಲೇ, ಕರ್ನಾಟಕ ಪ್ರಾಂತ ರೈತ ಸಂಘವು ಮಳಿಗೆಗೆ ಮುತ್ತಿಗೆ ಹಾಕಿ ಕೃಷಿ ಅಧಿಕಾರಿಗಳಿಗೆ ದೂರು ನೀಡಿ ಮಳಿಗೆಯನ್ನು ಸೀಜ್ ಮಾಡಲು ಒತ್ತಡ ಹೇರಿದೆ.

ಒಣ ಬೇಸಾಯದಲ್ಲಿ ಬೆಳೆಯುವ ಮುಂಗಾರಿನ ಈ ಹತ್ತಿ ಬೀಜಗಳನ್ನು ಈ ಮಹಾಶಯರು ಉತ್ತರ ಪ್ರದೇಶ ಹಾಗೂ ಮಧ್ಯ ಪ್ರದೇಶ ರಾಜ್ಯಗಳಿಂದ ತರಿಸಿ ಕೊಂಡು ಮಾರುತ್ತಿದ್ದಾರೆ. ಎಂದು ತಿಳಿದು ಬಂದಿದೆ. ಕೊಂಡು ಕೊಂಡ ರೈತರು ಬೀಜದ ಚೀಲವನ್ನು ಒಡೆದು ನೋಡಿದಾಗ ಕಂಡದ್ದು, ಹುಳ ಹಿಡಿದ ಬೀಜಗಳು, ಬರೀ ಸಿಪ್ಪೆ, ಹೊಟ್ಟುಗಳಿಂದ ತುಂಬಿದ್ದನ್ನು ಕಂಡು ಸೀದಾ ರೈತ ಮುಖಂಡರ ಕೈಗೆ ತಲುಪಿಸಿದರು. ಬಾದನಹಟ್ಟಿ, ಕುರುಗೋಡಿನ ರೈತರು ಕೊಂಡು ಕೊಂಡ ಬೀಜಕ್ಕೆ ರಶೀದಿಯನ್ನು ಕೊಡದೆ ಒಂದು ಚೀಟಿಯನ್ನು ಮಾತ್ರ ಕೊಟ್ಟಿದ್ದಾರೆ. ಇದು ಇಲ್ಲಿಯ ರೈತರ ಪಾಡಾದರೆ, ಬಳ್ಳಾರಿ ನಗರದ ಸರಕಾರಿ ಕೃಷಿ ಉತ್ಪನ್ನ ಮಾರುಕಟ್ಟೆಯ ಆವರಣದೊಳಗೇ ಮಳಿಗೆಯನ್ನು ಹೊಂದಿದ ವ್ಯಾಪಾರಸ್ತರೂ ಇಂಥಹದ್ದೇ ಬೀಜ ಮಾರುತ್ತಿದ್ದಾರೆ ಎಂದು ನಗರದ ಹಾಗೂ ಗ್ರಾಮದ ರೈತರು ಹೇಳುತ್ತಿದ್ದಾರೆ. ಇದನ್ನು ಪರಿಶೀಲಿಸಲು ರೈತ ಸಂಘದ ಕಾರ್ಯಕರ್ತರು ಮುಂದಾದಾಗ ತಿಳಿದದ್ದು ಸರಿಸುಮಾರು 300 ಕ್ಕೂ ಹೆಚ್ಚು ಮಾರಾಟಗಾರರು ಇಂಥಹ ಬೀಜಗಳನ್ನು ಕೃಷಿ ಇಲಾಖೆಯ ಪರವಾನಿಗೆ ಇಲ್ಲದೆ ರಾಜಾರೋಷವಾಗಿ ಮಾರುತ್ತಿದ್ದಾರೆ ಎಂಬುದು ಈ ಕಂತ್ರಿ ವ್ಯಾವಹಾರ ಎ.ಪಿ. ಎಂ.ಸಿ.ಯ ಆವರಣದಲ್ಲಿ ನಡೆಯುತ್ತಿದ್ದರೂ ಎ.ಪಿ.ಎಂ.ಸಿ.ಯ ಆಡಳಿತ ಕೃಷಿ ಇಲಾಖೆಯ ಅಧಿಕಾರಿಗಳು ಕಣ್ಣು ಮುಚ್ಚಿ ಕುಳಿತಿದ್ದಾರೆ. ಅಥವಾ ಈ ಕಳ್ಳವ್ಯಾಪಾರಿಗಳು ಕೊಡುವ ಮಾಮೂಲು ಇವರ ಕಣ್ಣನ್ನು ಮುಚ್ಚಿಸಿರಬಹುದು.

ಎಂ.ಎಲ್.ಎ- ಎಂ.ಪಿ.ಗಳ ಶ್ರೀರಕ್ಷೆ

ಕಣ್ಣು ಮುಚ್ಚಿ ಹಾಲು ಕುಡಿಯುವ ಬೆಕ್ಕಿನಂತೆ ನಾಟಕ. ಈ ನಾಟಕ ಬಯಲಾಗಿದೆ ಈ ವ್ಯಾಪಾರಸ್ತರಲ್ಲಿ ಬಹಳ ಮಂದಿ ಆಂಧ್ರ ಮೂಲದವರಾಗಿದ್ದು ಇವರಲ್ಲಿ ಕೆಲವರು ಬಳ್ಳಾರಿ ನಗರದ ಎಂ.ಎಲ್.ಎ. ಎಂ. ದಿವಾಕರ ಬಾಬು ಹಾಗೂ ಬಳ್ಳಾರಿ ಜಿಲ್ಲೆಯ ಎಂ.ಪಿ. ಕೆ.ಸಿ. ಕೊಂಡಯ್ಯ ನವರ ಆಪ್ತರೂ ಎಂಬುದೂ ಸಾಬೀತಾಗಿದೆ. ಈ ಕಳ್ಳವ್ಯಾಪಾರಿಗಳ ಗುಂಪಿಗೆ ಈ ಮಾಹಾನ್ ನಾಯಕ ಮಣಿಗಳ ರಕ್ಷಾ ಕವಚವಿದೆ.

ಈ ವ್ಯಾಪಾರಸ್ತರ ಕೆ.ಎಸ್.ಟಿ. ಮತ್ತು ಸಿ.ಎಸ್.ಟಿ. ನಂಬರ್‌ಗಳು ಸುಳ್ಳಾಗಿವೆ. ಯಾವುದೋ ಅಂಗಡಿಗಳ ಯಾರದೋ ವ್ಯಾಪಾರಸ್ತರ ಕೆ.ಎಸ್.ಟಿ.; ಸಿ.ಎಸ್.ಟಿ. ನಂಬರ್‌ಗಳನ್ನೇ ತಮ್ಮ ಅಂಗಡಿಯದೆಂದು ಹೇಳಿಕೊಂಡು ದಂದೆ ನಡೆಸುತ್ತಿದ್ದಾರೆ. ಮಾಲು ಖರೀದಿಗಾಗಿ ಸಿ.ಎಸ್.ಟಿ. ಮಾರಾಟಕ್ಕಾಗಿ ಕೆ.ಎಸ್.ಟಿ ನಂಬರುಗಳಿದ್ದರೂ ಕೃಷಿ ಇಲಾಖೆ ಇವುಗಳನ್ನೇಕೆ ಪರಿಶೀಲಿಸದೇ ಹೋಗಿದೆ? ಕೃಷಿ ಇಲಾಖೆಯ ಮನ್ನಣೆ ಇಲ್ಲದೇ ವ್ಯಾಪಾರ ನಡೆದಿದ್ದರೂ. ಕೃಷಿ ಇಲಾಖೆ ಏಕೆ ಬಾಯಿಮುಚ್ಚಿ ಕುಳಿತಿದೆ? ಎಂಬುದು ವಿಸ್ಮಯದ ಸಂಗತಿಗಳಾಗಿವೆ. ಕಳ್ಳ ವ್ಯಾಪಾರಿಗಳು, ಇವರಿಗೆ ರಕ್ಷಾಕವಚವಾಗಿರುವ ಎಂ.ಪಿ. ಹಾಗೂ ಎಂ.ಎಲ್.ಎಗಳು, ಲಂಚದಲ್ಲಿ ತೇಲಾಡಿ ತಮ್ಮ ಪಂಚ ಇಂದ್ರಿಯಗಳನ್ನೂ ಕಳ ಕೊಂಡ ಕೃಷಿ, ಎ.ಪಿ.ಎಂ.ಸಿ. ಅಧಿಕಾರಿಗಳು ಇವರೆಲ್ಲ ಸೇರಿ ಜಿಲ್ಲೆಯ ರೈತಾಪಿಯನ್ನು ಹಾಗೂ ರೈತರನ್ನು ಕೊಲೆ ಮಾಡುತ್ತಿದ್ದಾರೆ.

ವರದಿ: ಪಿ.ಆರ್.ವೆಂಕಟೇಶ್

ಈ ಹಿನ್ನೆಲೆಯಲ್ಲಿ ಕರ್ನಾಟಕ ಪ್ರಾಂತ ರೈತ ಸಂಘ ಬಳ್ಳಾರಿ ತಾಲೂಕು ಸಮಿತಿ ಕುರುಗೋಡಿನ ವ್ಯಾಪಾರಸ್ತರ ಮಳಿಗೆಗೆ ಮುತ್ತಿಗೆ ಹಾಕಿದ ಪರಿಣಾಮವಾಗಿ ವ್ಯಾಪಾರಿಯು ಮಣಿದು ತನ್ನಲ್ಲಿ ಬೀಜ ಕೊಂಡ ರೈತರಿಗೆ ಹಣ ವಾಪಸು ನೀಡಲು ಒಪ್ಪಿಕೊಂಡಿದ್ದು 30 ಜನ ರೈತರಿಗೆ ಪ್ರಾಂತ ರೈತ ಸಂಘದ ಮುಖಾಂತರ ಹಣ ವಾಪಸು ನೀಡಲಾಗಿದೆ. ಈ ಹೋರಾಟ ಜಿಲ್ಲೆಯಾದ್ಯಂತ ಬೆಳೆದು ಬರುವ ಸಾಧ್ಯತೆ ಇದ್ದು ಸಂಘವು ಹೋರಾಟದ ರೂಪರೇಷಗಳ ಬಗ್ಗೆ ಚರ್ಚಿಸಲಿದೆ.

ಈ ಹೋರಾಟದಲ್ಲಿ ಪ್ರಾಂತ ರೈತ ಸಂಘದ ಮುಖಂಡರಾದ ಕಾಂ॥ ವಿ.ಎಸ್. ಶಿವಶಂಕರ್ ಕಾಂ. ಪಿ.ಆರ್.ವೆಂಕಟೇಶ್ ಕಾಂ. ಕೆ. ಗಾದಿಲಿಂಗಪ್ಪ ಪಾಲ್ಗೊಂಡಿದ್ದರು.

ಹೋರಾಟಕ್ಕೆ ಉದುರಿದ 20 ಸಾವಿರ

ದೇವದಾಸಿ ವಿಮೋಚನಾ ಸಂಘದ ಸಹಾಯ ಪಡೆದು ಸಿದ್ದಮ್ಮನ ಹಳ್ಳಿಯಲ್ಲಿ ಕೃಷಿಕೂಲಿಕಾರರ ಸಂಘವನ್ನು ರಚಿಸಬೇಕೆಂದು ಕೂಲಿಕಾರರ ಸಂಘದ ಕುರುಗೋಡು ವಿಭಾಗೀಯ ಸಮಿತಿ ನಿರ್ಧರಿಸಿತು. ಈ ನಿರ್ಧಾರವನ್ನು ಹೊತ್ತ ಸಂಗಾತಿಗಳು ಸಿದ್ಧಮ್ಮನಹಳ್ಳಿಯಲ್ಲಿ ಇತ್ತೀಚೆಗೆ ಸಂಘವನ್ನು ರಚಿಸಲು ಬಹಿರಂಗ ಸಭೆ ನಡೆಸುವಾಗ ಅಲ್ಲಿ ಕೆಲ ಜಾತೀಯ ಸಂಘಗಳು ಸಭೆಯಲ್ಲಿ ಗದ್ದಲ ನಡೆಸಿ ಸಂಘ ರಚನೆಯಾಗ ದಂತೆ ತಡೆಗಟ್ಟಿದರು. ಪುನ: ಪ್ರಯತ್ನಿಸಿ ಘಟಕ ರಚನೆಯಾಗುತ್ತಿರುವಾಗ ಕೆಲವರು ಕುಡಿದು ಬಂದು ಘಟಕ ರಚನೆಯಲ್ಲಿ ಪಾಲ್ಗೊಂಡ ಸ್ಥಳೀಯ ಕೂಲಿಕಾರರನ್ನು ಯಾವುದೋ ನೆಪ ಒಡ್ಡಿ ಹೊಡೆದು ಘಟಕ ರಚನೆಯಾಗದಂತೆ ತಡೆಗಟ್ಟಿದರು.

ಈ ಎಲ್ಲಾ ಘಟನೆಗಳ ಹಿನ್ನೆಲೆಯಲ್ಲಿ ಸಂಗಾತಿಗಳ ಸಭೆ ಆಲೋಚಿಸಿ ಸ್ವಲ್ಪಸಮಯ ಕಾದುನೋಡಿ ಸಂಘಕಟ್ಟುವ ತೀರ್ಮಾನ ಮಾಡಲಾಯ್ತು. ಆ ಸಂದರ್ಭಕ್ಕಾಗಿ ಕಾದು ನೋಡುತ್ತಿದ್ದ ಮಹಿಳಾ ಸಂಗಾತಿಗಳು ಸ್ಥಳೀಯ ಸಮಸ್ಯೆ ಯೊಂದನ್ನು ಕೈಗೆತ್ತಿಕೊಂಡರು.

ಬಹಳ ವರ್ಷಗಳಿಂದ ಕೊಳೆ ನೀರು ನಿಂತು ಕೇರಿಯ ತುಂಬಾ ಗಬ್ಬುವಾಸನೆ ಬೀರುವ ಚರಂಡಿಯ ರಿಪೇರಿಯಾಗ ಬೇಕು. ಈ ಬಗ್ಗೆ ಹಲವಾರು ಸಾರಿ ಅಲ್ಲಿನ ಕೃಷಿ ಕೂಲಿಕಾರರು ಸಾಕಷ್ಟು ಬಾರಿ ಮನವಿಯನ್ನು ಸ್ಥಳೀಯ ಪಂಚಾಯ್ತಿಗೆ ಕೊಟ್ಟರೂ, ಮನವಿಗೆ ಮಣಿಯದೆ ತಮ್ಮ ವಾದವನ್ನೇ ಮುಂದುವರೆಸಿದರು. ಪಂಚಾಯ್ತಿಯ ನಿರ್ಲಕ್ಷ್ಯವನ್ನು ಕಟುವಾಗಿ ವಿರೋಧಿಸಿ ಜಿಲ್ಲಾ ಪಂಚಾಯ್ತಿಯವರಿಗೆ ತಿಳಿಸಿದರೂ ಯಾವುದೇ ಪ್ರಯೋಜನವಾಗಲಿಲ್ಲ.

ಮಡುಗಟ್ಟಿದ ನೀರು, ಕೊಳೆತು ವಾಸನೆಯಷ್ಟೇ ಅಲ್ಲ. ಕೂಲಿಕಾರರ ಜೀವನವನ್ನೇ ಕೊಳಕು ಮಂಡಲವಾಗಿಸಿ ಅನೇಕ ರೋಗಗಳಿಗೆ ಕಾರಣವಾಯ್ತು. ಆದರೂ ಪಂಚಾಯ್ತಿ ಅಧ್ಯಕ್ಷರು ಹಣವಿಲ್ಲವೆಂಬ ಹಳೇ ಮಾತನ್ನೇ ಮುಂದುವರೆಸಿದರು. ಕೊನೆಯಲ್ಲಿ ಪ್ರಾಂತ ಕೃಷಿ ಕೂಲಿಕಾರರ ಸಂಘ ದೇವದಾಸಿ ವಿಮೋಚನಾ ಸಂಘ, ಸ್ಥಳೀಯ ಅಂಬೇಡ್ಕರ್ ಯುವಕ ಸಂಘ ಜಂಟಿಯಾಗಿ ಸಭೆ ನಡೆಸಿ ಪಂಚಾಯ್ತಿ ಎದುರು ಧರಣಿ ಕಾರ್ಯಕ್ರಮವನ್ನು ನಡೆಸಲು ತಿರ್ಮಾನಿಸಿ ಕರಪತ್ರವನ್ನು ಮುದ್ರಿಸಿ ಹಂಚಲಾಯ್ತು. ಕರಪತ್ರ ಪಂಚಾಯ್ತಿ ಅಧ್ಯಕ್ಷರಿಗೂ ತಲುಪಿತು.

ದೌಡಾಯಿಸಿ ಕುರುಗೋಡಿಗೆ ಬಂದ ಅಧ್ಯಕ್ಷರು ಕೂಲಿಕಾರ ಸಂಘದ ಮುಖಂಡರನ್ನು ಕಂಡು ಧರಣಿ ನಿಲ್ಲಿಸುವಂತೆ ಮಾತುಕತೆ ನಡೆಸುವಂತೆ ಮನವಿ ಮಾಡಿದರು. ಈ ಮನವಿಯನ್ನು ಮೂರೂ ಸಂಘಗಳು ಚರ್ಚಿಸಿ ಮಾತುಕತೆಗೆ ಒಪ್ಪಿಕೊಳ್ಳಲಾಯ್ತು.

ಮರುದಿನ ಪಂಚಾಯ್ತಿಯಲ್ಲಿ ಪ್ರಾಂತ ಕೃಷಿ ಕೂಲಿಕಾರರ ಸಂಘ, ದೇವದಾಸಿ ವಿಮೋಚನ ಸಂಘ ಹಾಗೂ ಅಂಬೇಡ್ಕರ್ ಯುವಕ ಸಂಘಗಳ ಪ್ರತಿನಿಧಿಗಳು ಪಾಲ್ಗೊಂಡು ಚರ್ಚೆನಡೆಸಿದ ಪರಿಣಾಮವಾಗಿ ಚರಂಡಿ ರಿಪೇರಿಗೆ 20,000 ರೂಗಳನ್ನು ಕೊಡುವುದಾಗಿ ಪಂಚಾಯ್ತಿ ಅಧ್ಯಕ್ಷರು ಒಪ್ಪಿಗೆ ನೀಡಿದರು. ಕೆಲಸವನ್ನು ಸಂಘವೇ ಮಾಡಿಸಬೇಕೆಂದು ಕೇಳಿಕೊಂಡರು.

ಇಲ್ಲಿಯವರೆಗೂ ಸಂಘಗಳ ಮನವಿಗಳಿಗೆ ಮಣಿಯದ ಪಂಚಾಯ್ತಿ ಹಣವಿಲ್ಲವೆಂಬ ಮಂತ್ರವನ್ನೇ ಹೇಳುತ್ತಾ ಹೋಗಿತ್ತು. ಆದರೆ ಹೋರಾಟಕ್ಕೆ 20.000 ರೂಗಳು ಎಲ್ಲಿಂದ ಉದರಿದವು? ಎಂಬುದು ಕೂಲಿಕಾರರ ನಡುವೆ ಸದಾ ಚರ್ಚೆಯ ವಿಷಯವಾಗಿದೆ. ಈಗ ಕೂಲಿಕಾರರ ಸಂಘ ರಚಿಸಲು ಬೇಕಾದ ವಾತಾವರಣ ರೂಪಗೊಂಡಿದೆ. ಈ ಹೋರಾಟದಲ್ಲಿ ಕಾಂ. ಹೆಚ್.ಎಂ. ವಿಶ್ವನಾಥ ಸ್ವಾಮಿ, ಕಾಂ. ಇಮಾಂ ಸಾಬ್, ಕಾಂ. ಹುಲಿಗಮ್ಮ, ಕಾಂ. ಯರ್ರೆಮ್ಮ ಹಾಗೂ ಅಂಬೇಡ್ಕರ್ ಯುವಕ ಸಂಘದ ಗೆಳೆಯರಾದ ಶ್ರೀ ರಂಗಸ್ವಾಮಿ ಮತ್ತು ಶ್ರೀ ಗಾದಿಲಿಂಗಪ್ಪ ಇವರುಗಳು ಭಾಗವಹಿಸಿದ್ದರು. ○

ಖಾಸಗಿ ಚಾನಲ್........

ಪುಟ 7 ರಿಂದ

ಇತರ ಬಂಡವಾಳಶಾಹಿ ದೇಶಗಳಲ್ಲಿ ಸ್ಪಷ್ಟವಾಗಿ ಕಂಡಿದೆ. ಖಾಸಗಿ ಟೀವಿ ವ್ಯಾಪಕವಾದಂತೆ ಚುನಾವಣಾ ವಿಷಯಗಳು, ಪಕ್ಷಗಳ ಕಾರ್ಯಕ್ರಮಗಳು, ಘೋಷಣೆಗಳು ಅಮುಖ್ಯವಾಗುತ್ತಾ ವ್ಯಕ್ತಿ ಕೇಂದ್ರಿತವಾಗುತ್ತಾ ಹೋಗುತ್ತವೆ. ವ್ಯಕ್ತಿಗಳಲ್ಲೂ ವಿಚಾರ ಮಂಡನೆಗಿಂತಲೂ ನಟಿಸುವುದು ಮುಖ್ಯವಾಗುತ್ತಾ ಹೋಗುತ್ತದೆ. ಅಮೆರಿಕದ ಅಧ್ಯಕ್ಷರ ಚುನಾವಣೆಗಳಂತೂ ಬರೀ ಜಾಹೀರಾತುಗಳ ಆಧಾರದ ಮೇಲೆ ನಡೆಯುತ್ತವೆ. ಟಿವಿ ಜಾಹೀರಾತುಗಳ, ಪ್ರಚಾರ ಸಮಯದ ಬೆಲೆ ವಿಪರೀತವಾದ್ದರಿಂದ ಚುನಾವಣಾ ವೆಚ್ಚ ಏರಿವೆ. ಚುನಾವಣಾ ಪ್ರಚಾರದಲ್ಲಿ ಟೀವಿ ಪ್ರಭಾವ ಹೆಚ್ಚಿದಂತೆ ಪ್ರಾದೇಶಿಕ ಸ್ಥಳೀಯ ಸಮಸ್ಯೆಗಳು ಚುನಾವಣೆಯಲ್ಲಿ ಅಮುಖ್ಯವಾಗುತ್ತಾ ಹೋಗುತ್ತವೆ.

ಇವೆಲ್ಲ ನಮ್ಮ ದೇಶದ ಚುನಾವಣೆಗಳಲ್ಲಿ ತಕ್ಷಣ ಆಗುತ್ತವೆ ಅಂತಲ್ಲ. ಆದರೆ ಖಾಸಗೀ ಕಮರ್ಷಿಯಲ್ ಟಿವಿ ಚಾನೆಲ್‌ಗಳ ವ್ಯಾಪಕತೆ, ಪ್ರಭಾವ ಜಾಸ್ತಿಯಾಗುತ್ತಾ ಹೋದಂತೆ ಈ ಪ್ರವೃತ್ತಿ ಖಂಡಿತವಾಗಿಯೂ ಇಲ್ಲೂ ಕಾಣ ಬರುತ್ತದೆ. ಈಗಾಗಲೇ ಇಂತಹ ಸೂಚನೆಗಳಿವೆ.

ಪ್ರಜಾಪ್ರಭುತ್ವ ಮತ್ತು ಸಾಮೂಹಿಕ ಮಾಧ್ಯಮಗಳು:

ಪ್ರಜಾಪ್ರಭುತ್ವಕ್ಕೆ ಸಾಮೂಹಿಕ ಮಾಧ್ಯಮಗಳು ಮಾಡಬೇಕಾದ್ದು ಎಲ್ಲಾ ಜನರಿಗೆ ಪ್ರಚಲಿತ ವಿದ್ಯಮಾನಗಳ ಬಗ್ಗೆ ಹಲವು ದೃಷ್ಟಿಕೋನಗಳಿಂದ ಮಾಹಿತಿ, ಆ ಬಗ್ಗೆ ಸ್ವತಂತ್ರ ಚರ್ಚೆ, ರಾಜಕೀಯ ಪಕ್ಷಗಳ ಧೋರಣೆ, ಕಾರ್ಯಕ್ರಮಗಳ ಬಗ್ಗೆ ಮಾಹಿತಿ ಚರ್ಚೆ. ಇವುಗಳಲ್ಲಿ ಯಾವುದೇ ಒಂದು ವರ್ಗದ ಜನ ವಿಭಾಗದ ಹಿತಾಸಕ್ತಿಗಳು ತಲೆಹಾಕಬಾರದು ಖಾಸಗೀ ಟೀವಿ ಚಾನೆಲ್‌ಗಳು ಇವನ್ನು ಯಾವತ್ತೂ ಮಾಡಲಾರವು. ಏಕೆಂದರೆ ಇವುಗಳ ಒಡೆತನ, ಜಾಹೀರಾತುದಾರರು ಇಬ್ಬರೂ ಸಮಾಜದ ಪ್ರಬಲವಾದ ಆಳುವ ವರ್ಗಕ್ಕೆ ಸೇರಿದವರು. ಆ ವರ್ಗದ ಹಿತಾಸಕ್ತಿ ಎತ್ತಿ ಹಿಡಿಯುವುದು ಅವುಗಳ ನಿಜವಾದ ಉದ್ದೇಶ. ಸಾಮಾನ್ಯ ಜನತೆ ತನ್ನ ಹಿತಾಸಕ್ತಿಗಳನ್ನು ಕಂಡು ಕೊಳ್ಳದಂತೆ, ಆಳುವ ವರ್ಗದ ವಂಚಕ ನೀತಿ ಬಗ್ಗೆ ತಿಳಿದು ಕೊಳ್ಳದಂತೆ ರಾಜಕೀಯ ಜೀವನದಲ್ಲಿ ಅರ್ಥಪೂರ್ಣವಾಗಿ ಭಾಗವಹಿಸದಂತೆ ಜನಪರ ರಾಜಕೀಯ ಪಕ್ಷಗಳ ಶಕ್ತಿಗಳ ಬಗ್ಗೆ ತಿಳಿದುಕೊಳ್ಳದಂತೆ ಮಾಡುವುದೇ ಅವುಗಳ ಉದ್ದೇಶ. ಆದ್ದರಿಂದಲೇ ಖಾಸಗಿ ಚಾನೆಲ್‌ಗಳು ಆರ್ಥಿಕ ನೀತಿಗಳನ್ನು (ಉದಾರೀಕರಣ, ಜಾಗತೀಕರಣ) ಸರ್ಕಾರಿ ಚಾನೆಲ್‌ಗಳಿಗಿಂತಲೂ ಜೋರಾಗಿ, ಮುಕ್ತವಾಗಿ ಬೆಂಬಲಿಸಿವೆ. ಅವುಗಳ ವಿರುದ್ಧವಾದ ದೃಷ್ಟಿಕೋನ, ಪಕ್ಷಗಳ, ಶಕ್ತಿಗಳ ಬಗ್ಗೆ ಏನನ್ನೂ ಪ್ರಸಾರ ಮಾಡುವುದಿಲ್ಲ.

ಸದ್ಯಕ್ಕೆ ಮುದ್ರಣ ಮಾಧ್ಯಮದಲ್ಲೇ ಪ್ರಜಾಪ್ರಭುತ್ವಕ್ಕೆ ಪೂರಕವಾದ ಹಲವು ಅಂಶಗಳಿವೆ. ಪತ್ರಿಕೆಗಳಲ್ಲಿನ ದೃಷ್ಟಿಕೋನಗಳ, ವಿಚಾರ, ಒಡೆತನದಲ್ಲಿ ವೈವಿಧ್ಯತೆ 'ಟಿವಿ ಚಾನೆಲ್‌ಗಳಲ್ಲಿಲ್ಲ. ಪತ್ರಿಕೆಗಳನ್ನು, ಮ್ಯಾಗಜೀನ್‌ಗಳನ್ನು ಆರಂಭಿಸಲು ಬೇಕಾದ ಬಂಡವಾಳ ದುಡಿಯುವ ಜನಪರ ಶಕ್ತಿಗಳಿಗೆ ಸಂಘಟನೆಗಳಿಗೆ ಕೈಗೆಟುಕುವಂತಹದ್ದು.

ಮುಂಬರುವ ಚುನಾವಣೆಗಳಲ್ಲಿ ಮುಂದಿನ ರಾಜಕೀಯ ಜೀವನದಲ್ಲಿ ಈ ಖಾಸಗೀ ಟೀವಿ ಚಾನೆಲ್‌ಗಳು ಮಹತ್ವದ ಪಾತ್ರ, ವಹಿಸುತ್ತವೆ. ಆದರೆ ಅದು ಪ್ರಜಾಪ್ರಭುತ್ವಕ್ಕೆ, ಜನರ ಪರವಾಗಿ ಆರೋಗ್ಯಕರ ಪಾತ್ರವಾಗಿ ಇರುವುದಿಲ್ಲ ಎಂದು ಸ್ಪಷ್ಟವಾಗಿ ತಿಳಿದುಕೊಳ್ಳಬೇಕು. ಆ ಬಗ್ಗೆ ಯಾವುದೇ ಭ್ರಮೆ ಬೇಡ- ದೂರದರ್ಶನ ಸಾರ್ವಜನಿಕ ಒಡೆತನದಲ್ಲಿದ್ದೂ ಜನರ ಜನಪರ ಮಾಧ್ಯಮವಾಗಿ ಬೆಳೆಯದ್ದಕ್ಕೆ ಆಳುವ ವರ್ಗದ, ಅವರ ಆಳುವ ಪಕ್ಷಗಳ ಹಿತಾಸಕ್ತಿ ಮೀರಲು ಸಾಧ್ಯವಾಗದ್ದು ಕಾರಣ. ಆ ವೈಫಲ್ಯಗಳನ್ನು ಬಳಸಿ ಖಾಸಗೀ ಟೀವಿ ಚಾನೆಲ್‌ಗಳು ಜನರಿಗೆ ಹತ್ತಿರವಾಗುತ್ತಿವೆ. ತಮ್ಮ ಪ್ರಭಾವ ಬೆಳೆಸಿ ಕೊಂಡಂತೆ ಅವುಗಳ ಸ್ವರೂಪ ಸ್ಪಷ್ಟವಾಗುತ್ತಾ ಹೋಗುತ್ತದೆ.

ಜನಪರ ಪ್ರಜಾಪ್ರಭುತ್ವ ಬಲಪಡಿಸಲು ಬೇಕಾದ ಸಾಮೂಹಿಕ ಮಾಧ್ಯಮ ಬೆಳೆಯಲು ಅದು ಸಾರ್ವಜನಿಕ ಒಡೆತನ ದಲ್ಲಿರಬೇಕು. ಜನರು ಅದನ್ನು ನಿಯಂತ್ರಿಸುವಂತಿರಬೇಕು. ಸರ್ಕಾರ ಖಾಸಗೀಕಂಪನಿಗಳು, ಖಾಸಗಿ ಹಿತಾಸಕ್ತಿಗಳ ನಿಯಂತ್ರಣ ಅದರ ಮೇಲೆ ಇರಬಾರದು. 'ಪ್ರಸಾರ ಭಾರತಿ ಕಾರ್ಪೋರೇಷನ್' ಕಾನೂನು ಹಲವು ಜನಪರವಾದ ಬದಲಾವಣೆಗಳೊಂದಿಗೆ ಜಾರಿಗೆ ತಂದರೆ ಮಾತ್ರ ಇದು ಸಾಧ್ಯ. ○

ಕೋಮುವಾದಿಗಳ ವಕ್ತಾರರು....

ಪುಟ 7 ರಿಂದ

ಸಹಾನುಭೂತಿ ಕಾಣುತ್ತದೆ.

ಕೇವಲ 24 ಗಂಟೆಗಳ ಹಿಂದೆ ನಿರಾಳವಾಗಿದ್ದ ಸರಕಾರ ಸೋಲುಂಡಿತೆಂದರೆ ಅದು ಗಮನಾರ್ಹ ವಿಚಾರವೇ. ಅದನ್ನು Focus ಮಾಡುವುದನ್ನು ಬಿಟ್ಟು ಈ ರೀತಿ ಬರೆಯುವುದು ಅಸಂಗತವಾಗಿದೆ. ಅದು ಅಸಮ್ಮತವೂ ಹೌದು.

ಹುತಾತ್ಮ ಪಟ್ಟ ಸಂಪಾದಕೀಯ

ಬಿಜೆಪಿ ಸರಕಾರ ಉರುಳಿದ ಸುದ್ದಿಯ ಜತೆ ಕನ್ನಡ ಪ್ರಭದ ಮುಖಪುಟದಲ್ಲೇ ಒಂದು ಸಂಪಾದಕೀಯವಿತ್ತು. ಅದರಲ್ಲಿ ಅಧಿಕಾರ ಕಳೆದು ಕೊಂಡು ವಾಜಪೇಯಿಗೆ ಹುತಾತ್ಮ ಪಟ್ಟವನ್ನು ದಯಪಾಲಿಸಲಾಗಿದೆ! ದೇವೇಗೌಡರಿಗೂ ಇಂದ್ರಕುಮಾರ ಗುಜ್ರಾಲರಿಗೂ ಇಲ್ಲದ ಭಾಗ್ಯ!!

ವಾಜಪೇಯಿ ಒಳ್ಳೆಯವರು, ಅವರಿಗೆ ಹೀಗಾಗಬಾರದಿತ್ತು ಎನ್ನುವುದು ಸಂಪಾದಕೀಯದ ಸಾರಾಂಶ 'ಸಮರ್ಥ ಪ್ರಧಾನಿ ಸುಭದ್ರ ಸರಕಾರ' ವೆಂಬ ಬಿಜೆಪಿಯ ಘೋಷಣೆ ಎಷ್ಟು ಟೊಳ್ಳು ಎಂಬುದು ಆ 13 ತಿಂಗಳಲ್ಲೇ ಅದೆಷ್ಟೋ ಬಾರಿ ಅನುಮಾನಕ್ಕೆಡೆಯಿಲ್ಲದ ರೀತಿಯಲ್ಲಿ ಸಾಬೀತಾಗಿತ್ತು.

ಆರ್.ಎಸ್.ಎಸ್. ಅನ್ನು ಆತ್ಮವಾಗಿ ಹೊಂದಿರುವ ವಾಜಪೇಯಿಯವರ ನಿಜವಾದ ಮುಖ ಏನೆಂಬುದೂ ಅಷ್ಟರಲ್ಲಿ ಅನಾವರಣಗೊಂಡಿತ್ತು. ಅದೆಲ್ಲಾವನ್ನು ಈ ಸಂಪಾದಕೀಯ ಲೇಖಕರು ಏಕೆ ಮರೆತರೋ ಹೇಗೆ ಮರೆತರೋ. ಅದೂ ಅಲ್ಲದೆ ಒಂದು ಸರಕಾರ ಬರುವುದು ಹೋಗುವುದು, ಬಹುಮತ ಗಳಿಸುವುದು ಅಲ್ಪಮತಕ್ಕಿಳಿಯುವುದು ಸಂಸದೀಯ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಸಹಜ ವಿದ್ಯಮಾನಗಳು. ಈ ಪ್ರಾಥಮಿಕ ಅಂಶವೂ ಅವರ ತಲೆಗೆ ಹೊಳೆಯಲಿಲ್ಲವೇ? ಅಥವಾ ಇವೆಲ್ಲಾ ಜಾಣ ಮರವೇ?

ಅಜ್ಞಾನವೂ ಅಲ್ಲ, ಜಾಣ ಮರೆವೂ ಅಲ್ಲ. ತಮ್ಮ ರಾಜಕೀಯ ಒಲವು ನಿಲವುಗಳನ್ನು ವ್ಯಕ್ತಪಡಿಸುವ ಮಾನಗೇಡಿ ರೀತಿಯಿದು ಅಷ್ಟೆ.

ಪತ್ರಕರ್ತರು ವಸ್ತು ನಿಷ್ಠರಾಗಿರಬೇಕು, ವೃತ್ತಿ ನಿಷ್ಠರಾಗಿರಬೇಕು, ರಾಜಕೀಯ ಅವರನ್ನು ಸೋಕಬಾರದು ಎಂಬಿತ್ಯಾದಿ ಭೋದನೆಗಳನ್ನು ನಾವು ಆಗಾಗ ಕೇಳುತ್ತೇವೆ. ಆದರೆ ಇದು ಎಷ್ಟರ ಮಟ್ಟಿಗೆ ಪಾಲನೆಯಾಗುತ್ತದೆ ಎನ್ನುವುದರ ಜತೆಯಲ್ಲೇ ಪತ್ರಕರ್ತರಿಗೆ ನಿಜವಾಗಿಯೂ ರಾಜಕೀಯ ಒಲವು ನಿಲುವು ಇರಬಾರದೇ ಎಂಬ ಪ್ರಶ್ನೆಯೂ ಎದುರಾಗುತ್ತದೆ.

ರಾಜಕೀಯ ಇರಬಾರದು ಎನ್ನುವುದಾಗಲೀ ನನಗೆ ರಾಜಕೀಯ ಇಲ್ಲವಪ್ಪ ಎನ್ನುವುದಾಗಲೀ ಬರೀ ಆತ್ಮವಂಚನೆಯ ಮಾತಾಗುತ್ತದೆ.

ಎಚ್.ಡಿ.ದೇವೇಗೌಡರು ಪ್ರಧಾನಿಯಾದಾಗ ಅದಕ್ಕೆ ಪಶ್ಚಾತ್ತಾಪವಾಗಿ 'ಇಂಡಿಯನ್ ಎಕ್ಸ್‌ಪ್ರೆಸ್'ನ ಉಪಸಂಪಾದಕನೊಬ್ಬ ಒಂದು ದಿನ ಊಟವನ್ನೇ ಮಾಡಲಿಲ್ಲವಂತೆ! ಹೇಗಿದೆ ನೋಡಿ ಪತ್ರಕರ್ತರ ರಾಜಕೀಯ ರಾಹಿತ್ಯತೆ!!

ವಾಜಪೇಯಿ ಪ್ರಧಾನಿ ಆಗಿದ್ದರಿಂದ ಸ್ವರ್ಗವೇನೂ ಧರೆಗಿಳಿದು ಬರಲಿಲ್ಲ ಎಂದು ಆತನಿಗೆ ನೆನಪಿಸೋಣ.

ಗ್ರಾಮ ಪಂಚಾಯತ್ ನೌಕರರಿಗೆ ಒಂದು ಮಹತ್ವದ ಮುನ್ನಡೆ

ವೇತನ ಹೆಚ್ಚಳದ ಪ್ರಕಟಣೆ ಕೊನೆಗೂ ಹೊರಬಂತು

ಕರ್ನಾಟಕ ರಾಜ್ಯದ ಸುಮಾರು 5700 ಗ್ರಾಮ ಪಂಚಾಯತ್‌ಗಳಲ್ಲಿ ದುಡಿಯುವ ಸುಮಾರು 30000 ನೌಕರರು - ಗುಮಾಸ್ತರು, ಬಿಲ್ ಕಲೆಕ್ಟರರು, ಪಂಪ್ ಆಪರೇಟರುಗಳು, ಸಿಪಾಯಿಗಳು, ಕಸ ಗುಡಿಸುವವರು, ಬಾಲವಾಡಿ ಶಿಕ್ಷಕಿಯರು ಇತ್ಯಾದಿ ಇದೇ ಜೂನ್ 24 ರಂದು ಒಂದು ಮಹತ್ವದ ವಿಜಯ ಪಡೆದಿದ್ದಾರೆ. ಯಾವುದೇ ಸೇವಾ ಭದ್ರತೆಯಿಲ್ಲದೇ, ಸೌಲಭ್ಯಗಳಿಲ್ಲದೆ ಗುಲಾಮರಂತೆ ದುಡಿಯಬೇಕಾದ ಪರಿಸ್ಥಿತಿಯ ವಿರುದ್ಧ ಕಳೆದ ಒಂದು ದಶಕದ ಹೋರಾಟದ ಫಲವಾಗಿ 24.6.99 ರಂದು ಸರಕಾರ ಈ ನೌಕರರ ವೇತನ ಹೆಚ್ಚಳದ ಪ್ರಕಟಣೆ ಮಾಡಿದೆ. ಪಂಚಾಯತ್ ನೌಕರರ ಬದುಕಿನಲ್ಲಿ ಮೊದಲ ಬಾರಿಗೆ ಕನಿಷ್ಟ ವೇತನ ಎಂಬುದು ಈ ಮೂಲಕ ಜಾರಿಯಾಗಲಿದೆ. ಇದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ಒಂದು ದೊಡ್ಡ ಸಾಧನೆಯಂತಾಗಿದೆ ಎಂದು ಸಂಘದ ಮುಖಂಡರು ಹೇಳಿದ್ದಾರೆ. ಇದರಿಂದ ಅಸಂಘಟಿತ ದುಡಿಯುವ ವಿಭಾಗದ ಸಂಘಟನೆ ವ್ಯಾಪಕಗೊಂಡು, ಮುಂದಿನ ಮೆಟ್ಟಿಲು ತಲುಪಲು ಕಾನೂನು ನೆರವು ದೊರಕುವುದೂ ಸಾಧ್ಯವಾಗುತ್ತದೆ ಎಂದೂ ಅವರು ಹೇಳುತ್ತಾರೆ. ಇದುವರೆಗೆ ಈ ನೌಕರರಿಗೆ ಕಾನೂನು ನೆರವೂ ಸಿಗುತ್ತಿರಲಿಲ್ಲ.

ಈ ಪ್ರಕಟಣೆಯ ಮೊದಲು ಕ್ಲರ್ಕ್, ಅಕೌಂಟೆಂಟ್, ಬೆರಳಚ್ಚುಗಾರ, ಬಿಲ್ ಕಲೆಕ್ಟರ್ ಇತ್ಯಾದಿಯವರಿಗೆ 900 ರೂ. ಗರಿಷ್ಟ ಸಂಬಳ. ಅದೀಗ ಕನಿಷ್ಟ 1000 ರೂ. ಗರಿಷ್ಟ 1200 ರೂ. ಎಂದು ನಿಗದಿಯಾಗಿದೆ. ಅದೇ ರೀತಿ ಇದುವರೆಗೆ 600 ರೂ. ಗರಿಷ್ಟ ಮಿತಿಯಿದ್ದ ವಾಲ್ವ್‌ಮನ್, ಪಂಪ್ ಆಪರೇಟರ್, ಮೆಕಾನಿಕ್ ಇತ್ಯಾದಿಗಳಿಗೆ ಇನ್ನು ಮುಂದೆ 800 ರಿಂದ 1000 ರೂ. ದೊರೆತರೆ, ಗರಿಷ್ಟ 500 ರೂ ಪಡೆಯುತ್ತಿರುವ ಜವಾನ, ಅಟೆಂಡರ್, ಕಸಗುಡಿಸುವವರು ಇತ್ಯಾದಿ ಇನ್ನು ಮುಂದೆ 700-800 ರೂ. ಪಡೆಯುತ್ತಾರೆ. ಈಗಾಗಲೇ ಇದಕ್ಕಿಂತ ಹೆಚ್ಚು ಸಂಬಳ ಪಡೆಯುವವರ ಸಂಬಳವನ್ನು ರಕ್ಷಿಸಲಾಗುವುದು ಎಂದೂ ಸರಕಾರೀ ಆದೇಶ ಸ್ಪಷ್ಟಪಡಿಸಿದೆ. ಇಂತವರ ಸಂಖ್ಯೆ ಸುಮಾರು 3 % ಇದೆ ಎಂದು ಹೇಳಲಾಗಿದೆ.

ಕೃತಜ್ಞತಾ ಸಂಗತಿಯೆಂದರೆ ಇದುವರೆಗೆ ಇದ್ದ ಗರಿಷ್ಟ ಮಿತಿಯ ಸಂಬಳ ಕೂಡಾ ದೊರಕುತ್ತಿದ್ದುದು ಕೇವಲ 1/3 ರಷ್ಟು ಗ್ರಾಮಪಂಚಾಯತ್ ನೌಕರರಿಗೆ ಮಾತ್ರ. ಸುಮಾರು 62% ರಷ್ಟು ನೌಕರರು 100, 200, 300 ರೂ. ಗಳಲ್ಲೇ ಮುಪ್ಪಾಗುತ್ತಿದ್ದರು. ಈ ಹಿನ್ನೆಲೆಯಲ್ಲಿ ಈ ಸರಕಾರೀ ಪ್ರಕಟಣೆ ಗ್ರಾಮ ಪಂಚಾಯತ್ ನೌಕರರ ಸಂಘದ ಹೋರಾಟಗಳು ಹಾಗೂ ಅದರ ಮುಖಂಡರ ಸತತ ಪ್ರಯತ್ನದಿಂದ ಕೊನೆಗೂ ಹೊರಬಿದ್ದಿರುವುದು ಒಂದು ಗಮನಾರ್ಹ ಸಾಧನೆಯೇ ಆಗಿದೆ. ಇದರಲ್ಲಿ ನೆರವು, ಸಹಕಾರ, ಬೆಂಬಲ ನೀಡಿದ ರಾಜ್ಯದ ಹಿರಿಯ ಕಾರ್ಮಿಕ ಮುಖಂಡ ಹಾಗೂ ಸಿಪಿಐ(ಎಂ) ಕಾರ್ಯದರ್ಶಿ ಎಸ್.ಸೂರ್ಯ ನಾರಾಯಣ ರಾವ್ ಹಾಗೂ ಸಿಪಿಐ(ಎಂ) ಶಾಸಕ ಶ್ರೀರಾಮರೆಡ್ಡಿಯವರಿಗೆ ಸಂಘದ ಮುಖಂಡರು ಕೃತಜ್ಞತೆ ವ್ಯಕ್ತಪಡಿಸಿದ್ದಾರೆ.

1985 ರಲ್ಲಿ ಜಿಲ್ಲಾ ಪರಿಷತ್ ವ್ಯವಸ್ಥೆ ಜಾರಿಗೆ ಬಂತು. ಆಗ ಗುಲ್ಬರ್ಗ ಜಿಲ್ಲಾ ಪರಿಷತ್‌ಗೆ ಆರಿಸಿಬಂದ ಸಿಪಿಐ(ಎಂ) ಮುಖಂಡ ಮಾರುತಿ ಮಾನಪಡೆಯವರು ನಡೆಸಿದ ಸಂಘರ್ಷ ಮತ್ತು ಹೋರಾಟದ ಫಲವಾಗಿ ಗುಲ್ಬರ್ಗ ಜಿಲ್ಲೆಯಲ್ಲಿ ಎಲ್ಲಾ ಪಂಚಾಯತ್ ನೌಕರರಿಗೆ ಸರ್ವಿಸ್ ಬುಕ್ ಕೊಡಿಸಲು, ಸಂಬಳ ಹೆಚ್ಚಿಸಲು ಸಾಧ್ಯವಾಯಿತು. ಈ ಹಿನ್ನೆಲೆಯಲ್ಲಿ ಆರಂಭವಾದ ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ನೇತೃತ್ವದಲ್ಲಿ 1989 ರಿಂದೀಚೆಗೆ ಸತತವಾಗಿ ನಡೆದ ರಾಜ್ಯವ್ಯಾಪಿ ಹೋರಾಟಗಳ ಗಮನಾರ್ಹ ಸಾಧನೆಯಿದು.

ಮಾರ್ಚ್ 30, 1989 ರಂದು ಮೊದಲ ಬಾರಿ 5000 ನೌಕರರು ವಿಧಾನಸೌಧದ ಮುಂದೆ ಮತಪ್ರದರ್ಶನ ನಡೆಸಿ ಗ್ರಾಮ ಪಂಚಾಯತ್ ಮಂತ್ರಿಗಳಿಂದ ಕನಿಷ್ಟ500 ರೂ. ವೇತನ ಪಡೆಯುವ ಭರವಸೆ ಪಡೆದರು. ಆದರೆ ಆ ಸರಕಾರ ಉಳಿಯಲಿಲ್ಲ, ಭರವಸೆ ಈಡೇರಲಿಲ್ಲ. ನಂತರ ಕಾಂಗ್ರೆಸ್(ಐ) ಸರಕಾರ ಪಂಚಾಯತ್ ನೌಕರರ ವಿರುದ್ಧವಾದ ನಿಲುವು ತಳೆಯಿತು. ಮತ್ತೆ ಮಾರ್ಚ್ 20, 1990 ರಂದು ಇನ್ನೊಂದು ವಿಧಾನಸೌಧ ಚಲೋ ನಡೆಯಿತು. ನೌಕರ ವಿರೋಧಿ ನಿಲುವನ್ನು ಹಿಂತೆಗೆದುಕೊಳ್ಳಲಾಯಿತು. ಆದರೆ ವೇತನ ಹೆಚ್ಚಳದ ಭರವಸೆ ಈಡೇರಲಿಲ್ಲ. ಸಂಘ ಈ ಪ್ರಶ್ನೆಯನ್ನೆತ್ತಿಕೊಂಡು ಹೋರಾಟ ಮುಂದುವರಿಸಿತು. 1993 ರ ನವೆಂಬರ್‌ನಲ್ಲಿ ಮತ್ತೊಮ್ಮೆ ಪಂಚಾಯತ್ ನೌಕರರು ವಿಧಾನಸೌಧ ಚಲೋ ನಡೆಸಿದರು. ಆಮರಣ ಉಪವಾಸ ಸತ್ಯಾಗ್ರಹದ ನೋಟಿಸ್ ಸಂಘದಿಂದ ಹೋದಾಗ ಆಗಿನ ಪಂಚಾಯತ್ ರಾಜ್ ಮಂತ್ರಿ ಎಂ.ವೈ.ಘೋರ್ಪಡೆ ರಾಜ್ಯಾದ್ಯಂತ ಏಕರೂಪದ ವೇತನ ಶ್ರೇಣಿ ಆಗಬೇಕೆಂಬ ಸಂಘದ ಬೇಡಿಕೆಯನ್ನು ಒಪ್ಪಿಕೊಂಡು ಸರಕಾರ 'ಮಾದರಿ' ಗರಿಷ್ಟ ಮಿತಿಯಾಗಿ ಮೇಲೆ ಹೇಳಿದ 900, 600, 500 ರೂ.ಗಳನ್ನು ಪ್ರಕಟಿಸಿತು. ಅದಾಗಲೇ, ಗುಲ್ಬರ್ಗ, ಬಿಜಾಪುರ, ಬೀದರ್ ಜಿಲ್ಲೆಗಳ ಜಿಲ್ಲಾ ಪರಿಷತ್ತುಗಳು 960, 750, 500 ರೂ. ಕನಿಷ್ಟ ವೇತನವೆಂದು ಪ್ರಕಟಿಸಿದ್ದರು. ಆದರೂ ರಾಜ್ಯಮಟ್ಟದಲ್ಲಿ ಒಂದು ವೇತನ ಶ್ರೇಣಿಬಂದದ್ದು ಒಂದು ಮುನ್ನಡೆಯಾಗಿತ್ತು. ಆದರೆ ಮೇಲೆ ಹೇಳಿದಂತೆ 2/3 ರಷ್ಟು ಗ್ರಾಮಪಂಚಾಯತ್ ನೌಕರರಿಗೆ ಇದು ಕೇವಲ 'ಮಾದರಿ' ವೇತನವಾಗಿಯೇ ಉಳಿಯಿತು. ನಿಜ ವೇತನವಾಗಲಿಲ್ಲ.

ಭರವಸೆ-ಹೋರಾಟ ಮತ್ತು ಕೇರಳದಲ್ಲಿನ ವ್ಯವಸ್ಥೆಗಳ ಮಾಹಿತಿ ಪಡೆದ ಸರಕಾರ ಈ ನೌಕರರು ಅರೆಕಾಲಿಕ ನೌಕರರೆಂಬ ಹುಚ್ಚು ತಿಳುವಳಿಕೆಯನ್ನು ಬಿಟ್ಟು ಈ ನೌಕರಿಗೂ ಸೇವಾ ನಿಯಮ ರಚಿಸಬೇಕು, ಸಂಬಳ ಹೆಚ್ಚಿಸಬೇಕು ಎಂಬ ಒಟ್ಟಭಿಪ್ರಾಯಕ್ಕೆ ಬರುವಂತಾಯಿತು. ಒಂದು ಕನಿಷ್ಟ ವೇತನಕ್ಕಾಗಿ ಹೋರಾಟ ಮುಂದುವರಿಯಿತು. 1996 ರಲ್ಲಿ ಮತ್ತೆ 6000 ನೌಕರರು ಬೆಂಗಳೂರಿಗೆ ಬಂದು ಮತಪ್ರದರ್ಶನ ನಡೆಸಿದರು. ಆಗ ಮೇ 1996ರೊಳಗೆ ಸಮಸ್ಯೆ ಬಗೆಹರಿಯುವ ಭರವಸೆ ನೀಡಿದ ಸರಕಾರ ಅದಕ್ಕೆ ಬದಲಾಗಿ ವಿಳಂಬ ನೀತಿ ಅನುಸರಿಸಿದಾಗ ರೊಚ್ಚಿಗೆದ್ದ ನೌಕರರು ಮತ್ತೆ ಫೆಬ್ರವರಿ ತಿಂಗಳಲ್ಲಿ ಪ್ರತಿಭಟನೆ ನಡೆಸಿದರು, ಮುಖ್ಯಮಂತ್ರಿ, ಹಣಕಾಸು ಮಂತ್ರಿ, ಪಂಚಾಯತ್ ರಾಜ್ ಮಂತ್ರಿಯ ನಿವಾಸಗಳೆದುರು ಧರಣಿ ಸತ್ಯಾಗ್ರಹ ನಡೆಸಿದರು. ಮೇ 1991 ರಲ್ಲಿ ಅನಿರ್ದಿಷ್ಟ ಕಾಲದ ಮುಷ್ಕರ ಹಾಗೂ ಆಮರಣ ಉಪವಾಸ ಸತ್ಯಾಗ್ರಹದ ಬೆದರಿಕೆ ನೌಕರರಿಂದ ಬಂದಾಗ ಮತ್ತೆ ಸರಕಾರದ ಭರವಸೆ. ಈ ವರ್ಷದ ಆರಂಭದಲ್ಲಿ ಜನವರಿಯಲ್ಲಿ ನಡೆದ ನೌಕರರ ಸಂಘದ 3ನೇ ಸಮ್ಮೇಳನದಲ್ಲಿ 6000 ಮಂದಿ ಭಾಗವಹಿಸಿ ರಾಜ್ಯಾದ್ಯಂತ ತೀವ್ರ ಹೋರಾಟ ನಡೆಸಲು ನಿರ್ಧರಿಸಿದರು. ಇದರ ಪ್ರಕಾರ ಫೆಬ್ರವರಿ 1 ರಿಂದ 6 ವರೆಗೆ ರಾಜ್ಯಾದ್ಯಂತ ನಡೆದ ಹೋರಾಟ ಒಂದು ಸಮರಶೀಲ ಹೋರಾಟವಾಗಿತ್ತು. ಬೆಂಗಳೂರಿನಲ್ಲಿ ನೌಕರರ ಸಂಘದ ಮುಖಂಡರ ಉಪವಾಸ ಸತ್ಯಾಗ್ರಹದೊಂದಿಗೆ ಆರಂಭವಾದ ಈ ಹೋರಾಟ 22 ಜಿಲ್ಲೆಗಳಲ್ಲಿ ಯಶಸ್ವಿಯಾಗಿ ನಡೆಯಿತು. ಸುಮಾರು 10000 ನೌಕರರು ಇದರಲ್ಲಿ ಭಾಗವಹಿಸಿದರು. ಇದರ ಫಲವಾಗಿ ಫೆಬ್ರವರಿ 12, 1999 ರಂದು ಪಂಚಾಯತ್ ರಾಜ್ಯ ಮಂತ್ರಿಗಳ ಕಛೇರಿಯಲ್ಲಿ ಚರ್ಚೆ ನಡೆಯಿತು. ಈಗ ಸರಕಾರೀ ಪ್ರಕಟಣೆಯಲ್ಲಿ ತಿಳಿಸಿರುವ ಕನಿಷ್ಟ, ಗರಿಷ್ಟ ವೇತನಮಾನವನ್ನು ಒಪ್ಪಲಾಯಿತು.

ಈ ಒಪ್ಪಿಗೆ ಸರಕಾರಿ ಪ್ರಕಟಣೆಯ ರೂಪ ಪಡೆಯಲು ಮತ್ತೆ ನಾಲ್ಕು ತಿಂಗಳು ಮುಖಂಡರು ಮತ್ತು ಕಾರ್ಯಕರ್ತರು ಹೋರಾಟ ಮಾಡಬೇಕಾಯಿತು. ಕೊನೆಗೂ ಜೂನ್ 11 ರಂದು ಹಣಕಾಸು ಮಂತ್ರಿ ಸಿದ್ಧರಾಮಯ್ಯನವರು ಪ್ರಕಟಣೆಗೆ ಸಹಿ ಹಾಕಿದರು. ಜೂನ್ 24 ರಂದು ಅದು ಪ್ರಕಟಣೆಗೊಂಡಿತು.

ಪುರಸಭಾ ನೌಕರರಿಗೆ ದೊರೆಯುವ ವೇತನ ಪಂಚಾಯತ್ ನೌಕರರಿಗೂ ದೊರೆಯಬೇಕು, ಸರಕಾರೀ ನೌಕರರಿಗಿರುವ ಸೇವಾ ಸೌಲಭ್ಯ, ನಿವೃತ್ತಿವೇತನ ಇವು ಈ ನೌಕರರ ಮೂಲಭೂತ ಬೇಡಿಕೆಗಳು. ಈ ಬೇಡಿಕೆಗಳ ಈಡೇರಿಕೆಗಾಗಿ ಮುಂದಿನ ಹಂತದ ಹೋರಾಟಕ್ಕೆ ಅಣಿಯಾಗಲು ಸಂಘಟನೆಯನ್ನು ಬಲಪಡಿಸಬೇಕಾಗಿದೆ ಎಂದು ಕರ್ನಾಟಕ ರಾಜ್ಯ ಗ್ರಾಮ ಪಂಚಾಯತ್ ನೌಕರರ ಸಂಘದ ಮುಖಂಡರು ನೌಕರರಿಗೆ ಕರೆ ನೀಡಿದ್ದಾರೆ.



ಮೂರನೇ ಸಮ್ಮೇಳನದಲ್ಲಿ ಪ್ರತಿನಿಧಿಗಳೊಂದಿಗೆ ಸೂರ್ಯನಾರಾಯಣ ರಾವ್

ಒಂದೇ ದಿನದಲ್ಲಿ 11186 ಸದಸ್ಯತ್ವ ನೊಂದಾವಣೆ

ಕೋಲಾರ ಜಿಲ್ಲೆಯಲ್ಲಿ ಡಿವೈಎಫ್‌ಐನ ಮಾದರಿ ಚಳುವಳಿ

ಜೂನ್ 15, ಕೋಲಾರ ಜಿಲ್ಲಾದ್ಯಂತ ಏಕದಿನ ಯುವಜನ ಸದಸ್ಯತ್ವ ನೊಂದಾವಣೆ ಚಳುವಳಿಯಲ್ಲಿ ಜಿಲ್ಲೆಯ ಹತ್ತು ತಾಲ್ಲೂಕುಗಳಲ್ಲಿ 162 ಹಳ್ಳಿಗಳಲ್ಲಿ 5 ನಗರ ಪ್ರದೇಶದ ವಾರ್ಡುಗಳಲ್ಲಿ 11186 ಸದಸ್ಯತ್ವ ನೊಂದಾವಣೆಯಾಯಿತು. ಕಾರ್ಯಕರ್ತರಲ್ಲಿ, ಮುಖಂಡರಲ್ಲಿ ಹೊಸ ಸ್ಫೂರ್ತಿ ತಂದ ಈ ಚಳುವಳಿಯನ್ನು ಮುಂದುವರೆಸಿ ಜೂನ್ 30 ರಂದು ದ್ವಿತೀಯ ಹಂತದ ಸದಸ್ಯತ್ವ ನೊಂದಾವಣೆ ನಡೆಸಲು, ಜಿಲ್ಲೆಯ ಸಮಗ್ರ ಅಭಿವೃದ್ಧಿ, ಉದ್ಯೋಗ ಅವಕಾಶಗಳ ಸೃಷ್ಟಿಗಾಗಿ ಚಳುವಳಿ ರೂಪಿಸಲು ಡಿವೈಎಫ್‌ಐ ಜಿಲ್ಲಾ ಸಮಿತಿ ನಿರ್ಧರಿಸಿದೆ. ಈ ಸ್ಫೂರ್ತಿಯನ್ನು ಬಿಂಬಿಸುವ ಒಂದು ವರದಿ.

1999 ಜೂನ್ 15 ಕೋಲಾರ ಜಿಲ್ಲಾ ಡಿವೈಎಫ್‌ಐ ಕಾರ್ಯಕರ್ತರಿಗೆ - ಮುಖಂಡರಿಗೆ ಬಿಡುವಿಲ್ಲದ ಕೆಲಸ. ಬಸ್ಸು ತಡವಾದಾಗ ಕಾದು ಕುಳಿತುಕೊಳ್ಳಲು ತಾಳ್ಮೆ ಇರಲಾರದಷ್ಟು ಮನಸ್ಸಿನ ತುಂಬ ಆಲೋಚನೆಗಳ ಒತ್ತಡ. ತುರ್ತಾಗಿ ಹಳ್ಳಿ ಸೇರುವ ತಮ್ಮ ಸ್ಕ್ವಾಡಿನೊಂದಿಗೆ (ತಂಡದೊಂದಿಗೆ) ನೀಡಿದ ಜವಾಬ್ದಾರಿಯನ್ನು ಸ್ಫೂರ್ತಿದಾಯಕವಾಗಿ ಈಡೇರಿಸುವ ತವಕ. ಒಂದು ರೂ. ಪಡೆದು 15 ರಿಂದ 40 ವಯೋಮಿತಿಯ ಯುವಕ-ಯುವತಿಯರನ್ನು ಡಿವೈಎಫ್‌ಐ ಸದಸ್ಯರಾಗಿ ಮಾಡುವ ಕಾತುರ. ಇದು ಕೋಲಾರ ಜಿಲ್ಲಾ ಡಿವೈಎಫ್‌ಐ ಸಂಘಟಕರಲ್ಲಿ ಕಂಡು ಬಂದ ದೃಶ್ಯಾವಳಿಗಳಾಗಿತ್ತು.

ಭಾರತ ಪ್ರಜಾಸತ್ತಾತ್ಮಕ ಯುವಜನ ಫೆಡರೇಷನ್(ಡಿವೈಎಫ್‌ಐ) ಕರ್ನಾಟಕ ರಾಜ್ಯ ಸಮಿತಿಯ ಕರೆಯ ಮೇರೆಗೆ 1998 ವಾರ್ಷಿಕ ಸದಸ್ಯತ್ವ ನೊಂದಾವಣೆಯ ಕರೆಯ ಮೇರೆಗೆ ಕೋಲಾರ ಜಿಲ್ಲಾ ಸಮಿತಿ ಸದಸ್ಯತ್ವ ನೊಂದಾವಣೆ ಕುರಿತು ಗಂಭೀರ ಚಿಂತನೆ ನಡೆಸಿ, 1999 ರ ಜೂನ್ 15 ರಂದು ಜಿಲ್ಲೆಯ ಎಲ್ಲಾ ತಾಲೂಕುಗಳಲ್ಲಿ 100 ಹಳ್ಳಿಗಳಲ್ಲಿ 'ಏಕದಿನ ಯುವಜನ ಸದಸ್ಯತ್ವ ನೊಂದಾವಣೆ ಚಳುವಳಿ'ಗೆ ಕರೆ ನೀಡಿತು. 100 ಹಳ್ಳಿಗಳ ಪಟ್ಟಿ ತಯಾರಿಸಿ ಪ್ರತಿ ಜಿಲ್ಲಾ ಸಮಿತಿ ಸದಸ್ಯರಿಗೆ ತಾಲ್ಲೂಕುವಾರು 5 ರಿಂದ 10 ಹಳ್ಳಿಗಳ ಹಂಚಿಕೆ ಮಾಡಲಾಯಿತು. [illegible] ನೇರ ತಾಲ್ಲೂಕು ಮುಖಂಡರೊಡನೆ ಸೇರಿ 100 ಹಳ್ಳಿಗಳಲ್ಲಿ ಕಾರ್ಯಕರ್ತರ ಸಭೆಗಳನ್ನು ನಡೆಸಿ 100 ಕ್ಕೂ ಹೆಚ್ಚಿನ ಸ್ಕ್ವಾಡುಗಳನ್ನು ರಚಿಸಿ ಸದಸ್ಯತ್ವ ನೊಂದಾವಣೆಯ ತಯಾರಿಗಳನ್ನು ನಡೆಸಿದರು.

ಜೂನ್ 15 ರಂದು ಜಿಲ್ಲಾ, ತಾಲ್ಲೂಕು ಹಾಗೂ ಸ್ಕ್ವಾಡು ಮುಖಂಡರು ಸೇರಿ ಲೀಲಾಜಾಲವಾಗಿ 162 ಹಳ್ಳಿ ಹಾಗೂ 5 ನಗರ ಪ್ರದೇಶದ ವಾರ್ಡುಗಳು ಸೇರಿದಂತೆ 11186 ಯುವಜನ ಸದಸ್ಯತ್ವವನ್ನು ನೊಂದಾಯಿಸಲಾಯಿತು. ಈ ಚಳುವಳಿಯು ಜಿಲ್ಲೆಯ ಡಿವೈಎಫ್‌ಐ ಇತಿಹಾಸದಲ್ಲೇ ಹೊಸ ಮೈಲುಗಲ್ಲಾಗಿ ದಾಖಲಾಗಿ ಎಲ್ಲಾ ಹಂತದ ಕಾರ್ಯಕರ್ತ ಮುಖಂಡರಲ್ಲಿ ಹೊಸ ಸ್ಫೂರ್ತಿಯನ್ನು ನೀಡಿದೆ. 5 ಜನರ ಸ್ಕ್ವಾಡುಗಳು ರಚಿತವಾದ ಬಹುತೇಕ ಹಳ್ಳಿಗಳಲ್ಲಿ ಭಾರೀ ಸ್ಫೂರ್ತಿದಾಯಕವಾಗಿ ಸದಸ್ಯತ್ವ ನೊಂದಾವಣೆಯಾಗಿದೆ. ಹಲವಾರು ಕಡೆ ಗ್ರಾಮ ಪಂಚಾಯತ್ ಅಧ್ಯಕ್ಷರು, ಸದಸ್ಯರು, ಗ್ರಾಮದ ಗಣ್ಯರು ಸದಸ್ಯತ್ವ ನೊಂದಾವಣೆಯನ್ನು ಉದ್ಘಾಟಿಸಿರುತ್ತಾರೆ. ಕೆಲಕಡೆಗಳಲ್ಲಿ ಎಸ್.ಎಫ್.ಐ, ಡಿ.ಎಸ್.ಎಸ್., ಸಾಕ್ಷರತಾ, ರೈತ ಸಂಘದ ಗೆಳೆಯರು ಬೆಂಬಲ ನೀಡಿ ಸದಸ್ಯತ್ವ ನೊಂದಾವಣೆ ಮಾಡಿರುತ್ತಾರೆ. ಸಣ್ಣ ಸಮಾರಂಭದಿಂದ ಹಿಡಿದು ಬೃಹತ್ ಮಟ್ಟದ ಸಮಾರಂಭಗಳ ತನಕ ಹಬ್ಬದ ವಾತಾವರಣದಲ್ಲಿ ಸದಸ್ಯತ್ವ ನಡೆಸಿರುವುದು ಚಳುವಳಿಗೆ ಪುಷ್ಠಿಯನ್ನು ನೀಡಿದೆ.

ಈ ಚಳುವಳಿಯ ಬೆನ್ನ ಹಿಂದೆಯೇ ಜೂನ್ 19, 20 ರಂದು ನಂದಿ ಗಿರಿಧಾಮದಲ್ಲಿ ಕರೆಯಲಾದ ಡಿ.ವೈ.ಎಫ್.ಐ ಜಿಲ್ಲಾ ಸಮಿತಿ ಸದಸ್ಯತ್ವ ನೊಂದಾವಣೆ ಚಳುವಳಿಯ ಅನುಭವದ ಸ್ಫೂರ್ತಿಯೊಂದಿಗೆ ಜಿಲ್ಲಾ ಸಮಿತಿ ತೀರ್ಮಾನವನ್ನು ಜಾರಿಗೊಳಿಸಿದ್ದೇವೆ ಎಂಬ ಉತ್ಸಾಹದೊಂದಿಗೆ ಪ್ರಾರಂಭವಾದ ಜಿಲ್ಲಾ ಸಮಿತಿ ಇದೆಲ್ಲವನ್ನು ವಿಮರ್ಶೆ ಮಾಡಿತು.

ಸದಸ್ಯತ್ವ ಚಳುವಳಿ ನೊಂದಾವಣೆಯ ಜೊತೆಯಲ್ಲಿ ಸಿದ್ಧಗೊಳಿಸಲಾಗುತ್ತಿರುವ ಕಾರ್ಯಕರ್ತರ ಸಂಘಟನಾ ಜಾಲವನ್ನು ಗಟ್ಟಿಗೊಳಿಸಲು ಜಿಲ್ಲಾ ಮಟ್ಟದ ಬೇಡಿಕೆಗಳಾದ ಜಿಲ್ಲೆಯ ಜೀವನಾಡಿಗಳಾದ ಕೆರೆಗಳಲ್ಲಿ ಹೂಳು ತೆಗೆಯಲು, ರೈಲು, ರಸ್ತೆ ಮಾರ್ಗಗಳನ್ನು ಅಭಿವೃದ್ಧಿ ಪಡಿಸಲು, ಕಾವೇರಿ ಭದ್ರ ಮೇಲ್ದಂಡೆ ನೀರನ್ನು ಕುಡಿಯಲು ಮತ್ತು ವ್ಯವಸಾಯಕ್ಕೆ ಸರ್ಕಾರ ತರುವಂತೆ ಯೋಜನೆ ಕೈಗೊಳ್ಳಲು, ಕುಡಿಯುವ ನೀರಿನಲ್ಲಿರುವ ವಿಷಪೂರಿತ ಲವಣದ ಶುದ್ಧೀಕರಣಕ್ಕಾಗಿ, ಹೈನು, ಮಾವು, ರೇಷ್ಮೆ, ಹುಣಿಸೆ, ತರಕಾರಿಗಳಿಗೆ ಸಂಬಂಧಿಸಿ ಕೈಗಾರಿಕೆಗಳನ್ನು ಜಿಲ್ಲೆಯಲ್ಲಿ ತೆರೆಯಲು ಮುಂತಾದ ಬೇಡಿಕೆಗಳ ಆಧಾರದಲ್ಲಿ ಹೋರಾಟ ರೂಪಿಸಲು ತೀರ್ಮಾನಿಸಲಾಯಿತು. ಇದೇ ಸಂದರ್ಭದಲ್ಲಿ ಜಿಲ್ಲಾ ಸಮಿತಿ ಸದಸ್ಯರಿಗೆ ಪ್ರಸಕ್ತ ರಾಷ್ಟ್ರೀಯ ವಿದ್ಯಮಾನಗಳ ಕುರಿತು ಹಾಗೂ ಜಿಲ್ಲೆಯಲ್ಲಿ ಯುವಜನ ಚಳುವಳಿ ಕಟ್ಟಿ ಬೆಳೆಸಲು ಇರುವ ಅವಕಾಶಗಳು ಮತ್ತು ಸಮಸ್ಯೆಗಳ ಕುರಿತು ಬಾಗೇಪಲ್ಲಿ ಶಾಸಕರಾದ ಜಿ.ವಿ.ಶ್ರೀರಾಮರೆಡ್ಡಿ ಉಪನ್ಯಾಸ ನೀಡಿದರು. ಕೋಮುವಾದಿ ಶಕ್ತಿಗಳ ವಿರುದ್ಧ ಜಾತ್ಯಾತೀತ ಭಾರತದ ಉಳಿವಿಗಾಗಿ ಹೋರಾಡುತ್ತಾ, ಜಿಲ್ಲೆಯಲ್ಲಿ ಯಾವುದೇ ಬಲಿಷ್ಟ ಯುವಜನ ಚಳುವಳಿಗೆ ಇಲ್ಲದೆ, ನಿರ್ವಾತವಾಗಿರುವ ಯುವಜನ ಚಳುವಳಿಯ ಸ್ಥಾನವನ್ನು ಡಿವೈಎಫ್‌ಐ ತುಂಬಲು ಕರೆ ನೀಡಿದರು. ಡಿವೈಎಫ್‌ಐ ಕೇಂದ್ರೀಯ ಮುಖಂಡರಾದ ಎಸ್.ವೈ.ಗುರುಶಾಂತ್, ರಾಜ್ಯ ಕಾರ್ಯದರ್ಶಿ ಮಹಂತೇಶ್ ಸಭೆಯಲ್ಲಿ ಪಾಲ್ಗೊಂಡು ಸಂಘಟನೆ ಕಟ್ಟಿ ಬೆಳೆಸುವಲ್ಲಿ ಮಾರ್ಗದರ್ಶನ ನೀಡಿ ಏಕದಿನ ಸದಸ್ಯತ್ವ [illegible] ಚಳುವಳಿಯಲ್ಲಿ ಪಾಲ್ಗೊಂಡ ಕಾರ್ಯಕರ್ತರನ್ನು ಪ್ರಶಂಸಿಸಿದರು. ಅಲ್ಲದೇ ಈ ಚಳುವಳಿಯ ಸ್ಫೂರ್ತಿಯನ್ನು ಇತರೆ ಜಿಲ್ಲೆಗಳಿಗೊಯ್ಯುವುದಾಗಿ ತಿಳಿಸಿದರು.

ಜೂನ್ 30 ರಂದು ದ್ವಿತೀಯ ಹಂತದ ಸದಸ್ಯತ್ವ ಚಳುವಳಿಯನ್ನು ಮತ್ತೆ 130 ಹಳ್ಳಿಗಳಲ್ಲಿ ಸುಮಾರು 8000 ಸದಸ್ಯತ್ವ ಮೊದಲ ರೀತಿಯಲ್ಲಿಯೇ ನೊಂದಾಯಿಸಲು ತೀರ್ಮಾನಿಸಲಾಯಿತು.

ಈ ಸದಸ್ಯತ್ವ ಚಳುವಳಿಯ ಮುಖ್ಯ ಅಂಶಗಳು:

. ಈ 100 ಸದಸ್ಯತ್ವ ಆಗಬಹುದಾದ ಹಳ್ಳಿಗಳನ್ನು ಪಟ್ಟಿ ಮಾಡಿ ಜಿಲ್ಲಾ ಸಮಿತಿ ಸದಸ್ಯರಿಗೆ 5 ರಿಂದ 10 ಹಳ್ಳಿಯಲ್ಲಿ ಸದಸ್ಯತ್ವ ನೊಂದಾಯಿಸುವ ಜವಾಬ್ದಾರಿ ನೀಡಲಾಯಿತು.

. ಜಿಲ್ಲಾ ತಾಲ್ಲೂಕು ಮುಖಂಡರು ಹಳ್ಳಿಗಳಿಗೆ ಭೇಟಿ ನೀಡಿ ಕಾರ್ಯಕರ್ತರ ಸಭೆಗಳನ್ನು ನಡೆಸಿ ಸದಸ್ಯತ್ವ ನೊಂದಾವಣೆ ಹೇಗೆ, ಡಿವೈಎಫ್‌ಐ ಎಂದರೇನು, ಸಂಘಟನೆ ಹೇಗೆ, ಚಳುವಳಿ ಏನು ಎಂಬ ಎಲ್ಲ ಮಾಹಿತಿಯನ್ನು ಕಾರ್ಯಕರ್ತರಿಗೆ ನೀಡಿ ಪ್ರತಿಗ್ರಾಮದಲ್ಲಿ ಸದಸ್ಯತ್ವ ನೊಂದಾವಣೆಗಾಗಿ 5 ಜನರ ಸ್ಕ್ವಾಡುಗಳನ್ನು ರಚಿಸಲಾಯಿತು.

ಮಾರ್ಚ್ ಕೊನೆಯವಾರ ಬಂಗಾರಪೇಟೆಯಲ್ಲಿ ಯಶಸ್ವಿಯಾಗಿ ನಡೆದ ಡಿವೈಎಫ್‌ಐ ಕೋಲಾರ ಜಿಲ್ಲಾ ಸಮ್ಮೇಳನ ಹಾಗೂ ಏಪ್ರಿಲ್ 2ನೇ ವಾರ ಕೊಡಗು ವಿರಾಜಪೇಟೆಯಲ್ಲಿ ನಡೆದ 6ನೇ ರಾಜ್ಯ ಸಮ್ಮೇಳನದ ಸ್ಫೂರ್ತಿಯಿಂದ ಈ ಚಳುವಳಿ ಯಶಸ್ವಿಯಾಗಿ ನಡೆಯಿತೆನ್ನಬಹುದು.

ಮನೆ ನುಂಗಿದ ನೆರೆ.... ಮನಗೆದ್ದ ಜನ...

ಮೊಸಳೆ ಕಣ್ಣೀರು ಸುರಿಸಿದ ರಾಜಕಾರಣಿಗಳು

ಭಟ್ಕಳ ಇತ್ತೀಚಿನ ದಿನಗಳಲ್ಲಿ ಕೋಮು ಗಲಭೆಗಳಿಂದ ತತ್ತರಿಸುವ ಪ್ರದೇಶ ಈಗ ನೆರೆ ಹಾವಳಿಗೂ ತುತ್ತಾಗಿದೆ ಇಂತಹ ಪ್ರಕೃತಿ ವಿಕೋಪದ ಸಮಯದಲ್ಲಿ ಜನ ಹಿಂದೂ-ಮುಸ್ಲಿಂ ಎನ್ನದೆ ಒಬ್ಬರಿಗೊಬ್ಬರು ನೆರವಾಗಿದ್ದಾರೆ. ಒಬ್ಬರು ಇನ್ನೊಬ್ಬರ ಜೀವ ಉಳಿಸಿದ್ದಾರೆ, ಇದಲ್ಲವೇ ಮಾನವೀಯತೆ? ಸಿಐಟಿಯು ಕಾರ್ಯಕರ್ತರು ಜೀವದ ಹಂಗು ತೊರೆದು ಪರಿಹಾರ ಕಾರ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಜನಗಳಲ್ಲಿ ಕೋಮು ದ್ವೇಷ ಹರಡಿ ಕೊಲ್ಲುವವರಿಗಿಂತ ಕಷ್ಟಗಳಲ್ಲಿ ನೆರವಾಗಿ ಕಾಯುವವರು ಜನಮನ ಗೆಲ್ಲುತ್ತಾರಲ್ಲವೇ?

ಒಂದೆರಡು ದಿನಗಳ ಮೊದಲು ಭೂಮಿಯ ಮೇಲೆ ಭದ್ರವಾಗಿ ನಿಂತ ಮನೆ ನೀರಿನಲ್ಲಿ ತೇಲಿದಂತಿತ್ತು; ಒಂದೆರಡು ದಿನದ ಮೊದಲು ಉಬ್ಬು, ತಗ್ಗು, ರಸ್ತೆ ಗದ್ದೆ ತೋಟಗಳಿಂದ ಕೂಡಿದ ಭೂಮಿ ಈಗ ಕೆಂಪು ಸಾಗರವಾಗಿತ್ತು. ಹರಟೆ ಹೊಡೆಯುತ್ತಾ, ಚಿಮಣಿ ಬುಡ್ಡೆ ಎದುರು ಕುಳಿತು ಕಷ್ಟಸುಖ ಮಾತನಾಡಿಕೊಳ್ಳುತ್ತಾ, ಮೋಜಿಗಾಗಿ ಸಿನಿಮಾ ಹಾಡು ಗುನುಗಿಕೊಳ್ಳುತ್ತಾ ಇದ್ದ ಬಾಯಿಗಳು ಇಂದು ಅಸಹಾಯಕತೆಯಿಂದ ಆಕ್ರಂದನ ಮಾಡುತ್ತಿದ್ದವು. ಮನೆಯ ಅಟ್ಟ ಹತ್ತಿ ಕುಳಿತವರು ಕೆಲವರು. ಮನೆಯ ಕೋಳು ಹತ್ತಿ ಕುಳಿತವರು ಕೆಲವರು, ಮಗುವನ್ನು ವಯಸ್ಸಾದ ತಂದೆ-ತಾಯಿಗಳನ್ನು ಬೆನ್ನಿಗೆ ಕಟ್ಟಿ ಸುರಕ್ಷಿತ ಸ್ಥಳಕ್ಕೆ ತಲುಪಿಸಲು ಪ್ರಯತ್ನಿಸುವವರು ಕೆಲವರು....

ಹೌದು! ಇದು ಒಂದು ವಾರದ ಹಿಂದೆ ಉತ್ತರ ಕನ್ನಡದ ಕರಾವಳಿ ತಾಲೂಕುಗಳಲ್ಲಿ ಬಿದ್ದ ಬಾರೀ ಮಳೆಯಿಂದ ಬಂದ ನೆರೆ ಹಾವಳಿಯ ಸಂದರ್ಭದ ಅವಾಂತರಗಳು.

ಸುಮಾರು 25-30 ವರ್ಷಗಳ ಈಚೆಗೆ ಬೀಳದಂತ ಭೋರ್ಗರೆವ ಮಳೆ 2-3 ದಿನ ಒಂದು ಸೆಕೆಂಡ್ ಕೂಡ ಪುರಸೊತ್ತು ಕೊಡದೆ ಹೊಯ್ದು ಭಟ್ಕಳ, ಹೊನ್ನಾವರ, ಕುಮಟಾ ತಾಲೂಕುಗಳ ತಗ್ಗು ಪ್ರದೇಶಗಳನ್ನು ನೀರಿನಲ್ಲಿ ಮುಳುಗಿಸಿತು. ಉಕ್ಕಿಬಂದ ಈ ಸೆಗ್ಗಿಸಿಗೆ 6 ಜನ ಬಲಿಯಾದರು. ಮೂರು ದಿನ ಶಾಲೆಯಲ್ಲಿ ಸರ್ಕಾರ ನಡೆಸಿದ ಗಂಜೀ ಕೇಂದ್ರದಲ್ಲಿ (ನಿರಾಶ್ರಿತರ ತಾಣ) ಆಶ್ರಯ ಪಡೆದರು. ನೀರು ಇಳಿದಾಗ ಅನೇಕರ ಮನೆಯ ಗೋಡೆಗಳು ಉದುರಿ ಬಿದ್ದಿದ್ದವು. ಕೊಟ್ಟಿಗೆಗಳು ನಿರ್ನಾಮವಾಗಿದ್ದವು. ನೆರೆ ಹಾವಳಿಯ ನಂತರ ಹೊನ್ನಾವರ ತಾಲೂಕೊಂದರಲ್ಲಿಯೇ ಆದ ಹಾನಿಯ ಬಗ್ಗೆ ಸರ್ಕಾರ ನಡೆಸಿದ ಅಂದಾಜಿನ ಪ್ರಕಾರ ಅದರ ಮೊತ್ತ ಸುಮಾರು 70.15 ಲಕ್ಷ ರೂ (ಕನಿಷ್ಠ ಕೋಟಿ ರೂಪಾಯಿಗಳನ್ನು ಮೀರಿದೆ.)

ಹಿಂದೂ ಯಾರು? ಮುಸ್ಲಿಂ ಯಾರು?

ಭಟ್ಕಳದಂತ ಪ್ರದೇಶದಲ್ಲಿ ನೀರು ನುಗ್ಗಿದಾಗ ಹಿಂದೂ-ಮುಸ್ಲಿಂ ಎನ್ನುವ ಯಾವ ಭೇದ ಇಲ್ಲದೆಯೆ ಪರಸ್ಪರ ಸಹಕರಿಸಿದರು. ತೀರಾ ಸೂಕ್ಷ್ಮ ಪ್ರದೇಶ ಎಂದು ಗ್ರಹಿಸಲಾದ ಮತ್ತು ಸದಾ ಹಿಂದೂ-ಮುಸ್ಲಿಂರು ದ್ವೇಷಿಗಳು ಎಂದು ಪ್ರಚಾರ ಮಾಡುವ ಮೂಲಕ, ಇಲ್ಲಿ ನಡೆಯುವ ಸಾಮಾನ್ಯ ಘಟನೆಯನ್ನೂ ಕೋಮುಗಲಭೆ ಎಂದು ಬಣ್ಣಿಸುವ ಭಟ್ಕಳದಲ್ಲಿ ರಿಕ್ಷಾ ಓಡಿಸುವ, ಗೂಡಂಗಡಿ ನಡೆಸುವ ಇತ್ಯಾದಿ ಯುವಕರನೇಕರು ಇಂತಹ ಸೌಹಾರ್ದತೆ ಮೆರೆದರು. ಯಾರೂ ಯಾರನ್ನು ರಕ್ಷಿಸುವಾಗ ಸುರಕ್ಷಿತ ಸ್ಥಳಕ್ಕೆ ಒಯ್ಯುವಾಗ ನೀನು ಹಿಂದುವೋ ನೀನು ಮುಸ್ಲೀಮನೋ, ನೀನು ಕ್ರಿಶ್ಚಿಯನ್‌ನೋ ಎಂದು ಕೇಳಲಿಲ್ಲ. ಸಾಧ್ಯ ಆದ ಎಲ್ಲರನ್ನೂ ರಕ್ಷಿಸಲು ಮುಂದಾದರು. ಇದು ಮಾನವೀಯತೆ; ಸಾಮಾನ್ಯವಾಗಿ ನಮ್ಮ ವೃತ್ತಿ ರಾಜಕಾರಣಿಗಳಿಗೆ, ಮೂಲಭೂತವಾದಿಗಳಿಗೆ ಇದು ಅರ್ಥವಾಗುವುದಿಲ್ಲ ಮತ್ತು ಈ ತರದ ಮನುಷ್ಯತ್ವದ ಸಂಬಂಧಗಳನ್ನು ಬೆಳೆಸಲು ಪ್ರಯತ್ನಿಸುವುದಿಲ್ಲ. ಬದಲಾಗಿ ಮರೆಮಾಚಲು ನೋಡುತ್ತಾರೆ.

ಕಾರ್ಮಿಕರೂ ಪಾಲ್ಗೊಂಡರು

ಹೊನ್ನಾವರದ ಮಾವಿನ ಕುರ್ವೆ ಕೂಡ ನೀರಿನಲ್ಲಿ ಮುಳುಗಿದ ಒಂದು ಚಿಕ್ಕ ಗ್ರಾಮ. ಶರಾವತಿ ದಂಡೆಯ ಮೇಲಿರುವ ಈ ಗ್ರಾಮ (ಅಥವ ಶರಾವತಿ ನದಿಯ ಒಳಗೇ ಇರುವ ಈ ಗ್ರಾಮ) ತಲೆ ಎತ್ತಿ ನಿಂತ ತೆಂಗು, ಹಂಚಿನ ಕಾರ್ಖಾನೆಯ ಚಿಮಣಿ, ಕೊಂಕಣ ರೈಲಿನ ಸೇತುವೆಗಳ ಮಧ್ಯೆ ಸೌಂದರ್ಯ ಪ್ರಜ್ಞೆ ಇರುವ ಯಾರನ್ನೂ ಆಕರ್ಷಿಸುತ್ತದೆ. ಆದರೆ ಉಕ್ಕಿಬರುವ ಕೆನ್ನೀರಿಗೆಲ್ಲಿ ಈ ಸೌಂದರ್ಯ ಪ್ರಜ್ಞೆ, ತೀರ ಪ್ರದೇಶದ ಮನೆಗೆ ನೀರು ನುಗ್ಗಿದಾಗ ಯಾವ ಅಪಾಯಕ್ಕೂ ಅವಕಾಶ ಕೊಡದೆ ಅಲ್ಲಿಯ ಹಂಚು ಕಾರ್ಖಾನೆಯ ಕಾರ್ಮಿಕರು (ಸಿಐಟಿಯು ಸಂಘಕ್ಕೆ ಸೇರಿದವರು) ಊರವರ ನೆರವಿಗೆ ನಿಂತರು. ಸುಮಾರು 30-40 ಕಾರ್ಮಿಕರು ಜನರನ್ನು ರಕ್ಷಿಸುವ ಕಾರ್ಯದಲ್ಲಿ ತೊಡಗಿದವರು. ಕೇವಲ ನಮ್ಮ ವೇತನಕ್ಕಾಗಿ ಇನ್ನಿತರ ಸೌಕರ್ಯಕ್ಕಾಗಿ ಮಾತ್ರ ನಾವು ಹೋರಾಡುವವರಲ್ಲ, ಊರವರ ಪ್ರಾಣ ಕಾಪಾಡಲು ಕೂಡ ನಾವು ಹೋರಾಡುತ್ತೇವೆ ಎಂದು ತೋರಿಸಿಕೊಟ್ಟರು.

ನೀರು ಏರುತ್ತಿದ್ದಾಗ ಮಂಜುನಾಥ ಬಿ. ಗೌಡ ಇವರು ಸ್ವತ: ತಮ್ಮ ದೋಣಿಯೊಂದಿಗೆ ನೀರಿಗೆ ಇಳಿದರು. ಸಾಮಾನು ಸರಂಜಾಮುಗಳನ್ನು ಸುರಕ್ಷಿತ ಸ್ಥಳಕ್ಕೆ ತಲುಪಿಸಿದರು. ಈ ಕಾರ್ಯದಲ್ಲಿ ರಾಮಾಶಿವಯ್ಯ ಗೌಡ, ಕೃಷ್ಣ ಪೇರಾಗೌಡ, ಮಂಜುನಾಥ ವಿಶ್ವೇಶ್ವರ.... ಹೀಗೆ ಹತ್ತಾರು ಹೆಸರುಗಳನ್ನು ಬರೆಯ ಬಹುದು. ಇವರೆಲ್ಲಾ ಸಿಐಟಿಯು ಸಂಘಕ್ಕೆ ಸೇರಿದ ಕಾರ್ಯಕರ್ತರ (ಶಾರದಾ ಟೈಲ್ಸ್ ಪ್ಯಾಕ್ಟರಿಯ ಕಾರ್ಮಿಕರು) ತಂಡ ಎನ್ನುವುದು ಮುಖ್ಯ. ಹೊಸದಾಗಿ ಪ್ರಾರಂಭವಾದ ಗಂಜೀ ಕೇಂದ್ರಕ್ಕೆ ಸಿಐಟಿಯುವಿನ ಜಿಲ್ಲಾ ಮುಖಂಡರಾಗಿರುವ ತಿಲಕಗೌಡರವರು ತಾವು ಅಧ್ಯಕ್ಷರಾಗಿರುವ ಸೊಸೈಟಿಯಿಂದ ತಕ್ಷಣ ಅಕ್ಕಿಯ ವ್ಯವಸ್ಥೆ ಮಾಡಿ ಊಟದ ಏರ್ಪಾಡಿಗೆ ಅನುಕೂಲ ಮಾಡಿಕೊಟ್ಟರು.

ಏನಾಗಬೇಕು?

ಈ ಮೂರುದಿನದ ಮಳೆಯಲ್ಲಿ ಮನೆಕಳೆದುಕೊಂಡ ಬಹುತೇಕರು ಕಲ್ಲಿನ ಅಡಿಪಾಯಮಾಡಿ ಮನೆಕಟ್ಟಿಕೊಳ್ಳಲು ಅಸಮರ್ಥರಾದ ತೀರಾ ಬಡವರು. ಊರ ಹಳ್ಳದ, ಹೊಳೆಯ ಬದಿಯಲ್ಲಿ ಮನೆ ಮಾಡಿಕೊಂಡಿರುವ ಕೆಳ ಜಾತಿಯವರು, ದುರ್ಬಲರು. ಮಳೆಗಾಲದಲ್ಲಿ ಸದಾ ಭಯದ ನೆರಳಿನಲ್ಲಿಯೇ ಬದುಕುವ ಇವರ ಸ್ಥಿತಿಯ ಬಗ್ಗೆ ಸರ್ಕಾರದ ಆಳುವ ಪ್ರತಿನಿಧಿಗಳು ಹೆಚ್ಚು ತಲೆಕೆಡಿಸಿಕೊಂಡಂತಿಲ್ಲ. ಮರುದಿನ ನೆರೆಹಾವಳಿ ಸಮೀಕ್ಷೆ ಮಾಡಿ ಮುಂದಿನ ಮಳೆಗಾಲದ ಒಳಗೆ ಅಲ್ಪ ಸ್ವಲ್ಪ ಪರಿಹಾರ ಮುಟ್ಟಿಸುವಲ್ಲಿ (ಆದರೆ ಹೋದ ವರ್ಷ ನೆರೆ ಬಂದಾಗ ಆದ ಅನಾಹುತಗಳ ಪರಿಹಾರವನ್ನು ಇನ್ನೂ ಮಂಜೂರು ಮಾಡಿಲ್ಲ ಎಂದು ಕೆಲವು ಪತ್ರಿಕೆ ವರದಿ ಮಾಡಿದೆ.) ಮಾತ್ರ ಗಮನ ಹರಿಸುತ್ತಾರೆಯೇ ಹೊರತು ಅದಕ್ಕೊಂದು ಶಾಶ್ವತ ಪರಿಹಾರ ಕಂಡುಕೊಳ್ಳುವುದು ತೀರಾ ಅವಶ್ಯ ಎಂದು ಅವರಿಗೆ ಅನ್ನಿಸಿದಂತಿಲ್ಲ.

ನೆರೆಕಳೆದು 2-3 ದಿನಗಳ ನಂತರ (ಇಳಿದದ್ದು ಖಾತ್ರಿ ಮಾಡಿಕೊಂಡು) ನಮ್ಮ ಜಿಲ್ಲೆಯ ಅನೇಕ ರಾಜಕಾರಣಿಗಳು, ಪ್ರತಿನಿಧಿಗಳು ಸ್ಥಳಕ್ಕೆ ಭೇಟಿ ಕೊಟ್ಟರು. ಕಾಂಗ್ರೆಸ್ಸಿನವರು ಬಿಜೆಪಿಯವರು, ದಳದವರು-ಹೀಗೆ ಎಲ್ಲರೂ ಬಂದು ಸಾಂತ್ವನ ಹೇಳುವವರೆ. ಕೆಲವರು ಪುಡಿಗಾಸನ್ನೂ ಕೊಟ್ಟು ಹೋದರು. ಪತ್ರಿಕೆಯ ತುಂಬೆಲ್ಲಾ ಅದೇ ಸುದ್ದಿ, ಇವರದೇ ಹೇಳಿಕೆ. ಆದರೆ ನೆರೆ ಏರುತ್ತಿದ್ದಾಗ ಜೀವದ ಹಂಗುತೊರೆದು ಜನರನ್ನು ಸುರಕ್ಷಿತ ಸ್ಥಳಕ್ಕೆ ಸಾಗಿಸಿದವರ, ಅನೇಕರ ಪ್ರಾಣ ಉಳಿಸಿದವರ ಸುದ್ದಿಗಳೆಲ್ಲೂ ಬೆಳಕಿಗೆ ಬರಲೇ ಇಲ್ಲ. ನಮ್ಮ ಬಹುತೇಕ ಪತ್ರಿಕೆಗಳೂ ಈ ಬಗ್ಗೆ ವಿವರ ಪಡೆದು ಪ್ರಕಟಿಸಿದಂತಿಲ್ಲ.

ಹಾಗೆ ನೋಡಿದರೆ ಇಂತಹ ಸಾಹಸವನ್ನು ಮಾನವೀಯ ಘಟನೆಗಳನ್ನು ಗುರುತಿಸುವ ಮೂಲಕ ಪ್ರೋತ್ಸಾಹಿಸುವ ಕೆಲಸ ಹೆಚ್ಚೆಚ್ಚು ನಡೆಯಬೇಕಾಗಿದೆ.

ಧರ್ಮ ಭೇದ ಮರೆತು ಪ್ರಾಣ ರಕ್ಷಿಸಿದ ಭಟ್ಕಳದ ಘಟನೆ ಮತ್ತು ಮಾವಿನ ಕುರ್ವೆಯಲ್ಲಿ ರಕ್ಷಣೆ ಕಾರ್ಯಕ್ಕಿಳಿದ ಸಿಐಟಿಯುವಿನ ಕಾರ್ಯ- ಇವೆರಡು ಚಿಕ್ಕ ಉದಾಹರಣೆಗಳು ಮಾತ್ರ. ಇಂಥ ಕಾರ್ಯಗಳು ಜಿಲ್ಲೆಯ ಬೇರೆಲ್ಲೂ ನಡೆದೇ ಇಲ್ಲ ಎಂದೇನೂ ನಾನು ಹೇಳುತ್ತಿಲ್ಲ. ಹತ್ತಾರು ಇಂತಹ ಘಟನೆಗಳನ್ನು ನಾವು ಗುರುತಿಸಬಹುದು, ಮತ್ತು ಗುರುತಿಸಬೇಕು. ಈ ಬಗ್ಗೆ ನಾನು ಪ್ರಸ್ತಾಪಿಸಿದ್ದು ಎರಡು ಅಂಶವನ್ನು ಹೇಳಲು 1. ಪ್ರತಿ ನೆರೆ ಪ್ರದೇಶದಲ್ಲಿ ಒಂದು ಯುವಕರ ದಂಡು ಇದ್ದರೆ ತಕ್ಷಣ ಕಾರ್ಯ ಪ್ರವೃತ್ತರಾಗಲು ದೋಣಿಗಳಿದ್ದರೆ, ಸರ್ಕಾರಿ ಆಡಳಿತ ಯಂತ್ರ ಇಂತವರನ್ನು ವಿಶ್ವಾಸಕ್ಕೆ ತೆಗೆದುಕೊಂಡರೆ ತಕ್ಷಣ ಆಗುವ ಅನೇಕ ತೊಂದರೆಗಳನ್ನು ತಪ್ಪಿಸಬಹುದು. 2. ಹಾಗಾಗಿ ನಮ್ಮ ರಾಜಕಾರಣಿಗಳು, ಜನ ಪ್ರತಿನಿಧಿಗಳು ಕೂಡ ನೆರೆ ಇಳಿದು ಹೋದ ನಂತರ ಒಂದು ಹೇಳಿಕೆ ಕೊಡುವ, ಪುಡಿಗಾಸು (ಭಿಕ್ಷೆ) ಚೆಲ್ಲುವ ಬದಲು ಸ್ವಲ್ಪ ಕ್ರಿಯಾತ್ಮಕವಾಗಿ ಯೋಚಿಸುವುದು ಒಳ್ಳೆಯದು.

- ವಿಠ್ಠಲ ಭಂಡಾರಿ

ಬೆಳ್ತಂಗಡಿ ತಾ|| ಕೊಕ್ಕಡ ಸೇವಾ ಸಹಕಾರಿ ಸಂಘ ಚುನಾವಣೆ

ಸಿಪಿಐ(ಎಂ)ಗೆ ಎರಡು ಸ್ಥಾನ

ಕೊಕ್ಕಡ ಮತ್ತು ಪಟ್ರಮೆಗ್ರಾಮದ ಜನರ ಸೌಕರ್ಯಕ್ಕೆ ಇರುವ ಕೊಕ್ಕಡ ಸೇವಾ ಸಹಕಾರಿ ಬ್ಯಾಂಕ್‌ನ ಮಹಾಸಭೆ ಹಾಗೂ ನಿರ್ದೇಶಕರ ಹುದ್ದೆಗೆ ಇತ್ತೀಚೆಗೆ ಚುನಾವಣೆ ನಡೆಯಿತು.

ಬೆಳ್ತಂಗಡಿ ತಾಲೂಕಿನಲ್ಲಿಯೇ ಪ್ರಥಮ ಡಿ.ವೈ.ಎಫ್.ಐ. ಘಟಕ ಸ್ಥಾಪನೆ ಆದ ಗ್ರಾಮ ಪಟ್ರಮೆ. ಈ ಗ್ರಾಮದ ಜನತೆ ಅಭದ್ರ ಜೀವನ ನಡೆಸುತ್ತಿದ್ದರು. ಎರಡು ಹೊಳೆಗಳ ನಡುವೆ ಇರುವ ಈ ಗ್ರಾಮದ ಜನತೆಗೆ ಯಾವುದೇ ಸಂಪರ್ಕ ವ್ಯವಸ್ಥೆ ಇರಲಿಲ್ಲ. ಡಿ.ವೈ.ಎಫ್.ಐ.ನ ಅವಿರತ ಹೋರಾಟದ ಪರಿಣಾಮವಾಗಿ ಗ್ರಾಮ ಕೇಂದ್ರಕ್ಕೆ ಬಸ್ ಸೌಲಭ್ಯ, ಮೂರು ಕಿರಿಯ ಪ್ರಾಥಮಿಕ ಶಾಲೆ, ಹರಿಯುತ್ತಿರುವ ಎರಡೂ ನದಿಗಳಿಗೆ ಸೇತುವೆ ಕಾಮಗಾರಿಗಳು ಇದೀಗ ಪ್ರಾರಂಭಗೊಂಡಿದ್ದಲ್ಲದ ಇತರ ಹಲವು ಸೌಕರ್ಯಗಳು ಒದಗಿದವು. ಡಿ.ವೈ.ಎಫ್.ಐ. ನೇತೃತ್ವದ ಹೋರಾಟ ಗ್ರಾಮದ ಜನರಿಗೆ ಸ್ಫೂರ್ತಿ ನೀಡಿತ್ತು, ತರುವಾಯ ಗ್ರಾಮದಲ್ಲಿ ಬೀಡಿ ಕಾರ್ಮಿಕರ ಸಂಘ ರೈತ ಸಂಘದ ಶಾಖೆಗಳು ರಚನೆಗೊಂಡು ಸಿಪಿಐ(ಎಂ) ಶಾಖೆಯೂ ರಚಿಸಲ್ಪಟ್ಟಿತು.

ಇದು ಹತ್ತಿರದ ಕೊಕ್ಕಡ ಗ್ರಾಮಕ್ಕೆ ಪಸರಿಸಿ ಅಲ್ಲಿಯೂ ಬೀಡಿ ಕಾರ್ಮಿಕರ ಸಂಘಟನೆ, ರೈತ ಸಂಘದ ಸಮಿತಿಗಳು ರಚಿಸಲ್ಪಟ್ಟವು. ರೈತರು ತಮ್ಮ ಸ್ಥಳೀಯ ಸಮಸ್ಯೆಗಳ ವಿರುದ್ಧ ಹೋರಾಡಲು ತಯಾರಾಗಿ ಕೆಂಬಾವುಟದ ಮೆರವಣಿಗೆ ಸಭೆಗಳು ಮಾಮೂಲಾದವು.

ಈ ರೀತಿ ಜನರ ಪ್ರೀತಿ ವಿಶ್ವಾಸ ಗಳಿಸಿದ ಸಿ.ಪಿ.ಐ.(ಎಂ) ಪಕ್ಷ ಈ ಬಾರಿ ಸಹಕಾರಿ ಸಂಘದ ಚುನಾವಣೆಯಲ್ಲಿ ಜನತಾದಳದ ಜೊತೆ ಹೊಂದಾಣಿಕೆ ಮಾಡಿಕೊಂಡು 2 ಕ್ಷೇತ್ರಗಳಲ್ಲಿ ಸ್ಪರ್ಧಿಸಿ ವಿಜಯಿಯಾಯಿತು. ಸಾಲಗಾರ ಕ್ಷೇತ್ರದಿಂದ ತಾಲೂಕಾ ಬೀಡಿ ಕೆಲಸಗಾರ ಸಂಘದ ಅಧ್ಯಕ್ಷರೂ, ಜಿಲ್ಲಾ ರೈತ ಸಂಘದ ಜಿಲ್ಲಾ ಸಮಿತಿ ಸಹ ಕಾರ್ಯದರ್ಶಿಯೂ ಆದ ನ್ಯಾಯವಾದಿ ಕಾಂ. ಬಿ.ಎಂ.ಭಟ್ ಪಟ್ರಮೆ ಮತ್ತು ಪಟ್ರಮೆ ಗ್ರಾಮದ ರೈತ ಸಂಘದ ಉಪಾಧ್ಯಕ್ಷರಾದ ಕಾಂ. ಹನಿಯ ಇವರು ಪರಿಶಿಷ್ಟ ಜಾತಿ ಸಾಲಗಾರ ಕ್ಷೇತ್ರದಿಂದ ಸ್ಪರ್ಧಿಸಿ ವಿಜಯಿಗಳಾದರು.

ಬಿಜೆಪಿಯ ಭದ್ರ ಕೋಟೆಯಾಗಿದ್ದ ಕೊಕ್ಕಡ ಪ್ರದೇಶದಲ್ಲಿ ಈ ಸಹಕಾರಿ ಸಂಘದ ಚುನಾವಣೆ ಫಲಿತಾಂಶ ಹೊರ ಬಿದ್ದಾಗ ಜನತಾದಳ 4, ಸಿಪಿಐ(ಎಂ) 2 ಕಾಂಗ್ರೆಸ್ 2, ಹಾಗೂ ಬಿಜೆಪಿ 1 ಸ್ಥಾನಗಳು ದೊರೆತವು. ಎಡ ಶಕ್ತಿಗಳತ್ತ ಜನ ಆಶಾಕಣ್ಣುಗಳಿಂದ ನೋಡುತ್ತಿದ್ದಾರೆ. ಅವರ ಬದುಕಿನ ಸಮಸ್ಯೆಗಳಿಗೆ ನೇತೃತ್ವ ನೀಡುವ ಪಕ್ಷವನ್ನು ಕಾಯುತ್ತಿದ್ದಾರೆ. ಜನರ ಬಳಿಗೆ ನಾವು ಹೋಗಬೇಕಾಗಿದೆ. ಜನ ನಮ್ಮನ್ನೇ ಕಾಯುತ್ತಿದ್ದಾರೆ ಎಂಬ ಅರಿವು ಎಡ ಚಳುವಳಿಗಾರರಿಗೆ ತಿಳಿದಿರಬೇಕು. ದುಡಿಯುವ ಜನರತ್ತ ಕಮ್ಯುನಿಸ್ಟ್ ಪಕ್ಷದ ಜನ ಸೇರದಿದ್ದರೆ ಅವರ ಹಾದಿ ತಪ್ಪಿಸಲು ಇತರರು ಮುನ್ನುಗ್ಗುತ್ತಾರೆ ಎಂಬುದಂತೂ ಸತ್ಯ.

ಹರ್ಯಾಣದಲ್ಲಿ ಬಿಜೆಪಿಯ ಇಬ್ಬಂದಿತನದ ಹೊಸ ದಾಖಲೆ!

ಎರಡು ತಿಂಗಳ ಹಿಂದೆ ಲೋಕಸಭೆಯಲ್ಲಿ ಬಹುಮತಕ'ಳಕೊಂಡು 'ಹುತಾತ್ಮ'ನಾದ ಸರಕಾರ ನೆನಪಿದೆಯೇ? ಲೋಕಸಭೆಯಲ್ಲಿ ವಿಶ್ವಾಸಮತ ಕಳಕೊಂಡಾಗ ಬಿಜೆಪಿ ಇದೇ ಪದ ಬಳಸಿತ್ತು. ಬೆಂಬಲ ಹಿಂತೆಗೆದುಕೊಂಡ ಎಐಎಡಿಎಂಕೆ 'ವಿಶ್ವಾಸದ್ರೋಹಿ' ಯಾಯಿತು, ವಿಶ್ವಾಸಮತದ ವಿರುದ್ಧ ಮತ ನೀಡಿದ ಪ್ರತಿಪಕ್ಷಗಳವರೆಲ್ಲಾ 'ಪಿತೂರಿಗಾರ' ರಾದರು. ಅವರು ಬೇಜವಾಬ್ದಾರರೂ' ಆದರು. ಏಕೆಂದರೆ ಒಂದು ಪರ್ಯಾಯ ಸರ್ಕಾರ ನೀಡಲು ಅವರಿಗಾಗಲಿಲ್ಲ. ರಾಷ್ಟ್ರಪತಿಗಳು ವಿಶ್ವಾಸಮತ ಕೇಳಲು ಹೇಳಿದ್ದು ಅವರಿಗೆ ಪ್ರಶ್ನಾರ್ಹವಾಗಿತ್ತು.

ಆದರೆ ಈಗ ಹರ್ಯಾಣ ನೋಡಿ! ಬಿಜೆಪಿ ತಾನೇ ವರ್ಣಿಸಿದ 'ವಿಶ್ವಾಸದ್ರೋಹಿ' ಪಾತ್ರ ವಹಿಸಿತು! ಇತರ ಪ್ರತಿಪಕ್ಷಗಳು 'ಪಿತೂರಿ'ಯಲ್ಲಿ ಸೇರಿಕೊಳ್ಳಬೇಕೆಂದು ಅದು ಬಯಸಿತು! ಮೂರು ವರ್ಷದ ಬನ್ಸಿಲಾಲ್ ಜೊತೆ ಸರಕಾರ ನಡೆಸಿದ ನಂತರ ಅದು ಭ್ರಷ್ಟಾಚಾರದಲ್ಲಿ ತೊಡಗಿದೆ, ಸರಕಾರದ ಉಸ್ತುವಾರಿ ಸರಿಯಾಗಿ ನಡೆಸುತ್ತಿಲ್ಲ ಎಂದು ನಮ್ಮ 'ಹುತಾತ್ಮ' ಸರಕಾರದ ಸಮರ್ಥ ಪ್ರಧಾನಮಂತ್ರಿಗೇ ಅನಿಸಿತು. ನಮ್ಮ ವೀರ ಸೈನಿಕರು ದೇಶದ ಗಡಿಗಳನ್ನು ರಕ್ಷಿಸಲು ಪ್ರಾಣಾರ್ಪಣೆ ಮಾಡುತ್ತಿರುವ ಕಾರ್ಗಿಲ್‌ನಿಂದ ಬಹಳ ದೂರವೇನಿಲ್ಲದ ಹರ್ಯಾಣದಲ್ಲಿ ಅದೇ ವೇಳೆಗೆ ಈಗ ಬಿಜೆಪಿಯ ಕೃಪೆಯಿಂದ ಕುದುರೆ ವ್ಯಾಪಾರ ಭರದಿಂದ ನಡೆಯಲು ಅವಕಾಶವಾಯಿತು. ಇರಲಿ, ಬನ್ಸಿಲಾಲರು 'ಹುತಾತ್ಮ'ರಾಗಲಿಲ್ಲವೆನ್ನಿ. ಆದರೆ ಬಿಜೆಪಿ ಇಬ್ಬಂದಿನತನದಲ್ಲಿ ಹೊಸದೊಂದು ದಾಖಲೆಯನ್ನೇ ಸೃಷ್ಟಿಸಿತು.

‘ಜನಸಾಮಾನ್ಯರು ವೀರರಾಗಿ ಹೊಮ್ಮಿದ್ದಾರೆ’

ಯುಗೋಸ್ಲಾವಿಯಾ ಅಧ್ಯಕ್ಷ ಮಿಲೊಸೆವಿಕ್ ಹೇಳಿಕೆ

ಜೂನ್ 10 ರಂದು ಯುಗೋಸ್ಲಾವಿಯ ಮತ್ತು G-8 ದೇಶಗಳ ನಡುವೆ ಆದ ಯುದ್ಧ ನಿಲುಗಡೆ ಒಪ್ಪಂದದ ನಂತರ ಯುಗೋಸ್ಲಾವಿಯಾ ಅಧ್ಯಕ್ಷ ಸ್ಲೊಬೊದನ್ ಮಿಲೊಸೆವಿಕ್ ದೇಶದ ಜನರನ್ನುದ್ದೇಶಿಸಿ ಮಾಡಿದ ಭಾಷಣದ ಭಾಗಗಳನ್ನು ಈ ಕೆಳಗೆ ಕೊಡಲಾಗಿದೆ. ಯುದ್ಧ ನಿಲುಗಡೆಯನ್ನು 20ನೇ ಶತಮಾನದ ಕೊನೆಯಲ್ಲಿ ಜನತೆಯ ವೀರತ್ವದ ಮಹಾನ್ ವಿಜಯ ಎಂದು ಅವರು ಕರೆದಿದ್ದಾರೆ.

ಪ್ರಿಯ ನಾಗರೀಕರೆ!

ಆಕ್ರಮಣ ಮುಗಿದಿದೆ. ಆಕ್ರಮಣದ ಮೇಲೆ ಶಾಂತಿ ಎರಗಿ ಮೆಟ್ಟಿ ನಿಂತಿದೆ. ಪ್ರಿಯ ನಾಗರಿಕರೇ! ಶಾಂತಿಯನ್ನು ಆಸ್ವಾದಿಸಿ!

ಈ ಹೊತ್ತಿನಲ್ಲಿ ನಮ್ಮ ದೇಶದ ರಕ್ಷಣೆಗೆ ತಮ್ಮ ಪ್ರಾಣ ಸಮರ್ಪಣೆ ಮಾಡಿದ ವೀರ ಯೋಧರಿಗೆ ನಿಮ್ಮ ಮೊದಲ ನೆನಕೆ ಸಲ್ಲಬೇಕು. ನಮ್ಮ ಜನರ ಸ್ವಾತಂತ್ರ್ಯ ಮತ್ತು ಆತ್ಮಗೌರವ ಕಾಪಾಡಲು ಅವರು ತಮ್ಮ ಜೀವವನ್ನು ಮುಡಿಪಾಗಿ ಇಟ್ಟರು... 462 ಯುಗೋಸ್ಲಾವ್ ಸೈನಿಕರು ಮತ್ತು ಸರ್ಬಿಯಾ ಪೋಲಿಸು ಪಡೆಯ 114 ಪೋಲಿಸರು ಈ ಯುದ್ಧಕ್ಕೆ ಬಲಿಯಾದರು......

ಈ ಯುದ್ಧದಲ್ಲಿ ಭಾಗವಹಿಸಿದ್ದು ಸೈನ್ಯ ಮಾತ್ರವಲ್ಲ. ಇಡೀ ಜನತೆ ಈ ಯುದ್ಧದಲ್ಲಿ ಭಾಗಿಯಾದರು- ಹೆರಿಗೆ ಆಸ್ಪತ್ರೆಯಲ್ಲಿ ಆಗ ಆಗತಾನೇ ಹುಟ್ಟಿದ ಹಸುಗೂಸುಗಳು, ಆಸ್ಪತ್ರೆಯಲ್ಲಿ ತೀವ್ರ ಖಾಯಿಲೆಗೊಳಗಾದ ರೋಗಿಗಳೂ. ನಮ್ಮ ಪ್ರಮುಖ ಸೇತುವೆಗಳನ್ನು ರಕ್ಷಿಸಲು ಸಾವಿರಾರು ಲಕ್ಷಾಂತರ ಜನ ತಮ್ಮ ಪ್ರಾಣವನ್ನು ಪಣಕ್ಕೊಡ್ಡಿದ್ದರು. ನಾಗರಿಕರು ತಮ್ಮ ಫ್ಯಾಕ್ಟರಿಗಳನ್ನು ಬಡಾವಣೆಗಳನ್ನು, ನಗರಗಳನ್ನು ಉದ್ಯೋಗಗಳನ್ನು ಸರಕಾರವನ್ನು ಜನತೆಯನ್ನು ಕಾಪಾಡಲು ತಮ್ಮ ಶರೀರವನ್ನು ಮಾನವ ಗೋಡೆಯಾಗಿ ಒಡ್ಡಿದರು. ಸಾಮಾನ್ಯ ಜನ ಯುದ್ಧ ವೀರರಾಗಿ ಹೊಮ್ಮಿದ್ದಾರೆ. ಈ ಯುದ್ಧದ ವಿಶೇಷತೆ ಅದೇ ಆಗಿತ್ತು. ಜನ ವೀರರಾಗಿದ್ದಾರೆ. ಅವರು ವೀರರಂತೆ ಅನ್ನಿಸಬೇಕು. ವರ್ತಿಸಬೇಕು. ಅಂದರೆ ಜನ ಆತ್ಮಗೌರವ, ಉದಾರಿತನ, ಮತ್ತು ಜವಾಬ್ದಾರಿಯಿಂದ ವರ್ತಿಸಬೇಕು.

ಈ ವರ್ಷದ ಆರಂಭದಿಂದ ದೇಶದಲ್ಲಿ ಬಹಳಷ್ಟು ರ್‍ಯಾಲಿಗಳಾಗಿವೆ ಎಲ್ಲಾ ರ್‍ಯಾಲಿಗಳಲ್ಲೂ ಕೇಳಿ ಬಂದಿದ್ದು ಒಂದೇ ಘೋಷಣೆ- ನಾವು ಕೊಸೊವೊ ಬಿಟ್ಟು ಕೊಡುವುದಿಲ್ಲ! ನಾವು ಕೊಸೊವೊ ಬಿಟ್ಟು ಕೊಟ್ಟಿಲ್ಲ.

ಕೊಸೊವೊಗೆ ಸ್ವಾತಂತ್ರ್ಯದ ಬಗ್ಗೆ ನಾಟೋ ಆಕ್ರಮಣದ ಮೊದಲು ಆಗಾಗ ಕೇಳಿ ಬರುತ್ತಿದ್ದ ಮಾತಿಗೆ ಬೆಲ್‌ಗ್ರೇಡ್ ಒಪ್ಪಂದ ಬೀಗ ಜಡಿದಿದೆ. ನಮ್ಮ ದೇಶದ ಪ್ರಾದೇಶಿಕ ಸಮಗ್ರತೆಯನ್ನು ಪ್ರಶ್ನಿಸಲು ಸಾಧ್ಯವಿಲ್ಲ ಯಾರಿಂದಲೂ.

ನಾವು ನಮ್ಮ ನಿಲುವನ್ನು ಬಿಟ್ಟು ಕೊಡಲಿಲ್ಲ. ದೇಶವನ್ನು ರಕ್ಷಿಸಿದೆವು. ಕೊಸೊವೊ ಸಮಸ್ಯೆಯನ್ನು ಜಗತ್ತಿನ ಪರಮೋಚ್ಛ ಸಂಘಟನೆಯ ಹತ್ತಿರ ಒಯ್ದೆವು. ವಿಶ್ವ ಸಂಸ್ಥೆಯ ಮೇಲ್ವಿಚಾರಣೆಯಲ್ಲಿ ವಿಶ್ವಸಂಸ್ಥೆಯ ನಿಯಮಗಳ ಪ್ರಕಾರ ಸಮಸ್ಯೆಯನ್ನು ಬಗೆಹರಿಸಲಾಯಿತು. ವಿಶ್ವಸಂಸ್ಥೆಯ ಮೇಲ್ವಿಚಾರಣೆಯಲ್ಲಿ ಅಂತರ್ರಾಷ್ಟ್ರೀಯ ಪಡೆಗಳು ಕೊಸೊವೊದಲ್ಲಿ ಕೆಲಸ ಮಾಡುತ್ತವೆ. ಕೊಸೊವೊದ ಸಮಸ್ಯೆಗೆ ರಾಜಕೀಯ ಪರಿಹಾರ ಹುಡುಕುವಲ್ಲೂ ವಿಶ್ವಸಂಸ್ಥೆ ಭಾಗಿಯಾಗುತ್ತದೆ......

ಇದರರ್ಥ ಕೊಸೊವೊದ ಸ್ವಾಯತ್ತತೆಯ ಬಗ್ಗೆ ಮಾತ್ರ ಮಾತುಕತೆ ಸಾಧ್ಯ. ನಾವು ವಿಶ್ವ ಸಂಸ್ಥೆಯ ಮುಂದೆ ಹೋಗುವ ಮೂಲಕ ನಮ್ಮ ದೇಶವನ್ನು ರಕ್ಷಿಸಿದ್ದು ಮಾತ್ರವಲ್ಲ. ವಿಶ್ವಸಂಸ್ಥೆ ಅಂತರ್ರಾಷ್ಟ್ರೀಯ ನಿರ್ಧಾರಗಳಲ್ಲಿ ಪುನಃ ಭಾಗವಹಿಸುವಂತೆ ಮಾಡಿದೆವು. ನಾಟೋ ಆಕ್ರಮಣ ಆರಂಭವಾಗಿ 80 ದಿನಗಳವರೆಗೆ ನಿಷ್ಕ್ರಿಯವಾದ ವಿಶ್ವಸಂಸ್ಥೆ ಕೆಲಸ ಆರಂಭಿಸುವಂತೆ ಮಾಡಿದೆವು.

ಇದು ಇಡೀ ವಿಶ್ವದ ಶಾಂತಿಪ್ರಿಯ ಜನತೆಗೆ ನಮ್ಮ ಜನತೆಯ ಮಹತ್ತರ ಕೊಡುಗೆ. ಒಂದೇ ಕೇಂದ್ರದಿಂದ ‘ಹುಕುಂ’ ತೆಗೆದುಕೊಂಡು ತೆಪ್ಪಗೆ ಬದುಕಲು ನಿರಾಕರಿಸುವ ಮೂಲಕ ಬಹು ಧ್ರುವೀಯ ಜಗತ್ತನ್ನು ನಿರ್ಮಿಸುವತ್ತ ನಮ್ಮ ಕೊಡುಗೆ ನೀಡಿದ್ದೇವೆ. ಇದು ಜನತೆಯ ಚಾರಿತ್ರಿಕ ಕೊಡುಗೆ ಎಂದು ನನ್ನ ಅನಿಸಿಕೆ. ನಮಗಿಂತ ಹಲವು ಪಟ್ಟು ದೊಡ್ಡ ಮತ್ತು ಬಲಶಾಲಿಗಳಿಗೆ ತೀವ್ರ ಪ್ರತಿರೋಧ ನಮ್ಮ ಜನತೆಯ ವೀರತ್ವ 20ನೇ ಶತಮಾನದ ಕೊನೆಯ ಹೊತ್ತಿಗೆ ದೊಡ್ಡ ಮೈಲಿಗಲ್ಲು.

ಆಕ್ರಮಣ ಮುಗಿದು ಮತ್ತು ಶಾಂತಿ ಆರಂಭವಾಗುವ ಈ ಕ್ಷಣದಲ್ಲಿ ಹೊಸ ಸಮಸ್ಯೆಗಳನ್ನು ನಾವು ಎದುರಿಸಬೇಕು......

ದೇಶದ ಪುನರ್‌ನಿರ್ಮಾಣದ ದೊಡ್ಡ ಕೆಲಸ ನಮ್ಮ ಮುಂದಿದೆ. ನಾಶವಾದ ನಮ್ಮ ಸೇತುವೆಗಳನ್ನು, ಕಾರ್ಖಾನೆಗಳನ್ನು, ರಸ್ತೆಗಳನ್ನು ಪುನಃ ಕಟ್ಟ ಬೇಕಾಗಿದೆ. ನಮ್ಮ ಜನತೆಯ ಶಕ್ತಿ, ಸಾಮರ್ಥ್ಯ, ಸತ್ವ ಬಿಂಬಿಸುವ ಹೊಸ ಬೆಳವಣಿಗೆ ಕಾರ್ಯಗಳನ್ನು ಕೈಗೆತ್ತಿಕೊಳ್ಳಬೇಕಾಗಿದೆ.

ನಾನು ನಮ್ಮ ಜನ ಎಂದು ಹೇಳುವುದು ಎಲ್ಲಾ ಯುಗೋಸ್ಲಾವ್ ಜನತೆಯ ಬಗ್ಗೆ ಅವರು ಸರ್ಬಿಯನ್ನರಾಗಿರಲಿ ಕೊಸೊವೊರಾಗಿರಲಿ, ಅಲ್ಬೇನಿಯನ್ನರಾಗಲಿ ಎಲ್ಲರು ನಮ್ಮ ಜನಗಳು, ನಾವು ಬಹು-ಜನಾಂಗೀಯ ದೇಶವನ್ನು ರಕ್ಷಿಸಿದ್ದೇವೆ. ಯುಗೋಸ್ಲಾವಿಯವನ್ನು ಹಿಂದೆ ಜನಾಂಗೀಯ ಆಧಾರದ ಮೇಲೆ ಒಡೆಯಲಾಗಿತ್ತು. ಆದರೆ ಉಳಿದ ಯುಗೋಸ್ಲಾವಿಯಾದ ಬಹು-ಜನಾಂಗೀಯ ಸ್ವರೂಪವನ್ನು ನಾವು ರಕ್ಷಿಸಿದ್ದೇವೆ. ಎತ್ತಿ ಹಿಡಿದಿದ್ದೇವೆ. ಇದು ನಮ್ಮ ರಕ್ಷಣಾ ಕಾರ್ಯದ ದೊಡ್ಡ ಸಾಧನೆ ಎಂದು ನನ್ನ ಅನಿಸಿಕೆ.......

ನಮ್ಮ ಮುಂದಿರುವ ಮಹಾನ್ ಕೆಲಸಕ್ಕೆ ದೊಡ್ಡ ರೀತಿಯಲ್ಲಿ ಅಣಿ ನೆರೆಸಬೇಕಾಗಿದೆ. ಈ ಕಷ್ಟದ ಸಂದರ್ಭದಲ್ಲಿ ನಮ್ಮ ಐಕ್ಯತೆಯ ರಕ್ಷಣೆ ಹಿಂದೆಂದಿಗಿಂತಲೂ ಹೆಚ್ಚು ಅಗತ್ಯ. ಪುನರ್ನಿರ್ಮಾಣದ ಸಮಯದಲ್ಲಿ ಅಣಿನೆರೆಸುತ್ತಾ ಐಕ್ಯತೆ ಕಾಪಾಡುತ್ತಾ ಹೊಸ ಬೆಳವಣಿಗೆ ಸಾಧಿಸಬೇಕಾಗಿದೆ ಈ ಮಹಾನ್ ಕಾರ್ಯದಲ್ಲಿ ನಾನು ಎಲ್ಲಾ ಯುಗೋಸ್ಲಾವಿಯಾದ ಎಲ್ಲಾ ನಾಗರಿಕರಿಗೆ ಅಪಾರ ಸಂತೋಷ ಮತ್ತು ಅದೃಷ್ಟ ವಿರಲಿ ಎಂದು ಹಾರೈಸುತ್ತೇನೆ.

ಒರಿಸ್ಸಾ: ಚಿಲ್ಕಾ ಸರೋವರ ರಕ್ತ ರಂಜಿತ

ಸೀಗಡಿ ಬಂಡವಾಳಗಾರರ ವಿರುದ್ಧ ಒರಿಸ್ಸಾದ ಬಡ ಮೀನುಗಾರರ ಹೋರಾಟ

ಚಿಲ್ಕಾ ಸರೋವರ ಒರಿಸ್ಸಾದಲ್ಲಿರುವ ಜಗದ್ವಿಖ್ಯಾತ ಸರೋವರ. ಸಮುದ್ರತಟದಲ್ಲಿ ಇರುವ ಅರೆ - ಉಪ್ಪು ನೀರಿನ ಸರೋವರ. ಕವಿಗಳ, ಪ್ರವಾಸಿಗರ ಮೆಚ್ಚಿನ ತಾಣ. ಉತ್ತರ ಧ್ರುವದ ಬಳಿಯಿಂದ,. ಸೈಬೀರಿಯಾದಿಂದ ಬರುವ ವಲಸೆ ಹಕ್ಕಿಗಳ ಬೀಡು. ಈಗ ಅವೆಲ್ಲಾ ಹಳೆಯ ಕಥೆ. ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸೀಗಡಿಯ ಬೆಲೆ ಏರಿದ್ದನ್ನು ಕಂಡ ಸೀಗಡಿ ವ್ಯಾಪಾರಿಗಳು ಈ ಸರೋವರದ ಮೇಲೆರಗಿದ್ದಾರೆ. ಕೋಟಿಗಟ್ಟಲೆ ರಫ್ತು ಡಾಲರ್ ಗಳಿಸಲು ಅಲ್ಲಿಯ ಪರಿಸರವನ್ನು ಹಾಳುಗೆಡವಿದ್ದಾರೆ. ಅದನ್ನವಲಂಬಿಸಿದ್ದ ಸಾವಿರಾರು ಮೀನುಗಾರರ ಹೊಟ್ಟೆ ಬಡಿದಿದ್ದಾರೆ. ಇದನ್ನು ವಿರೋಧಿಸಿದಾಗ ಅವರ ಮೇಲೆ ಪೋಲೀಸರನ್ನು, ಬಾಡಿಗೆ ಗೂಂಡಾಗಳನ್ನು ಹರಿಯಬಿಟ್ಟು ಗುಂಡುಹಾರಿಸಿ ಮೂವರನ್ನು ಕೊಂದಿದ್ದಾರೆ. ಈ ಘಟನೆ ಮೇ 29,30 ರ ಮಧ್ಯರಾತ್ರಿ ನಡೆಯಿತು. ಈ ಘಟನೆ ರಾಜ್ಯದಲ್ಲಿ ಕಾಂಗ್ರೆಸ್(ಐ), ಬಿಜೆಪಿ ಮತ್ತು ಬಿಜೆಡಿಯ ನಿಜ ಸ್ವರೂಪಗಳನ್ನು ಬಯಲಿಗೆಳೆಯಿತು. ಸೀಗಡಿ ಕೃಷಿಯಲ್ಲಿ ತೊಡಗಿಸಿದ ಬಂಡವಾಳದ ಗುಲಾಮರು ಇವರೆಲ್ಲಾ ಎಂದು ಸಾಬೀತಾಯಿತು.

ಒರಿಸ್ಸಾದಲ್ಲಿ ಎಸ್ಟೇಟುಗಳನ್ನು ರದ್ದು ಮಾಡಿದಾಗ ಚಿಲ್ಕಾ ಸರೋವರ ಸರಕಾರದ ರೆವಿನ್ಯೂ ಇಲಾಖೆಯ ವ್ಯಾಪ್ತಿಗೆ ಬಂತು. ಆಗ ಅದನ್ನು ವಲಯಗಳಾಗಿ ಮಾಡಿ ಮೀನುಗಾರರ ಸಹಕಾರಿ ಸಂಘಗಳಿಗೆ ಲೀಸಿಗೆ ನೀಡಲಾಯಿತು. ಮೀನುಗಾರಿಕೆಯಲ್ಲಿ ಲಾಭವೇನೂ ಇಲ್ಲದಿದ್ದಾಗ ಅದೊಂದು ಯಾರಿಗೂ ಬೇಡವಾದ ವೃತ್ತಿಯಾಗಿತ್ತು. ಅದನ್ನು ದಲಿತರಿಗೇ ಬಿಟ್ಟುಕೊಡಲಾಯಿತು. ಆದರೆ ಮೀನುಗಾರಿಕೆ ಒಂದು ಲಾಭಕಾರಿ ಉದ್ಯಮವಾಗತೊಡಗಿದಾಗ ಮೇಲ್ಜಾತಿಗಳವರ ಕಣ್ಣು ಅದರ ಮೇಲೆ ಬಿತ್ತು. ಅಂತರ್ರಾಷ್ಟ್ರೀಯ ಮಾರುಕಟ್ಟೆಯಲ್ಲಿ ಸೀಗಡಿ ಬೆಲೆ ಗಗನಕ್ಕೇರಲಾರಂಭಿಸಿದಾಗ ಬಂಡವಾಳಗಾರರ ಕಣ್ಣು ಬೀಳಲಾರಂಭಿಸಿತು. ದಲಿತ ಮೀನುಗಾರರು ಮತ್ತು ಲಾಭಕೋರ ವ್ಯಾಪಾರಿಗಳ ನಡುವೆ ಆಗಾಗ ಘರ್ಷಣೆಗಳು ಘಟಿಸಲಾರಂಭಿಸಿತು.

1992 ರಲ್ಲಿ ಟಾಟಾಗಳೂ ಈ ಸರೋವರದತ್ತ ಆಕರ್ಷಿತರಾದರು. 950 ಎಕ್ರೆಗಳನ್ನು ಸೀಗಡಿ ಕೃಷಿಗೆ ಹೇಗೋ ಗಿಟ್ಟಿಸಿದರು. ಬಿಜು ಪಟ್ನಾಯಕ್ ಮುಖ್ಯಮಂತ್ರಿ ಗಳಾಗಿದ್ದಾಗ ನರಸಿಂಹರಾಯರ ಹೊಸ ಆರ್ಥಿಕ ನೀತಿಗಳನ್ನು ರಾಜ್ಯದಲ್ಲಿ ಜಾರಿಗೆ ತರಲು ಮುಂದಾದಾಗ ಅದರ ಭಾಗವಾಗಿ ಚಿಲ್ಕಾ ಸರೋವರದ 40% ಭಾಗವನ್ನು ಸೀಗಡಿ ಕೃಷಿಗೆ ಕೊಡಲು ನಿರ್ಧರಿಸಲಾಯಿತು. ಇದರ ವಿರುದ್ಧ ದೊಡ್ಡ ಆಂದೋಲನವೇ ನಡೆಯಿತು. ಟಾಟಾಗಳ ಯೋಜನೆಗೆ ಕೇಂದ್ರ ಪರಿಸರ ಮಂತ್ರಾಲಯದ ಮಂಜೂರಿ ಸಿಗಲಿಲ್ಲ. ಅವರು ಗಂಟುಮೂಟೆ ಹೊತ್ತು ಕಾಲು ಕೀಳಬೇಕಾಗಿ ಬಂತು. ಆದರೆ ಅವರ ಜಾಗವನ್ನು ಮಿನಿಟಾಟಾಗಳು, ವ್ಯಾಪಾರಿಗಳು, ಅಧಿಕಾರಿಗಳು, ಬಂಡವಾಳ ಶಾಹಿ ಪಕ್ಷಗಳ ರಾಜಕಾರಣಿಗಳು ಆಕ್ರಮಿಸಿ ಕೊಂಡರು.

ಮೀನುಗಾರರು ರಾಜ್ಯ ಸರಕಾರದ ನಿರ್ಧಾರದ ವಿರುದ್ಧ ಹೈಕೋರ್ಟಿಗೆ ಹೋದರು. ಹೈಕೋರ್ಟ್ ಈ ನಿರ್ಧಾರ ಮೀನುಗಾರರಲ್ಲದವರ ಪರ ವಾಲಿದೆ, ಕೇವಲ ಹೆಚ್ಚು ಹಣ ಬರುತ್ತದೆಂಬ ಆಧಾರದಲ್ಲಿ ಇಂತಹ ನಿರ್ಣಯ ಸರಿಯಲ್ಲ ಎಂದು ತೀರ್ಪಿತ್ತು ಒಂದು ಸತ್ಯಶೋಧನ ಸಮಿತಿ ರಚಿಸಬೇಕು, ಅಂತಿಮ ನಿರ್ಣಯವನ್ನು ಅದರ ವರದಿಯ ಆಧಾರದ ಮೇಲೆ ಕೈಗೊಳ್ಳಬೇಕು ಎಂದು ಸೂಚಿಸಿತು. ಇಂತಹ ಒಂದು ಸಮಿತಿ ದುರದೃಷ್ಟವಶಾತ್ ಸೀಗಡಿ ವ್ಯಾಪಾರಿಗಳ ಪ್ರಭಾವಕ್ಕೊಳಗಾಗಿ ಸರಕಾರದ ನಿರ್ಣಯವನ್ನು ಅನುಮೋದಿಸಿತು. ವ್ಯಾಪಾರಿಗಳು ಚಿಲ್ಕಾ ಸರೋವರದಲ್ಲಿ ಲೀಸಿಗೆ ಪ್ರದೇಶಗಳನ್ನು ಪಡೆಯಲಾರಂಭಿಸಿದರು. ಲೀಸಿಗೆ ಪಡೆದದ್ದಕ್ಕಿಂತ ಹೆಚ್ಚು ಭಾಗದಲ್ಲಿ ‘ಘೇರಿ’ಗಳನ್ನು(ಗಡಿಗಳನ್ನು) ಹಾಕಿ ಸೀಗಡಿ ಕೃಷಿಗೆ ಬಳಸಲಾರಂಭಿಸಿದರು. ಮೀನುಗಾರರ ಬದುಕು ಶೋಚನೀಯವಾಯಿತು.

ಈ ನಡುವೆ ಸುಪ್ರೀಂಕೋರ್ಟ್ ಚಿಲ್ಕಾವನ್ನು ಪರಿಸರ ಮಾಲಿನ್ಯದಿಂದ ಮುಕ್ತಗೊಳಿಸಲು ಕರಾವಳಿ ಮೀಸಲು ವಲಯದಿಂದ ಒಂದು ಕಿಲೋಮೀಟರ್‌ವರೆಗೆ ಸೀಗಡಿ ಕೃಷಿಯನ್ನು ನಿಷೇಧಿಸಿತು. ಆದರೆ ಈ ತೀರ್ಪನ್ನು ಜಾರಿ ಮಾಡಲು ಯಾವುದೇ ಸರಕಾರಿ ವ್ಯವಸ್ಥೆ ಮುಂದಾಗಲಿಲ್ಲ. ಮೀನುಗಾರರು ತಮ್ಮ ಮನವಿಗಳೆಲ್ಲಾ ನಿಷ್ಫಲಗೊಂಡಾಗ ಸೀಗಡಿ ವ್ಯಾಪಾರಿಗಳ ಈ ‘ಘೇರಿ’ಗಳ್ನು ಕಿತ್ತುಹಾಕಲು ಅಂತಿಮ ಗಡುವು ನೀಡಿದರು. ಆ ಗಡುವು ಮುಗಿದ ಕೂಡಲೇ ಮೇ 29 ರಂದು ಸುಮಾರು 3000 ಎಕ್ರೆ ಪ್ರದೇಶದಲ್ಲಿ ಈ ‘ಘೇರಿ’ಗಳನ್ನು ಧ್ವಂಸ ಮಾಡಿದರು - ಇದು ಸುಪ್ರಿಂ ಕೋರ್ಟಿನ ತೀರ್ಪಿನ ಜಾರಿಯ ಭಾಗವಾಗಿ ನಡೆದದ್ದು ಎಂಬುದನ್ನು ಗಮನಿಸಬೇಕು. ಆದರೆ ಸೀಗಡಿ ವ್ಯಾಪಾರಿಗಳು ಸುಮ್ಮನಿರಲಿಲ್ಲ. ಪ್ರತೀಕಾರಕ್ಕೆ ಇಳಿದರು. ಅದರ ಪರಿಣಾಮವೇ ಮೇ 29-30 ರ ಮಧ್ಯರಾತ್ರಿಯ ದುಷ್ಟ ಘಟನೆ.

ಮೇ 30 ರ ಮಧ್ಯರಾತ್ರಿ 12-30 ರ ಸುಮಾರು ಚಿಲ್ಕಾ ಸರೋವರ ತೀರದ ಸೋರನ್ ಗ್ರಾಮವು ಗಾಢನಿದ್ರೆಯಲ್ಲಿದ್ದ ಸಮಯ. ಪೋಲೀಸರು ಮತ್ತು ಸೀಗಡಿ ವ್ಯಾಪಾರಿಗಳ ಬಾಡಿಗೆ ಗೂಂಡಾಗಳ ತುಕಡಿಗಳು ಆ ಹಳ್ಳಿಯನ್ನು ಪ್ರವೇಶಿಸಿದವು. ಖುರ್ದಾ ಜಿಲ್ಲೆಯ ಕಲೆಕ್ಟರ್ ಮತ್ತು ಪೋಲೀಸ್ ಸೂಪರಿಂಟೆಂಡೆಂಟ್ ಅದರ ನೇತೃತ್ವ ವಹಿಸಿದ್ದರು! ಸಬ್ ಕಲೆಕ್ಟರು, ತಹಶೀಲ್ದಾರರೂ ಇದ್ದರು. ‘ಮೀನುಗಾರರ ಮಹಾ ಸಂಘ’ದ ಕಚೇರಿಯನ್ನು ಸುತ್ತುವರೆದರು. ಆ ದಿನ ಹಗಲಿನಲ್ಲಿ ನಡೆಸಿದ ಕಾರ್ಯಾಚರಣೆ(‘ಘೇರಿ’ಗಳನ್ನು ತೆಗೆದುಹಾಕುವುದು) ಯಿಂದ ಸುಸ್ತಾಗಿ, ಮರುದಿನದ ಕಾರ್ಯಾಚರಣೆಗೆ ಬೇಗನೇ ಏಳಲೆಂದು ನಿರ್ಧರಿಸಿ ಮಲಗಿದ್ದ ಸಂಘದ ನಾಯಕರನ್ನು ಬಂಧಿಸಿದರು.

ಸುದ್ದಿ ಕಾಳ್ಗಿಚ್ಚಿನಂತೆ ಹರಡಿತು. ನೂರಾರು ಗ್ರಾಮಸ್ಥರು ಓಡಿ ಬಂದರು, ನಮ್ಮ ನಾಯಕರನ್ನು ಬಿಡಿ ಎಂದರು. ಪೋಲೀಸರು ಕೇಳದಿದ್ದಾಗ ಅವರನ್ನು ಅಡ್ಡಗಟ್ಟಿದರು. ಲಾಠಿಚಾರ್ಜ್, ಅಶ್ರುವಾಯು ನಡೆಯುತ್ತಿದ್ದಂತೆ ಪೋಲೀಸರ ಜತೆಗಿದ್ದ ಗೂಂಡಾಗಳು ಸಿಕ್ಕಾಪಟ್ಟೆ ಗೋಲೀಬಾರು ಆರಂಭಿಸಿದರು. ಪ್ರಮಿಳಾ ಬೆಹರಾ, ಬಚ್ಛನಿಧಿ ಬೆಹೆರಾ ಸ್ಥಳದಲ್ಲೇ ಬಲಿಯಾದರು. ದಿಗಂಬರ್ ಬೆಹರಾ ಆಸ್ಪತ್ರೆಗೆ ಒಯ್ಯುವಾಗ ಅಸುನೀಗಿದ. ಸುದರ್ಶನ್ ಬೆಹರಾ ಆಸ್ಪತ್ರೆಯಲ್ಲಿ ಸತ್ತ. ಗಂಭೀರವಾಗಿ ಗಾಯಗೊಂಡ ಇನ್ನೂ ಹತ್ತಾರು ಮೀನುಗಾರರು ಭುವನೇಶ್ವರ, ಕಟಕ್‌ನ ಆಸ್ಪತ್ರೆಗಳಲ್ಲಿ ಇದ್ದಾರೆ.

ಮುಖ್ಯಮಂತ್ರಿ ಗೋಮೊಂಗ್ ತನಗೆ ಈ ಕಾರ್ಯಾಚರಣೆಯ ಬಗ್ಗೆ ಗೊತ್ತೇ ಇರಲಿಲ್ಲ ಎಂದರು. ಸೀಗಡಿ ಕೃಷಿಯಲ್ಲಿ ತೊಡಗಿಸಿದ ಬಂಡವಾಳ ಎಷ್ಟು ಶಕ್ತಿಶಾಲಿ ಎಂದು ಜನಕ್ಕೆ ಆಗ ಮನವರಿಕೆಯಾಯಿತು. ರಾಜ್ಯಾದ್ಯಂತ ವ್ಯಾಪಕ ಪ್ರತಿಭಟನೆ ವ್ಯಕ್ತಗೊಂಡಿತು. ಸರಕಾರ ಮತ್ತು ಆಳುವ ಪಕ್ಷವೂ ಇದರಲ್ಲಿ ಪಾಲ್ಗೊಳ್ಳ ಬೇಕಾಯಿತು. ಜಿಲ್ಲಾ ಕಲೆಕ್ಟರ್, ಪೋಲೀಸ್ ಸೂಪರಿಟೆಂಡೆಂಟ್‌ರನ್ನು ಅಮಾನತು ಗೊಳಿಸಲಾಯಿತು. ನ್ಯಾಯಾಂಗ ತನಿಖೆಗೆ ಆಯೋಗ ನೇಮಿಸಲಾಯಿತು. ಸತ್ತವರ, ಗಾಯಗೊಂಡವರ ಕುಟುಂಬಗಳಿಗೆ ಪರಿಹಾರ ಪ್ರಕಟಿಸಲಾಯಿತು.


ಆದರೆ ಕಾಂಗ್ರೆಸ್(ಐ) ಗೆ ಈ ದುಷ್ಕೃತ್ಯದಲ್ಲಿ ತನ್ನ ಶಾಮೀಲನ್ನು ಮುಚ್ಚಿಡಲಾಗಲಿಲ್ಲ. ಏಕೆಂದರೆ ಹಿಂದಿನ ಮುಖ್ಯಮಂತ್ರಿ ಜೆ.ಬಿ.ಪಟ್ನಾಯಕ್‌ರ ನಿಕಟವರ್ತಿಯಾದ ರಾಜ್ಯ ಯುವ ಕಾಂಗ್ರೆಸ್ ಮುಖ್ಯಸ್ಥನ ಕಾರನ್ನೇ ಆ ಗೂಂಡಾಗಳು ಬಳಸಿದ್ದರು. ಅದೇ ರೀತಿ ಒಬ್ಬ ಐ.ಎ.ಎಸ್., ಒಬ್ಬ ಐ.ಪಿ.ಎಸ್. ಅಧಿಕಾರಿ(ಸೀಗಡಿ ಕೃಷಿಯಲ್ಲಿ ಶಾಮೀಲಾಗಿದ್ದವರು) ಗಳ ಖಾಸಗೀ ವಾಹನಗಳನ್ನು ಈ ಕಾರ್ಯಾಚರಣೆಯಲ್ಲಿ ಬಳಸಲಾಗಿತ್ತು ಎಂದು ಬೆಳಕಿಗೆ ಬಂದಿದೆ. ಬಿಜೆಪಿ ಮತ್ತು ಅದರ ಮಿತ್ರ ಪಕ್ಷ ಬಿಜೆಡಿಯ ನಿಜ ಸ್ವರೂಪವೂ ಬೇಗನೇ ಬೆಳಕಿಗೆ ಬಂತು. ಜೂನ್ 5 ರಂದು ಮೀನುಗಾರರ ಮಹಾಸಂಘ ಒರಿಸ್ಸಾ ಬಂದ್‌ಗೆ ಕರೆ ನೀಡಿದಾಗ ಅವರು ಬೆಂಬಲ ನೀಡಲಿಲ್ಲ. ಏಕೆಂದರೆ ಅವರ ಹಲವು ಮುಖಂಡರೂ ಸೀಗಡಿ ಕೃಷಿಯಲ್ಲಿ ತೊಡಗಿದ್ದ ವರೇ. ಬಿಜೆಡಿಯಂತೂ ಈ ಮೀನುಗಾರ-ವಿರೋಧಿ ಕ್ರಮವನ್ನು ಆರಂಭಿಸಿದ ಬಿಜು ಪಟ್ನಾಯಕ್ ಹೆಸರಿನಲ್ಲೇ ಇರುವಂತದ್ದು.

ಆಗ ಮೀನುಗಾರರ ಹೋರಾಟದ ನೆರವಿಗೆ ಬಂದವರು ಎಡಪಕ್ಷಗಳು ಮಾತ್ರ. ಜೂನ್ 5 ರಂದು 50 ಸಾವಿರ ಮೀನುಗಾರರು ರಾಸ್ತಾರೋಕೋ, ರೈಲ್‌ರೋಕೋ, ಚಿಲ್ಕಾವನ್ನು ಸುತ್ತುವರಿದ ಮೂರು ಜಿಲ್ಲೆಗಳಾದ ಖುರ್ದಾ, ಗಂಜಾಂ ಮತ್ತು ಪುರಿ ಜಿಲ್ಲೆಗಳಲ್ಲಿ, ರಾಜಧಾನಿ ಭುವನೇಶ್ವರದಲ್ಲೂ ಸರಕಾರೀ ಕಛೇರಿಗಳ ಪಿಕೆಟಿಂಗ್ ನಡೆಸಿದರು. ಭುವನೇಶ್ವರದಲ್ಲಿ ಅವರಿಗೆ ಬೆಂಬಲವಾಗಿ ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಜಗನ್ನಾಥ್ ಮಿಶ್ರ, ತಪಶಿ ಪ್ರಹರಾತ್, ನಬ ಮೊಹಂತಿ ಮತ್ತು ಸಂದೇಶ್ ರಾವುತ್ರಾಯ್ ಬಂಧನಕ್ಕೊಳಗಾದರು. ಕಟಕ್ ಮತ್ತಿತರ ಹಲವು ಕಡೆ ಸಿಪಿಐ(ಎಂ) ರಾಸ್ತಾರೋಕೋ ನಡೆಸಿತು.

ಸಿಪಿಐ(ಎಂ), ಎಐಕೆಎಸ್ ಮತ್ತು ಸಿಐಟಿಯು ಮೀನುಗಾರರ ಮಹಾ ಸಂಘಕ್ಕೆ ಬೆಂಬಲವಾಗಿ ಪ್ರಚಾರ-ಪ್ರಕ್ಷೋಭೆ ಮುಂದುವರಿಸಿದ್ದಾರೆ. ಚಿಲ್ಕಾ ಸರೋವರ ಮತ್ತು ಅದರ ಕರಾವಳಿ ಮೀಸಲು ವಲಯದಲ್ಲಿ ಸೀಗಡಿ ಕೃಷಿಯನ್ನು ನಿಷೇಧಿಸಬೇಕು, ಘೇರಿಗಳನ್ನು ಧ್ವಂಸ ಮಾಡಬೇಕು, ಈ ಪ್ರದೇಶದಲ್ಲಿ ಮೀನುಗಾರರ ಹಕ್ಕುಗಳನ್ನು, ಅವರ ಸಹಕಾರಿಗಳ ಲೀಸ್‌ಗಳನ್ನು ಮತ್ತೆ ಕೊಡಬೇಕು ಇತ್ಯಾದಿ ಬೇಡಿಕೆಗಳ ಮೇಲೆ ಹೋರಾಟ ಮುಂದುವರೆಯುತ್ತಿದೆ. ಒರಿಸ್ಸಾ ಸರಕಾರ ಸೀಗಡಿ ಕೃಷಿ ನಿಷೇಧಕ್ಕೆ ಮುಂದಾಗಬೇಕಾಗಿದೆ. ಆದರೆ ಸೀಗಡಿ ವ್ಯಾಪಾರಿಗಳ ಒತ್ತಡವೂ ಹೆಚ್ಚುತ್ತಿದೆ.

(ಕೃಪೆ: ಗಣಶಕ್ತಿ ಆನ್‌ಲೈನ್)

ಈಗ ಪೆಪ್ಸಿ, ಕೋಲಾ ಕ್ರಿಕೆಟ್ ಸ್ವಾಮಿ!



ಇಂದು ಕ್ರಿಕೆಟ್ ಆಟ ನಮ್ಮ ಉಪಖಂಡದಲ್ಲಂತೂ ಪೆಪ್ಸಿ, ಕೋಕಾಕೋಲಾಗಳ ಬಂಧಿಯಾಗುತ್ತಿದೆ. ಈ ಹಗುರ ಪೇಯ ಕಂಪನಿಗಳೇ ನಿಜವಾದ ಕ್ರಿಕೆಟ್ ನಿಯಂತ್ರಣ ಮಂಡಳಿಗಳಾಗಿಬಿಟ್ಟಿವೆ ಎಂದು ಖೇದ ವ್ಯಕ್ತಪಡಿಸಿದ್ದಾರೆ ಭಾರತದ ಮುಖ್ಯ ಚುನಾವಣಾ ಕಮಿಷನರ್ ಹಾಗೂ ಕ್ರಿಕೆಟ್ ಪ್ರೇಮಿ ಡಾ. ಎಂ.ಎಸ್.ಗಿಲ್. ಈಗಿನ ಕ್ರಿಕೆಟ್ ಆಟದ ವ್ಯಾಪಾರೀಕರಣದ ಬಲವಾದ ಟೀಕೆಯನ್ನು ಅವರ ಮಾತುಗಳಲ್ಲೇ ಓದಿ –

ಆಟಗಳಲ್ಲಿ ನಾನು ಮೊದಲು ದೀಕ್ಷೆ ಪಡೆದದ್ದು ಪರ್ವತಾರೋಹಣ ಮತ್ತು ಬಾಕ್ಸಿಂಗ್‌ನಲ್ಲಿ. ಆದರೆ ನಾನು ಬಲಿಬಿದ್ದದ್ದು ಕ್ರಿಕೆಟ್‌ಗೆ. ಅದು ನನ್ನನ್ನು ಬಲವಾಗಿ ಆಕರ್ಷಿಸಿತು.



ಭಾರತ ಕ್ರಿಕೆಟ್ ಟೀಮ್ ದೇಶದ್ದಲ್ಲ, 'ವಿಲ್ಸ್' ಸಿಗರೇಟು ಕಂಪನಿಯದ್ದು!

ಅವು ಮುಗ್ಧ ದಿನಗಳು. ಈಗಿನಂತೆ ಅಬ್ಬರದ ಪ್ರಚಾರ ಇರಲಿಲ್ಲ. ಕ್ರಿಕೆಟ್ ಪ್ರೇಮದಿಂದಷ್ಟೇ ಆಟವಾಡುತ್ತಿದ್ದರು. ಭಾರೀ ದುಡ್ಡಿನ ಪ್ರಶ್ನೆಯಿರಲಿಲ್ಲ, ಜಾಹೀರಾತುಗಳಿರಲಿಲ್ಲ, ಅದಿನ್ನೂ ಸಜ್ಜನರ ಆಟವಾಗಿತ್ತು. ಸದ್ವರ್ತನೆಗೆ ಇನ್ನೊಂದು ಹೆಸರಾಗಿತ್ತು. ಈಗ ಹಾಗಿಲ್ಲ.

ಇಂದು ಕ್ರಿಕೆಟ್, ವಿಶೇಷವಾಗಿ ನಮ್ಮ ಉಪಖಂಡದಲ್ಲಿ ಹಗುರ ಪೇಯಗಳ ಬಂಧಿಯಾಗಿದೆ. ಕೋಕೋಕೋಲಾ ಮತ್ತು ಪೆಪ್ಸಿ ನಿಜವಾದ ಕ್ರಿಕೆಟ್ ಹತೋಟಿ ಮಂಡಳಿಗಳಾಗಿ ಬಿಟ್ಟಿವೆ. ಈ ದೈತ್ಯ ಪ್ರಾಯೋಜಕರು ಆಟಗಾರರನ್ನು ರೂಪಿಸುತ್ತಾರೆ ಅಥವಾ ಕೆಡಿಸುತ್ತಾರೆ. ಪಂದ್ಯಾಟಗಳನ್ನು ನಡೆಸುವವರು ಅವರೇ. ಈಗ ಮೇ - ಜೂನ್ ತಿಂಗಳಲ್ಲೂ ದೊಡ್ಡ ಕ್ರಿಕೆಟ್ ಪಂದ್ಯಗಳಾಗುತ್ತಿವೆ. ಕ್ರಿಕೆಟ್ ಇಂದು ಒಂದು ಮಿಲಿಯಗಟ್ಟಲೆ ರೂಪಾಯಿಗಳ ಉದ್ದಿಮೆಯಾಗಿಬಿಟ್ಟಿದೆ. ವಿಶ್ವಕಪ್ ಫೈನಲ್ ಸಮೀಪಿಸುತ್ತಿದ್ದಂತೆ ಸಟ್ಟಾ ಚಕ್ರ ಭಾರೀ ರಭಸದಿಂದ ತಿರುಗುತ್ತದೆ.

ಕ್ರಿಕೆಟ್‌ನ ವ್ಯಾಪಾರೀಕರಣದಲ್ಲಿ ಎರಡು ದೊಡ್ಡ ನಕಾರಾತ್ಮಕ ಪರಿಣಾಮಗಳಿವೆ. ಒಂದು, ಕ್ರಿಕೆಟ್ಟಿಗರು ಈಗ ಆಟದ ಉಡುಪಿನಲ್ಲಿರುವ ಸಜ್ಜನರಾಗಿ ಉಳಿದಿಲ್ಲ. ಗೆಲ್ಲುವದೇ ಎಲ್ಲವೂ ಆಗಿದೆ. ನೀವು ಒಳ್ಳೆಯ ವಿಧಾನ ಬಳಸಿ ಅಥವಾ ಕೆಟ್ಟ ವಿಧಾನವನ್ನೇ ಬಳಸಿ, ಪರವಾಗಿಲ್ಲ. ಏಕೆಂದರೆ ಯೇನಕೇನ ಪ್ರಕಾರೇಣ ನೀವು ಗೆಲ್ಲಲೇಬೇಕು. ಶಾಪ ಹಾಕುವುದು, ಗುರ್ರೆನ್ನುವುದು ಎಲ್ಲಾ ಸಾಮಾನ್ಯ ವಿಷಯ. ಕ್ಯಾಚ್ ಹಿಡಿಯದೆ ನೆಲ ತಾಗಿದರೂ ಅದನ್ನು ಕ್ಯಾಚೆಂದು ವಾದಿಸಬೇಕು: ಅಂಪೈರ್‌ಗಳು ತಪ್ಪು ನಿರ್ಣಯ ಕೈಗೊಳ್ಳುವಂತೆ ಒತ್ತಡ ಹಾಕಲಾಗುತ್ತಿದೆ. ಎರಡನೆಯದಾಗಿ, ಆಟಗಾರರು ದುಡ್ಡಿನ ಆಸೆಗೆ ಸತತವಾಗಿ ಆಟವಾಡುತ್ತಾರೆ. ಬೇಗನೇ ತಮ್ಮ ಸಾಮರ್ಥ್ಯ ಕಳಕೊಳ್ಳುತ್ತಾರೆ. ರೇಸಿನ ಕುದುರೆಗಳಿಗೂ ಆಗಾಗ ವಿಶ್ರಾಂತಿ ಕೊಡುತ್ತಾರೆ ತಾನೇ!

ಕ್ರಿಕೆಟ್‌ನಲ್ಲೂ ಇಂದು ನಿಯಮಗಳೂ ಬ್ಯಾಟ್ಸ್‌ಮನ್‌ಗಳ ಪರವಾಗಿ ಬದಲಾಗಿವೆ. ಬ್ಯಾಟ್ಸ್ ಮನ್‌ಗಳು, ಯುದ್ಧರಂಗದಲ್ಲಿರುವ ಸೈನಿಕರಂತೆ ಕಾಣುತ್ತಾರೆ.

ಕ್ರಿಕೆಟ್‌ನಲ್ಲಿರುವ ಕಂಪನಿಗಳ ಹಣ ಭಾರತದ ಕ್ರೀಡಾರಂಗದಲ್ಲಿ ಒಂದು ರೀತಿಯ ವರ್ಣದ್ವೇಷಕ್ಕೆ ಕಾರಣವಾಗುತ್ತಿದೆ. ಜನಸಾಮಾನ್ಯರು ಆಡುವ ಆಟಗಳಲ್ಲಿ ಹಾಕಿ, ಫುಟ್‌ಬಾಲ್, ವಾಲಿಬಾಲ್, ಅಥ್ಲೆಟಿಕ್ಸ್‌ನಲ್ಲಿ ಹಣವಿಲ್ಲ. ಕ್ರಿಕೆಟ್‌ನಲ್ಲಿ ಮಾತ್ರ ಭರ್ಜರಿ ಹಣ. ಆದ್ದರಿಂದ ನಾವು ಇನ್ನೆಂದೂ ಇನ್ನೊಬ್ಬ ಮಿಲ್ಖಾಸಿಂಗ್‌ನನ್ನು ಕಾಣೆವು. ಕ್ರಿಕೆಟ್‌ನಲ್ಲಿನ ದೊಡ್ಡ ಕಂಪನಿಗಳ ಹಣವೂ ಕೇವಲ ಕೆಲವೇ ಅಬ್ಬರ ಗಿಟ್ಟಿಸಿದ ಆಟಗಾರರಿಗೆ ಮಾತ್ರ. ಬಡ ಮೊಹಂತಿ ಎಂದೂ ಅಜರ್ ಅಥವಾ ಸಚಿನರಷ್ಟು ಶ್ರೀಮಂತನಾಗಲು ಸಾಧ್ಯವಿಲ್ಲ.

ಎಲ್ಲಿ ಹಣದ ಭರಾಟೆಯಿದೆಯೋ ಅಲ್ಲಿ ನಾಟಕ ಆಡುವ ಪ್ರವೃತ್ತಿಯೂ ಇರುತ್ತದೆ. ಇದು ಕ್ರಿಕೆಟ್‌ನಂತ ಆಟಕ್ಕೆ ಅಪಾಯಕಾರಿಯಾಗಬಲ್ಲದು. ಕ್ರಿಕೆಟ್ ಆಸ್ಥಾನಗಳಲ್ಲಿರುವವರು ಮಾತ್ರವಲ್ಲ ಮಾಧ್ಯಮಗಳಲ್ಲಿ ಅಭಿಪ್ರಾಯ ರೂಪಿಸುವವರು, ಎಕ್ಸ್‌ಪರ್ಟ್‌ಗಳು ಎನಿಸಿಕೊಂಡವರು ಇವರೆಲ್ಲಾ ತಮ್ಮದೇ ಅಜೆಂಡಾಗಳನ್ನು, ವ್ಯಕ್ತಿಗಳನ್ನು ಎತ್ತಿ ಹಿಡಿಯುವಂತೆ ಕಾಣುತ್ತದೆ. ಯಾರ್ಕ್‌ಶೈರ್‌ನ ಜೇಫ್ ಬಾಯ್ಕಾಟ್ ಮಾತ್ರವೇ ಇದ್ದದ್ದನ್ನು ಇದ್ದಹಾಗೆ ಹೇಳುವ ಅಂಕಣಕಾರ. ಈ ಕಾರಣಕ್ಕೇ ನಾನು ಲಾಲಾ ಅಮರ್‌ನಾಥರನ್ನು ಮೆಚ್ಚಿಕೊಂಡದ್ದು. ತಂಡದಲ್ಲಿ ಸ್ಥಾನ ಪಡೆಯದಿದ್ದರೂ ಪರವಾಗಿಲ್ಲ ಕ್ರಿಕೆಟ್ ವ್ಯವಸ್ಥೆಯನ್ನು ಎದುರಿಸಿ ನಿಲ್ಲುವ ಧೈರ್ಯ ಆತನಿಗಿತ್ತು. ಅದೇ ರೀತಿ ಬಿಶನ್‌ಸಿಂಗ್ ಬೇದಿ ಕೂಡಾ.

ಈಗಿನ ಆಟಗಾರರಲ್ಲಿ ಸಚಿನ್‌ನ ಪ್ರತಿಭೆ ನನಗೆ ಮೆಚ್ಚುಗೆಯಾಗಿದೆ. ಗಂಗೂಲಿ ಮತ್ತು ದ್ರಾವಿಡ್ ಪ್ರತಿಭೆ ಕಮ್ಮಿಯೇನಿಲ್ಲ, ಹೌದೆ?

(ಕೃಪೆ: 'ಟೈಂಸ್ ಇಂಡಿಯಾ')

'ದೇಶದ್ರೋಹಿ' ಎನ್ನುವ ಮುನ್ನ......

"ಆತ ಪಾಕಿಸ್ತಾನಿ!
ಆತ ಅಫಘಾನಿಸ್ತಾನಿ!
ಆತ ಧರ್ಮಕ್ಕಾಗಿ ಸಾಯಲು ಬಂದ ಮುಜಾಹಿದೀನ್!

ಯುದ್ಧದಲ್ಲಿ ಅವನೇ ಗೆಲ್ಲಬೇಕು, ಭಾರತ ಸೋಲಬೇಕು ಎಂಬುದು ಕಾಶ್ಮೀರಿ ದೇಶದ್ರೋಹಿಯ ಹಾರೈಕೆ. ಅದಕ್ಕಾಗಿ ಆತ ಪ್ರಾರ್ಥಿಸುತ್ತಾನೆ. ಉಪವಾಸವಿದ್ದು, ಅದರಲ್ಲಿ ಉಳಿಸಿದ ಹಣ ಪಾಕಿಸ್ತಾನಕ್ಕೆ ಕಳಿಸುತ್ತಾನೆ, ಕಡಿಮೆ ಬಿದ್ದರೆ, ಯುದ್ಧಕ್ಕೆ ತಾನೇ ಹೊರಡುತ್ತಾನೆ, ತನ್ನ ಮಕ್ಕಳನ್ನು ಕಳಿಸುತ್ತಾನೆ. ನಾವು?

ನಾವೂ ನಮ್ಮ ಮಕ್ಕಳನ್ನು ಕಳಿಸಿದ್ದೇವೆ. ಯುದ್ಧಕ್ಕೆ ಕಳಿಸಿ ಮರೆತಿದ್ದೇವೆ....... ದೇಶದ್ರೋಹಿ ಕಾಶ್ಮೀರಿಯಿಂದ ನಾವು ಪಾಠ ಕಲಿಯಬೇಕಿಲ್ಲ. ಆದರೆ ಇವತ್ತಾದರೂ ನಾವು ಎಚ್ಚರಗೊಳ್ಳದಿದ್ದರೆ ಅದೇ ಕಾಶ್ಮೀರಿ ನಮಗೆ ಪಾಠ ಹೇಳುವ ದಿನ ದೂರವಿಲ್ಲ, ಅವನಿಗೆ ಧಿಕ್ಕಾರವಿರಲಿ"

ಇದು ಯಾರ ಉದ್ಗಾರವಿರಬಹುದು ಊಹಿಸಬಲ್ಲಿರಾ?

ದಿನಂಬೆಳಗೆ ಮೂಲೆ ಮೂಲೆಗಳಲ್ಲಿ ನಡೆಯುವ ಭಗವಾಧ್ವಜದ 'ಶಾಖೆ'ಗಳಲ್ಲಿನ ಚೆಡ್ಡಿ ಪ್ರಚಾರಕನ ಎಂದಿನ ಪ್ರಚೋದಕ ಮಾತುಗಳು ಎಂದು ನೀವು ಬದಿಗೆ ತಳ್ಳಬಹುದು. ಇಲ್ಲ, ಇವು ನಮ್ಮ ರಾಜ್ಯದ ಜವಾಬ್ದಾರಿಯುತನೆನಿಸಿಕೊಳ್ಳುವ ಪತ್ರಿಕಾ ಸಂಪಾದಕನ ಮಾತುಗಳು. 'ಹಾಯ್ ಬೆಂಗಳೂರ್' ಪತ್ರಿಕೆಯ 'ಸಾರಥ್ಯ'ದಲ್ಲಿರುವ ರವಿ ಬೆಳಗೆರೆಯವರ ಮಾತುಗಳು.

ಕಾರ್ಗಿಲ್‌ಗೆ ಸ್ವತಃ ಹೋಗಿ 'ಕನ್ನಡದ ಪ್ರಪ್ರಥಮ ಪ್ರತ್ಯಕ್ಷ ಯುದ್ಧ ವರದಿ' ಕಳಿಸಿದ ಹೆಗ್ಗಳಿಕೆ ಇವರದ್ದು. ಅದಕ್ಕೆ ಹಾರ್ದಿಕ ಅಭಿನಂದನೆ. ಆದರೆ ಅವರ ಪತ್ರಿಕೆಯ ಎರಡು ಸಂಚಿಕೆಗಳಲ್ಲಿ ಪ್ರಕಟವಾದ 'ವರದಿ'ಗಳ ಹೂರಣ ನೋಡಿದರೆ ಇಷ್ಟಕ್ಕಾಗಿ ಅಷ್ಟು ದೂರ ಹೋಗಬೇಕಿತ್ತೇ ಎಂಬ ಪ್ರಾಮಾಣಿಕ ಸಂದೇಹ ಏಳುತ್ತದೆ. ಏಕೆಂದರೆ ಆ 'ವರದಿ'ಗಳಲ್ಲಿ ಕಾಣಬರುವ 'ಕಾಶ್ಮೀರಿ ದೇಶದ್ರೋಹಿ'ಯ ಚಿತ್ರಣವನ್ನು - ಆತ ಪಾಕಿಸ್ತಾನ ಕ್ರಿಕೆಟ್‌ನಲ್ಲಿ ಗೆದ್ದಾಗ ಹಬ್ಬ ಆಚರಿಸುವುದು ಇತ್ಯಾದಿ ಇತ್ಯಾದಿಗಳಂತೂ ಇಟ್ಟಿಗೆ ಯಾತ್ರೆ, ಅಡ್ವಾಣಿಯವರ ರಥಯಾತ್ರೆಯ ದಿನಗಳಿಂದ ನಾವು ಕೇಳಿಕೊಂಡು ಬಂದ ಮಾತುಗಳೇ. ಕಾಶ್ಮೀರಿಗಳ 'ದೇಶದ್ರೋಹ' ವನ್ನು ರವಿಯವರು 'ಪ್ರತ್ಯಕ್ಷ' ಕಂಡರೋ ಎಂಬುದು ಅವರ ಲೇಖನದಿಂದ ತಿಳಿಯುವುದಿಲ್ಲ. ಇವರು ಅಲ್ಲಿದ್ದ ಸಮಯದಲ್ಲಿ ಪ್ರತ್ಯಕ್ಷ ಕಾಣಲು ಸಾಧ್ಯವೂ ಇಲ್ಲ ಅಥವಾ ಅವರಿಗೆ ಅಲ್ಲಿ ಆಶ್ರಯ ನೀಡಿದ ಪಂಡಿತ ಕುಟುಂಬದ ಗೆಳೆಯರ ಮಾತುಗಳ ಗಿಳಿಪಾಠವನ್ನು ಪ್ರತ್ಯಕ್ಷದರ್ಶಿ ವರದಿಯ ರೂಪದಲ್ಲಿ ನೀಡಿದ್ದಾರೋ.

ಈ ಮಾತು ಎಲ್ಲಾ ಕಾಶ್ಮೀರಿಗಳಿಗೂ ಅನ್ವಯಿಸುವುದಿಲ್ಲ ಎಂದು ಹೇಳಿದರೂ ಅವರ ಈ 'ವರದಿ'ಗಳು ಬಿಂಬಿಸುವುದಂತೂ ಇದನ್ನೇ.

ಇರಲಿ, ರವಿ ಬೆಳಗೆರೆಯವರ ವರದಿಗಳನ್ನು ನಂಬುವುದಾದರೆ ಒಂದು ಸಂದೇಹವಂತೂ ಖಂಡಿತಾ ಕಾಣುತ್ತದೆ. ಶ್ರೀನಗರದ, ಬಹುಶಃ ಇಡೀ ಕಾಶ್ಮೀರದ ಜನ ಭಾರತದ ಭಾಗವಾಗಿರಲು ಬಯಸುತ್ತಿಲ್ಲವೇ? ಆದರೆ ಕಳೆದ ವರ್ಷವಷ್ಟೇ ಈ 'ದೇಶದ್ರೋಹಿ'ಗಳು ದೇಶದ ಇತರೆಡೆಗಳಲ್ಲಿ ಕಂಡುಬಂದಷ್ಟೇ ಉತ್ಸಾಹದಿಂದ ಲೋಕಸಭೆ ಚುನಾವಣೆಗಳಲ್ಲಿ ಭಾಗವಹಿಸಿದ್ದರಲ್ಲ! ಅದಿರಲಿ, ಐವತ್ತೆರಡು ವರ್ಷಗಳ ಹಿಂದೆ ಸ್ವಾತಂತ್ರ್ಯ ಬಂದ ಹೊಸದರಲ್ಲಿ ಹೊಸದಾಗಿ ಹುಟ್ಟಿಕೊಂಡ ಪಾಕಿಸ್ತಾನದ ಕುಮ್ಮಕ್ಕಿನಿಂದ ಏರಿಬಂದ 'ಮುಜಾಹಿದೀನ್'ಗಳನ್ನು ಕೈಯಲ್ಲಿ ಶಸ್ತ್ರ ಹಿಡಿದು ಮೊದಲು ಎದುರಿಸಿದ್ದು ಈ ಸಾಮಾನ್ಯ ಕಾಶ್ಮೀರಿಯೇ ತಾನೆ? ಆಗ ಜಮ್ಮು-ಕಾಶ್ಮೀರ ಭಾರತದ ಭಾಗವಾಗಿರಲಿಲ್ಲ. ಸ್ವತಂತ್ರ ರಾಜಪ್ರಭುತ್ವವಾಗಿತ್ತು. ಅಲ್ಲಿಯ ಹಿಂದೂ ರಾಜ ಭಾರತಕ್ಕೆ ಸೇರಬೇಕೆಂಬ ಬೇಡಿಕೆಯನ್ನು ತಿರಸ್ಕರಿಸಿದ್ದ. ಶೇಖ್ ಅಬ್ದುಲ್ಲಾರವರು ಹಾಗೂ ಅವರ ನ್ಯಾಷನಲ್ ಕಾನ್ಫರೆನ್ಸ್ ಚಳುವಳಿ ಜಾತ್ಯಾತೀತ ಭಾರತದ ಭಾಗವಾಗಲು ಬಯಸಿದ್ದರು. ಅತಿಕ್ರಮಣಕೋರರನ್ನು ಕಂಡು ಭಾರತದೊಡನೆ ಸೇರಬೇಕೆಂಬ ಒತ್ತಾಯಕ್ಕೆ ಕೊನೆಗೂ ಕಾಶ್ಮೀರದ ಆಗಿನ ರಾಜ ಮಣಿದ ನಂತರವೇ ಸಂವಿಧಾನದ ಕಲಮು 370 ರ ಪ್ರಕಾರ ಕಾಶ್ಮೀರ ಭಾರತದ ಭಾಗವಾದದ್ದು, ಭಾರತದ ಸೈನ್ಯ ಹೋದದ್ದು, ಪಾಕಿಸ್ತಾನೀ ಆಳರಸರ ಮೊದಲ ಕುತಂತ್ರ ವಿಫಲವಾದದ್ದು. ಸ್ವಂತ ಇಚ್ಛೆಯಿಂದ ಆಗ ಭಾರತವನ್ನು ಸೇರಿಕೊಂಡ ಜನ ಈಗ 'ದೇಶದ್ರೋಹಿ'ಗಳಾಗಿ ಬಿಟ್ಟಿದ್ದಾರೆಯೇ? ಆಗಿದ್ದರೆ ಏಕೆ ಎಂಬುದು ಪ್ರಜಾಪ್ರಭುತ್ವವಾದಿಗಳಿಗೆಲ್ಲಾ ಒಂದು ಮಹತ್ವದ ಪ್ರಶ್ನೆಯಾಗಬೇಕಲ್ಲವೇ?

"ಈ ಕಾಶ್ಮೀರ ಎಂಬ ಊರು ಅಕ್ಷರಶಃ ಭೂಲೋಕ ಸ್ವರ್ಗದಂತಹುದು. ಇಲ್ಲಿನ ಹವೆಗೆ ಗಂಧರ್ವ ಸ್ತ್ರೀಯೊಬ್ಬಳ ಚಾಂಚಲ್ಯಭರಿತ ಮೋಹಕತೆಯಿದೆ. ಜೂನ್ ತಿಂಗಳಲ್ಲಿ ಹೀಗೆ ಚುರುಗುಟ್ಟುವ ಬಿಸಿಲಿನಲ್ಲಿ ಕೆನ್ನೆ ಕೆಂಪೇರಿಸಿಕೊಳ್ಳುವ ಕಾಶ್ಮೀರದ ಕಣಿವೆ, ಅಕ್ಟೋಬರ್ ಕಾಲಿಟ್ಟಿತೆಂದರೆ ಸಾಕು ಮೈತುಂಬ ಮಂಜಿನ ಚಾದರ ಹೊದ್ದು ಆಕಾಶದೊಂದಿಗೆ ಆಲಿಂಗನಕ್ಕೆ ಬೀಳುತ್ತದೆ. ನಿಜಕ್ಕೂ ಇದೊಂದು WONDERFUL LAND . ಇಲ್ಲಿನ ಸಿಂಧೂನದಿ, ಜೆಹ್ಲಮ್(ಝೀಲಮ್) ಹೊಳೆ, ಈ ಕಣಿವೆಯನ್ನು ಛೇದಿಸಿ ನುಗ್ಗುವ ಚಿನಾಬ್, ರಾವಿ, ಝುಸ ರ್-ಇಲ್ಲಿನ ಅದ್ಭುತ ಕೊಳಗಳು, ಸರೋವರುಗಳು, ಇಲ್ಲಿನ ಹುಡುಗಿಯರ ಕೆನ್ನೆಗೆಂಪು, ಹುಡುಗರ ಕಡುಗಪ್ಪು ಗಡ್ಡ, ಹೊಳೆವ ಕಣ್ಣು... ಎಲ್ಲ ಸುಂದರ.

ಆದರೆ ಕಾಶ್ಮೀರಕೊಳ್ಳದ ಪ್ರಜೆಗಳ ಮನಸ್ಸು ಮಾತ್ರ ಪಾಕಿಸ್ತಾನದ ಕಡೆಗೇ!" ಎಂದಿದ್ದಾರೆ ರವಿ. ಎಲ್ಲ ಸುಂದರ, ಆದರೆ ಅಲ್ಲಿಯ ಜನ ಮಾತ್ರ ದ್ರೋಹಿಗಳು ಎಂಬ ಮಾತಿನ ಹಿಂದೆ ಕಂಡು ಬರುವ ನಮ್ಮ ನಿಲುಮೆ ಎಂದರೆ ಸುಂದರ ಕಿರೀಟ ಕಾಶ್ಮೀರ ನಮಗೆ ಬೇಕು, ಅಲ್ಲಿಯ ಜನಗಳ ಆಕಾಂಕ್ಷೆಗಳು ನಮಗೆ ಬೇಡ ಎಂದೂ ಆಗುವುದಿಲ್ಲವೇ? ಅಲ್ಲಿ ಭಾರತಿಯನೆಂದು ಹೇಳಿಕೊಳ್ಳಲು ನಿಜವಾಗಿಯೂ ಅವಮಾನವಾಗುತ್ತಿದ್ದರೆ ಅದರಲ್ಲಿ ನಮ್ಮ ಪಾತ್ರವೂ ಇರಬಹುದೇ ಎಂದೂ ಯೋಚಿಸಬೇಕಲ್ಲವೇ?

ಇನ್ನೊಂದು ಮಾತು. ಕಾರ್ಗಿಲ್‌ನಲ್ಲಿ ಆ ಶಿಖರವನ್ನು ಮತ್ತೆ ವಶಪಡಿಸಿಕೊಳ್ಳಲಾಗಿದೆ, ಈ ಶಿಖರವನ್ನು ವಶಪಡಿಸಿಕೊಳ್ಳಲಾಗಿದೆ ಎಂದೆಲ್ಲಾ ಸುದ್ದಿಗಳು ಈಗ ಬರುತ್ತಿವೆ. ಆದರೆ ಈ ಶಿಖರಗಳು ನಮ್ಮ ಕೈತಪ್ಪಿ ಹೋದದ್ದು ಯಾವಾಗ? ಯಾಕೆ ಎಂಬ ಪ್ರಶ್ನೆಗಳಿಗೆ ಉತ್ತರ ಸಿಗಲಿಲ್ಲ(ರವಿ ಬೆಳಗೆರೆಯವರ ವರದಿಗಳಲ್ಲೂ ಸಿಕಿಲ್ಲ). ಹೀಗೆ ಕೈತಪ್ಪಿ ಹೋದ ಸುದ್ದಿಗಳು ದೊರೆತದ್ದೂ ಈ ಪ್ರದೇಶದಲ್ಲಿ ದನಕಾಯುವ ಹುಡುಗರಿಂದ (ಅವರು ಪಂಡಿತ ಕುಟುಂಬಗಳವರಲ್ಲ) ಎಂಬ ಸುದ್ದಿಯನ್ನು ನಾವು ರವಿ ಬೆಳಗೆರೆಯವರಂತಹ ಪತ್ರಕರ್ತರಿಂದಲೇ ತಿಳಿದಿದ್ದೇವೆ.

ಮಾರುಕಟ್ಟೆಯೇ ಎಲ್ಲವನ್ನೂ ನಿರ್ಧರಿಸುತ್ತದೆ ಎಂಬ ನಂಬಿಕೆಯ ಈ 'ಉದಾರೀಕರಣ ದ ದಿನಗಳಲ್ಲಿ' ದೇಶಭಕ್ತಿಯ ಪ್ರದರ್ಶನದ ಹಿಂದೆಯೂ ವ್ಯಾಪಾರೀ ಮನೋಭಾವವಿದೆಯೆಂದು ಅರ್ಥವಾಗುವಂತದ್ದೇ. ಆದರೆ ನಮ್ಮ ದೇಶಭಕ್ತಿಯ ಪ್ರದರ್ಶನಕ್ಕೆ ಇತರರನ್ನು ದೇಶದ್ರೋಹಿ ಗಳೆನ್ನುವ ಅಗತ್ಯವಿದೆಯೇ?

– ಕೆ.ವಿ.



ಕಾರ್ಗಿಲ್, ದ್ರಾಸ್, ಬಟಾಲಿಕ್‌ನಲ್ಲಿ ಕಾರ್ಯಾಚರಣೆಯಿಂದಾಗಿ ಸಾವಿರಾರು ಮಂದಿ ಮನೆ-ಮಠ ಬಿಟ್ಟು ಹೋಗಬೇಕಾಗಿದೆ. ಹೊರವಲಯದಲ್ಲಿನ ಒಬ್ಬ ಕಾಶ್ಮೀರಿ ನಿರಾಶ್ರಿತೆ ತನ್ನ ಮಗುವಿನೊಂದಿಗೆ

Reg. No. 17015/64 KRNM/BGS-405 MAG(2) PRB DECR 319-79/79 AIKYARANGA WEEKLY
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು - 27 ಫೋನ್ ನಂ. 2236462,
ಮುದ್ರಣ: ಹಸಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ